ಜನಶಕ್ತಿ

ದುಡಿಯುವ ಜನರ ಪ್ರಾಣಮಿತ್ರ
ಕನ್ನಡ ವಾರಪತ್ರಿಕೆ

ಚೆಂಡೂರು ಗ್ರಾಮದ
ಜಂಗಾಲಪಲ್ಲಿ ಈಶ್ವರಮ್ಮ

ನೋಟು ಹುತಾತ್ಮರು



ಸಂಪುಟ 10 ಸಂಚಿಕೆ 48 ನವೆಂಬರ್ 27, 2016 ಪುಟ 16 ರೂ.10/-
Blog : janashakthi.wordpress.com e-mail : js_weekly@yahoo.com



ಯಶಸ್ವಿ ಜೈಲು ಭರೋ
ರಾಜ್ಯಾದ್ಯಂತ ಸಾವಿರಾರು ಬಂಧನ

ಭೂಮಿ-ವಸತಿಗಾಗಿ
ಜೈಲ್ ಭರೋ
15 ನವೆಂಬರ್ 2016



ಕೋಮುವಾದದ ವಿರುದ್ಧ ಎಡಪಕ್ಷಗಳ ಸಮಾವೇಶ



500/1000 ನೋಟು ರದ್ದತಿ ಹುತ್ತವ ಬಡಿದರೆ ಹಾವು ಸಾಯುವುದೇ ?

ಅನೈತಿಕ ಅಸಹ್ಯ ಮದುವೆಗೆ ಕಡಿವಾಣ ಏಕಿಲ್ಲ ?

೭೦–೮೦ರ ದಶಕ ಮರುಕಳಿಸುತ್ತಿದೆ : ಮಾಲಗತ್ತಿ

ಪರ್ಯಾಯ ವ್ಯವಸ್ಥೆ ರೂಪಿಸುವ ವರೆಗೆ ಅಥವ ಡಿಸೆಂಬರ್ 30ರ ವರೆಗೆ 1000/ 500 ರೂಪಾಯಿ ನೋಟುಗಳ ಬಳಕೆಗೆ ಅವಕಾಶ ನೀಡಬೇಕು

–ಸಿಪಿಐ(ಎಂ) ಪೊಲಿಟ್‌ಬ್ಯುರೊ

1000 ಮತ್ತು 500 ರೂಪಾಯಿಗಳ ನೋಟುಗಳನ್ನು ಹಿಂತೆಗೆದುಕೊಂಡಿರುವ ಸರಕಾರದ ಕ್ರಮದಿಂದಾಗಿ ಪಾವತಿ ಮತ್ತು ಇತ್ಯರ್ಥದ ವ್ಯವಸ್ಥೆ ಸಂಪೂರ್ಣವಾಗಿ ಅಸ್ತವ್ಯಸ್ತಗೊಂಡಿದೆ. ಇದು ಎಲ್ಲ ನಾಗರಿಕರನ್ನು ಒಂದಿಲ್ಲ ಒಂದು ರೀತಿಯಲ್ಲಿ ತಟ್ಟಿದೆ ಎಂದು ದೇಶದ ವಿವಿಧೆಡೆಗಳಿಂದ ಬರುತ್ತಿರುವ ವರದಿಗಳು ತೋರಿಸುತ್ತಿವೆ. ಆದ್ದರಿಂದ ಅಗತ್ಯ ಕರೆನ್ಸಿ ನೋಟುಗಳ ಲಭ್ಯತೆ ಮತ್ತು ಹೊಸ ನೋಟುಗಳಿಗೆ ಅನುಗುಣವಾಗಿ ಎಟಿಎಂಗಳ ಮರುವ್ಯವಸ್ಥೆ ಆಗುವ ವರೆಗೆ ಪರ್ಯಾಯ ವ್ಯವಸ್ಥೆಯನ್ನು ರೂಪಿಸಬೇಕು, ಸರಕಾರವೇ ನಿಗದಿಪಡಿಸಿರುವ ಡಿಸೆಂಬರ್30ರ ಸಮಯ ಮಿತಿಯ ವರೆಗೆ 500 ಮತ್ತು 1000ದ ನೋಟುಗಳಲ್ಲಿ ವ್ಯವಹಾರ ನಡೆಸಲು ಜನಗಳಿಗೆ ಅವಕಾಶ ಕೊಡಬೇಕು ಎಂದು ಸಿಪಿಐ(ಎಂ) ಪೊಲಿಟ್‌ಬ್ಯುರೊ ಆಗ್ರಹಿಸಿದೆ.

ಅಲ್ಲದೆ ಕೇರಳ ಮತ್ತು ತ್ರಿಪುರ ಮುಖ್ಯಮಂತ್ರಿಗಳು ಪರ್ಯಾಯ ವ್ಯವಸ್ಥೆ ದೃಢವಾಗಿ ಜಾರಿಗೊಳ್ಳುವ ವರೆಗೆ 500 ಮತ್ತು 1000 ರೂ.ಗಳ ನೋಟುಗಳನ್ನು ಸ್ವೀಕರಿಸಲು ತಮ್ಮ ರಾಜ್ಯ ಸರಕಾರಗಳಿಗೆ ಅನುಮತಿ ನೀಡಬೇಕೆಂದು ಮುಂದಿಟ್ಟಿರುವ ವಿನಂತಿಯನ್ನು ಒಪ್ಪಬೇಕು ಎಂದೂ ಪೊಲಿಟ್‌ಬ್ಯುರೊ ಕೇಳಿದೆ. ಇತರ ಬಿಜೆಪಿಯೇತರ ರಾಜ್ಯಸರಕಾರಗಳೂ ಕೂಡ ಈ ನೋಟು ಹಿಂಪಡಿಕೆಯಿಂದ ತಂತಮ್ಮ ರಾಜ್ಯಗಳಲ್ಲಿ ಕಷ್ಟಪಡುತ್ತಿರುವ ಜನರಿಗೆ ಪರಿಹಾರ ಒದಗಿಸಲು ಇಂತಹ ಕ್ರಮಗಳನ್ನು ಕೈಗೊಳ್ಳುತ್ತವೆ ಎಂದು ಅದು ನಿರೀಕ್ಷೆ ವ್ಯಕ್ತಪಡಿಸಿದೆ.

ಗ್ರಾಮೀಣ ಪ್ರದೇಶಗಳಲ್ಲಿ ಪರಿಸ್ಥಿತಿ ಇನ್ನಷ್ಟು ಗಂಭೀರವಾಗಿದೆ. ಹಲವೆಡೆಗಳಲ್ಲಿ ಮಾರುಕಟ್ಟೆಗಳು ಮುಚ್ಚಿವೆ. ಜನಗಳಿಗೆ ಕನಿಷ್ಟ ಆವಶ್ಯಕತೆಗಳನ್ನು ಖರೀದಿಸಲು, ಜೀವವುಳಿಸುವ ಔಷಧಿ ಇತ್ಯಾದಿಗಳನ್ನು ಖರೀದಿಸಲೂ ಆಗುತ್ತಿಲ್ಲ. ನಮ್ಮ ಜನಗಳಲ್ಲಿ ಹೆಚ್ಚಿನವರು ಬ್ಯಾಂಕಿಂಗ್ ಮತ್ತು ನಗದೇತರ ವ್ಯವಸ್ಥೆಯ ಹೊರಗೆ ಇರುವವರು. ಕೃಷಿ ಕಾರ್ಮಿಕರು, ಮೀನುಗಾರರು, ದಿನಗೂಲಿಯವರು, ತರಕಾರಿ ಮಾರುವವರು, ಟ್ರಕ್‌ಡ್ರೈವರ್‌ಗಳು ಮುಂತಾದ ಹಲವಾರು ಜನವಿಭಾಗಗಳು ಇದರಲ್ಲಿ ಸೇರಿವೆ. ಇವರೆಲ್ಲರೂ ತೊಂದರೆ ಅನುಭವಿಸುತ್ತಿದ್ದಾರೆ ಎಂದಿರುವ ಸಿಪಿಐ(ಎಂ) ಪೊಲಿಟ್‌ಬ್ಯುರೊ ಈ ಕ್ರಮ ಪ್ರಧಾನ ಮಂತ್ರಿಗಳು ಹೇಳಿರುವ ನಾಲ್ಕು ಗುರಿಗಳನ್ನೂ ಕೂಡ, ಅಂದರೆ, ಕಪ್ಪು ಹಣ, ಭ್ರಷ್ಟಾಚಾರ, ನಕಲಿ ನೋಟುಗಳು ಮತ್ತು ಭಯೋತ್ಪಾದನೆಗೆ ಹಣ ಪೂರೈಕೆಯ ಮೇಲೆ ದಾಳಿಯ ಗುರಿಗಳನ್ನು ಕೂಡ ಈಡೇರಿಸುವುದಿಲ್ಲ ಎಂದಿದೆ.

ಆರ್ಥಿಕ ವ್ಯವಸ್ಥೆಯಲ್ಲಿ ಉಂಟಾಗುತ್ತಿರುವ ಕಪ್ಪು ಹಣದ ಬಹುಪಾಲು ವಿದೇಶಿ ಕರೆನ್ಸಿಯಲ್ಲಿ ಸಾಗರದಾಚೆಗಿನ ಖಾತೆಗಳಲ್ಲಿ ಜಮಾ ಆಗುತ್ತಿವೆ. ಇದನ್ನು ಹಿಂದಕ್ಕೆ ತರಲು ಯಾವುದೇ ಪ್ರಯತ್ನ ನಡೆದಿಲ್ಲ. ಕಪ್ಪು ಹಣದಲ್ಲಿ ನಗದು ಕೇವಲ 6ಶೇ. ಮಾತ್ರ. ಅಲ್ಲದೆ ರಾಷ್ಟ್ರೀಯ ತನಿಖಾ ಸಂಸ್ಥೆ(ಎನ್‌ಐಎ) ಪರವಾಗಿ ಇಂಡಿಯನ್ ಸ್ಟಾಟಿಸ್ಟಿಕಲ್ ಇನ್‌ಸ್ಟಿಟ್ಯುಟ್, ಕೊಲ್ಕತ ನಡೆಸಿರುವ ಅಧ್ಯಯನದ ಪ್ರಕಾರ ಈಗ ಹಿಂತೆಗೆದುಕೊಂಡಿರುವ ಕರೆನ್ಸಿಗಳಲ್ಲಿ 0.028 ಶೇ. ಮಾತ್ರ ನಕಲಿ ನೋಟುಗಳು.

ಕಪ್ಪು ಹಣದ ಮುಖ್ಯ ಮೂಲಗಳ ಮೇಲೆ ದಾಳಿ ನಡೆಸಿಯೇ ಇಲ್ಲ

ಪಾರ್ಟಿಸಿಪೇಟರಿ ನೋಟ್‌ಗಳು ಮತ್ತು ತೆರಿಗೆ ತಪ್ಪಿಸುವ ಪ್ರದೇಶಗಳ ಮೂಲಕ ಹಣದ ರವಾನೆ ಕಪ್ಪು ಹಣವನ್ನು ಬಿಳಿ ಮಾಡುವ ಮೂಲ ದಾರಿಗಳು. ಅವನ್ನು ಮುಟ್ಟಿಯೇ ಇಲ್ಲ. ಕಪ್ಪು ಹಣವನ್ನು ಉತ್ಪತ್ತಿಯಾಗುವ ಮೂಲಗಳಾದ ರಿಯಲ್ ಎಸ್ಟೇಟ್ ಮುಂತಾದವುಗಳನ್ನು ಹತ್ತಿಕ್ಕುವ ಯಾವುದೇ ಪ್ರಯತ್ನವನ್ನು ನಡೆಸಿಲ್ಲ ಎಂಬ ಸಂಗತಿಯತ್ತ ಸಿಪಿಐ(ಎಂ) ಪೊಲಿಟ್‌ಬ್ಯುರೊ ಗಮನ ಸೆಳೆದಿದೆ.

ಹಲವು ರಾಜ್ಯಗಳಲ್ಲಿ ಸ್ಥಳೀಯ ಬಿಜೆಪಿ ಘಟಕಗಳು ಪ್ರಧಾನ ಮಂತ್ರಿಗಳ ಪ್ರಕಟಣೆಯ ಕೆಲವೇ ಗಂಟೆಗಳ ಮೊದಲು 500 ಮತ್ತು 1000ದ ನೋಟುಗಳಲ್ಲಿ ಅಪಾರ ಹಣವನ್ನು ಜಮಾ ಮಾಡಿವೆ ಎಂಬುದನ್ನು ವರದಿಗಳು ತೋರಿಸಿವೆ. ಈ ವಿಷಯದಲ್ಲಿ ಪಶ್ಚಿಮ ಬಂಗಾಲದ ಬಿಜೆಪಿ ಘಟಕದ ಬಗ್ಗೆ ಮೂರ್ತ ಸಾಕ್ಷ್ಯ ಮಾಧ್ಯಮಗಳಲ್ಲಿ ಬಯಲಾಗಿದೆ ಎಂಬ ಸಂಗತಿಯತ್ತವೂ ಸಿಪಿಐ(ಎಂ) ಗಮನ ಸೆಳೆದಿದೆ.

ಶಾರದಾ ಮೊದಲಾದ ಚಿಟ್‌ಫಂಡ್‌ಗಳ ಮೂಲಕ ಹಣವನ್ನು ತೊಳೆಯುವ ಕೇಸುಗಳು ಎಲ್ಲರಿಗೂ ಗೊತ್ತಿವೆ. ಶಾರದಾ ಕೇಸಿನಲ್ಲಿ ಕರೆನ್ಸಿ ನೋಟುಗಳನ್ನು ಬಹಿರಂಗವಾಗಿಯೇ ಸ್ವೀಕರಿಸಲಾಗಿದೆಯೆಂಬುದು ನಾರದ ಕುಟುಕು ಕಾರ್ಯಾಚರಣೆಯಲ್ಲಿ ಬಯಲಾಗಿದೆ. ಇವು ಯಾವುದರ ತನಿಖೆಯನ್ನೂ ನಡೆಸಿಲ್ಲ. ಜನಸಾಮಾನ್ಯರ ಉಳಿತಾಯದ ಹಣವನ್ನು ಲೂಟಿ ಮಾಡಲಾಗಿದೆ. ಆದರೆ ಆ ಹಣವನ್ನು ಅವರು ಮರಳಿ ಪಡೆಯುವಂತೆ ಮಾಡಲು ಈ ಸರಕಾರ ಏನೂ ಮಾಡಿಲ್ಲ, ಅಪರಾಧಿಗಳಿಗೆ ಶಿಕ್ಷೆಯಾಗಿಲ್ಲ.

ಕಪ್ಪು ಹಣವನ್ನು ಹಿಂದಕ್ಕೆ ತರುವಲ್ಲಿ ಈ ಸರಕಾರದ ಅಪ್ರಾಮಾಣಿಕತೆಯೂ ಎದ್ದು ಕಾಣುತ್ತಿದೆ. ತೆರಿಗೆ ತಪ್ಪಿಸುವ ಪ್ರದೇಶಗಳಲ್ಲಿ ಬ್ಯಾಂಕ್ ಠೇವಣಿಗಳನ್ನು, ಖಾತೆಗಳನ್ನು ಹೊಂದಿರುವವರ ಪಟ್ಟಿಯನ್ನು ಸಾರ್ವಜನಿಕಗೊಳಿಸಲು ಅದು ಹಿಂದೆ–ಮುಂದೆ ನೋಡುತ್ತಿದೆ, ರಾಷ್ಟ್ರೀಕೃತ ಬ್ಯಾಂಕುಗಳಿಂದ ಪಡೆದ ಅಪಾರ ಮೊತ್ತದ ಸಾಲಗಳಲ್ಲಿ ಅಂದಾಜು ಸುಮಾರು 11ಲಕ್ಷ ಕೋಟಿ ರೂ.ಗಳಷ್ಟನ್ನು ಹಿಂದಿರುಗಿಸಲು ನಿರಾಕರಿಸುತ್ತಿರುವವರ ಪಟ್ಟಿಯನ್ನು ಬಿಡುಗಡೆ ಮಾಡಲು ಕೂಡ ಈ ಸರಕಾರ ಹಿಂಜರಿಯುತ್ತಿದೆ.

ಹೆಚ್ಚಿನ ಸರಕಾರೀ ಒಡೆತನದ ಬ್ಯಾಂಕುಗಳಲ್ಲಿ ಮರುಪಾವತಿಯಾಗದ 'ಕೆಟ್ಟ ಸಾಲ'ಗಳಿಗಾಗಿ ಒದಗಿಸಲಿಟ್ಟಿರುವ ಮೊತ್ತ 2015–16ರಲ್ಲಿ ದುಪ್ಪಟ್ಟಾಗಿದೆ, ಕೆಲವು ಕಡೆ ಮೂರು ಪಟ್ಟೂ ಆಗಿದೆ ಎಂಬುದನ್ನು ಇತ್ತೀಚಿನ ವರದಿಗಳು ತೋರಿಸುತ್ತಿವೆ. ಈ ಕೆಟ್ಟ ಸಾಲಗಳನ್ನು ವಸೂಲಿ ಮಾಡುವ ಒಂದು ಸತತ ಪ್ರಯತ್ನವೂ ಕಾಣುತ್ತಿಲ್ಲ. ಬದಲಾಗಿ, ಬಿಜೆಪಿ ಸರಕಾರ 2014–16ರ ಎರಡು ವರ್ಷಗಳಲ್ಲಿ ಒಟ್ಟು 1,12,078 ಕೋಟಿ ರೂ.ಗಳಷ್ಟು ಸಾಲಗಳನ್ನು ಮನ್ನಾ ಮಾಡಿದೆ.

ಭಾರತ ಸರಕಾರ/ ರಿಝರ್ವ್ ಬ್ಯಾಂಕ್ ಶೆಡ್ಯೂಲ್ಡ್ ಬ್ಯಾಂಕ್‌ಗಳಿಗೆ 500, 1000ದ ನೋಟುಗಳನ್ನು ಸ್ವೀಕರಿಸಿ ವಿನಿಮಯ ಮಾಡಲು ಅನುಮತಿ ನೀಡಿದೆ, ನಗರ ಸಹಕಾರಿ ಬ್ಯಾಂಕುಗಳಿಗೂ ಇಂತಹ ಅನುಮತಿ ನೀಡಲಾಗಿದೆ. ಆದರೆ ಜಿಲ್ಲಾ ಮತ್ತು ಪ್ರಾಥಮಿಕ ಬ್ಯಾಂಕುಗಳಿಗೆ ಅನುಮತಿ ನೀಡಿಲ್ಲ. ಈ ಅನುಮತಿಯನ್ನು ಅವುಗಳಿಗೂ ವಿಸ್ತರಿಸಬೇಕು ಎಂದು ಸಿಪಿಐ(ಎಂ) ಪೊಲಿಟ್‌ಬ್ಯುರೊ ಆಗ್ರಹಿಸಿದೆ. ಇದು ಈ ಕ್ರಮದಿಂದ ಅತಿ ಹೆಚ್ಚು ಕಷ್ಟ ಅನುಭವಿಸುತ್ತಿರುವ ಗ್ರಾಮೀಣ ಪ್ರದೇಶದ ಜನತೆಗೆ ಸಾಕಷ್ಟು ಪರಿಹಾರ ನೀಡಬಲ್ಲದು ಎಂದು ಅದು ಅಭಿಪ್ರಾಯ ಪಟ್ಟಿದೆ.

ಈ ಹಿನ್ನೆಲೆಯಲ್ಲಿ ಸಿಪಿಐ(ಎಂ) ಪೊಲಿಟ್‌ಬ್ಯುರೊ ಮೇಲೆ ಹೇಳಿದಂತೆ (1) ಅಗತ್ಯ ಕರೆನ್ಸಿ ನೋಟುಗಳ ಲಭ್ಯತೆ ಮತ್ತು ಹೊಸ ನೋಟುಗಳಿಗೆ ಅನುಗುಣವಾಗಿ ಎಟಿಎಂಗಳ ಮರುವ್ಯವಸ್ಥೆ ಆಗುವ ವರೆಗೆ ಪರ್ಯಾಯ ವ್ಯವಸ್ಥೆಯನ್ನು ರೂಪಿಸಬೇಕು, ಸರಕಾರವೇ ನಿಗದಿಪಡಿಸಿರುವ ಡಿಸೆಂಬರ್30ರ ಸಮಯ ಮಿತಿಯ ವರೆಗೆ 500 ಮತ್ತು 1000ದ ನೋಟುಗಳಲ್ಲಿ ವ್ಯವಹಾರ ನಡೆಸಲು ಜನಗಳಿಗೆ ಅವಕಾಶ ಕೊಡಬೇಕು ಮತ್ತು

(2) ಕೇರಳ ಮತ್ತು ತ್ರಿಪುರ ಮುಖ್ಯಮಂತ್ರಿಗಳು ಪರ್ಯಾಯ ವ್ಯವಸ್ಥೆ ದೃಢವಾಗಿ ಜಾರಿಗೊಳ್ಳುವ ವರೆಗೆ 500 ಮತ್ತು 1000 ರೂ.ಗಳ ನೋಟುಗಳನ್ನು ಸ್ವೀಕರಿಸಲು ತಮ್ಮ ರಾಜ್ಯ ಸರಕಾರಗಳಿಗೆ ಅನುಮತಿ

ಪುಟ 14 ಕ್ಕೆ

ರಕ್ಷಣಾ ಮಂತ್ರಿ ರಾಜೀನಾಮೆ ಕೊಟ್ಟು 'ವೈಯಕ್ತಿಕ' ಅಭಿಪ್ರಾಯ ನೀಡಲಿ

ಭಾರತ ಪರಮಾಣು ಶಸ್ತಾಸ್ತ್ರಗಳನ್ನು ಕುರಿತಂತೆ ತಾನು 'ಮೊದಲು ಬಳಕೆ ಮಾಡುವುದಿಲ್ಲ' ಎಂಬ ನಿಲುವನ್ನು ಬದಲಿಸಬೇಕು ಎಂಬ ರಕ್ಷಣಾ ಮಂತ್ರಿ ಗಳ ಹೇಳಿಕೆ ಅತ್ಯಂತ ಖಂಡನೀಯ ಎಂದು ಸಿಪಿಐ(ಎಂ) ಪೊಲಿಟ್‌ಬ್ಯುರೊ ಹೇಳಿದೆ. ಇದು ಭಾರತದ ಭದ್ರತೆಯ ಪ್ರಶ್ನೆಗಳು ಮತ್ತು ಅಂತರ್ರಾಷ್ಟ್ರೀಯ ಸಂಬಂಧಗಳಲ್ಲಿ ಭಾರತದ ಪ್ರತಿಷ್ಠೆಯ ಮೇಲೆ ಗಂಬೀರ ದುಷ್ಪರಿಣಾಮಗಳನ್ನು ಬೀರುತ್ತದೆ ಎಂದು ಅದು ಅಭಿಪ್ರಾಯ ಪಟ್ಟಿದೆ.

ಇದು ಒಂದು ಪರಮಾಣು ಶಸ್ತ್ರ–ಮುಕ್ತ ಜಗತ್ತನ್ನು ಪ್ರತಿಪಾದಿಸಿಕೊಂಡು ಬಂದಿರುವ, ಪರಮಾಣು ಶಕ್ತಿಯ ಶಾಂತಿಯುತ ಬಳಕೆಗೆ ಬದ್ಧವಾಗಿರುವ ಭಾರತದ ದೀರ್ಘಕಾಲೀನ ನಿಲುವಿಗೆ ಸಂಪೂರ್ಣವಾಗಿ ವ್ಯತಿರಿಕ್ತವಾಗಿರುವ ಹೇಳಿಕೆ. ಈ ಸರಕಾರ ಯುದ್ಧದಲ್ಲಿ ಪರಮಾಣು ಶಸ್ತ್ರಗಳ ಬಳಕೆಯ ಬಗ್ಗೆ ಭಾರತದ ಸುಸ್ಥಾಪಿತ ನಿಲುವನ್ನು ಕೈಬಿಡುವ ಸೂಚನೆಯನ್ನು ರಕ್ಷಣಾ ಮಂತ್ರಿಗಳ ಹೇಳಿಕೆ ನೀಡಿದಂತಿದೆ. ಇದು ಘೋಷಿತ ಉತ್ತಮ ನೆರೆಕರೆ ಸಂಬಂಧಗಳ ನಿಲುವನ್ನು ಬುಡಮೇಲು ಮಾಡಿ ದೇಶದ ಭದ್ರತೆಗೆ ಸಂಚಕಾರ ತರುತ್ತದೆ. ಅಲ್ಲದೆ ವಿಶ್ವ ಸಂಸ್ಥೆಯ ಭದ್ರತಾ ಸಮಿತಿ ಮತ್ತು ಪರಮಾಣು ಪೂರೈಕೆದಾರರ ಗುಂಪು(ಎನ್‌ಎಸ್‌ಜಿ) ಮುಂತಾದ ಅಂತರ್ರಾಷ್ಟ್ರೀಯ ಸಂಸ್ಥೆಗಳಲ್ಲಿ ಸದಸ್ಯತ್ವ ಪಡೆಯುವ ಭಾರತದ ಪ್ರಯತ್ನಗಳಿಗೂ ಅಡ್ಡಿಯೊಡ್ಡುತ್ತದೆ ಎಂದು ಸಿಪಿಐ(ಎಂ) ಹೇಳಿದೆ.

ಇದು ತನ್ನ ವೈಯಕ್ತಿಕ ಅಭಿಪ್ರಾಯ ಎಂಬ ರಕ್ಷಣಾ ಮಂತ್ರಿಗಳ ವಾದ ಅಸಮರ್ಥನೀಯ. ಒಂದು ಸಂಸದೀಯ ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಸಂಪುಟ ಎಂಬ ಸಾಮೂಹಿಕದ ಸದಸ್ಯನಾಗಿ ಇಂತಹ ಭಾರತದ ದೀರ್ಘಕಾಲದ ನಿಲುವಿಗೆ ವ್ಯತಿರಿಕ್ತವಾದ ಅಭಿಪ್ರಾಯ ಹೊಂದಿರುವುದು ಈ ಸರಕಾರದ 'ಆಳ್ವಿಕೆ'ಯಲ್ಲಿನ ಸಂಪೂರ್ಣ ಕೊರತೆಯನ್ನು ಬಿಂಬಿಸುತ್ತದೆ. ತನ್ನ ವೈಯಕ್ತಿಕ ಅಭಿಪ್ರಾಯ ಹೇಳಬೇಕೆಂದಿದ್ದರೆ ಆತ ಸಂಪುಟಕ್ಕೆ ರಾಜೀನಾಮೆ ಕೊಟ್ಟ ನಂತರ ಹೇಳಲಿ ಎಂದು ಸಿಪಿಐ(ಎಂ) ಹೇಳಿದೆ.

ಆಗ ಪ್ರಧಾನ ಮಂತ್ರಿಗಳು ಒಂದು ಪರಮಾಣು ಒಪ್ಪಂದವನ್ನು ಪೂರ್ಣಗೊಳಿಸಲು ಜಪಾನಿಗೆ ಭೇಟಿ ನೀಡಿದ್ದರು. ಅವರು ತಕ್ಷಣವೇ ಸಾರ್ವತ್ರಿಕ ಪರಮಾಣು ನಿಶ್ಶಸ್ತ್ರೀಕರಣ ಮತ್ತು ಯುದ್ಧದಲ್ಲಿ ಪರಮಾಣು ಅಸ್ತ್ರಗಳ ಮೊದಲ ಬಳಕೆ ಮಾಡುವುದಿಲ್ಲ ಎಂಬ ಭಾರತದ ದೀರ್ಘಕಾಲದ ನಿಲುವಿಗೆ ಈ ಸರಕಾರದ ಬದ್ಧತೆಯನ್ನು ಸ್ಪಷ್ಟೀಕರಿಸಬೇಕು ಎಂದು ಸಿಪಿಐ(ಎಂ) ಪೊಲಿಟ್‌ಬ್ಯುರೊ ಆಗ್ರಹಿಸಿದೆ.

ದಿಲ್ಲಿಯಲ್ಲಿ ಕೇರಳ ಆರೆಸ್ಸೆಸ್ ಹಿಂಸಾಚಾರದ ಫೋಟೋ ಪ್ರದರ್ಶನ

ನವಂಬರ್ 16ರಂದು ಕೇರಳದಲ್ಲಿ ಆರೆಸ್ಸೆಸ್ ನಡೆಸಿರುವ ಹಿಂಸಾಚಾರದ ಕುರಿತು ಒಂದು ಫೋಟೋ ಪ್ರದರ್ಶನವನ್ನು ಸಿಪಿಐ(ಎಂ) ಪ್ರಧಾನ ಕಾರ್ಯದರ್ಶಿಇ ಸೀತಾರಾಮ್ ಯೆಚೂರಿಯವರು ಉದ್ಘಾಟಿಸಿದರು. "ಮೌಂಟಿಂಗ್ ಟೆರರ್: ರಿಯಲ್ ಫೇಸ್ ಆಫ್ ಆರ್‌ಎಸ್‌ಎಸ್'(ಭಯೋತ್ಪಾದನೆ ಹೇರಿಕೆ: ಆರೆಸ್ಸೆಸ್‌ನ ನಿಜಮುಖ) ಎಂದು ಹೆಸರಿಸಿರುವ ಈ ಪ್ರದರ್ಶನ ಕೇರಳದಲ್ಲಿ ಆರೆಸ್ಸೆಸ್‌ನ ಹಿಂಸಾತ್ಮಕ ಚಟುವಟಿಕೆಗಳ ಒಂದು ಇಣುಕುನೋಟವನ್ನು ನೀಡುತ್ತದೆ.

ಸಿಪಿಐ(ಎಂ)ನ ಕೇರಳ ರಾಜ್ಯ ಸಮಿತಿ ಏರ್ಪಡಿಸಿರುವ ಈ ಪ್ರದರ್ಶನ ಸಿಪಿಐ(ಎಂ) ಅಧಿಕಾರಕ್ಕೆ ಬಂದ ಮೇಲೆ ಹಿಂಸಾಚಾರ ನಡೆಸುತ್ತಿದೆ ಎಂದು ಆರೆಸ್ಸೆಸ್ ನಡೆಸಿರುವ ಅಪಪ್ರಚಾರವನ್ನು ಬಯಲಿಗೆಳೆದಿದೆ.


"ಕೇರಳದಲ್ಲಿ ಆರೆಸ್ಸೆಸ್ ಅನುಸರಿಸುತ್ತಿರುವ ಹಿಂಸಾಚಾರ ನಮ್ಮ ಜಾತ್ಯಾತೀತ ಪ್ರಜಾಸತ್ತಾತ್ಮಕ ಗಣರಾಜ್ಯವನ್ನು ಒಂದು ಮತೀಯ ಪ್ರಭುತ್ವವಾಗಿ ಪರಿವರ್ತಿಸುವ ಫ್ಯಾಸಿಸ್ಟ್ ಮಾದರಿಯ ಅಜೆಂಡಾದ ಭಾಗ, ಸಿಪಿಐ(ಎಂ) ಅದರ ಅಜೆಂಡಾಕ್ಕೆ ಅಡ್ಡಿಯಾಗಿ ನಿಂತು ಅದರ ಕುತಂತ್ರಗಳನ್ನು ವಿಫಲಗೊಳಿಸುತ್ತಿರುವುದರಿಂದಾಗಿ ಅದು ಸಿಪಿಐ(ಎಂ) ಮೇಲೆ ಗುರಿ ಯಿಟ್ಟಿದೆ" ಎಂದು ಯೆಚೂರಿಯವರು ಹೇಳಿದರು.

ಕೇರಳ ಮುಖ್ಯಮಂತ್ರಿ ಪಿಣರಾಯಿ ವಿಜಯನ್ ಕೇರಳದಲ್ಲಿ ಆರೆಸ್ಸೆಸ್‌ನ ಹಿಂಸಾಚಾರದ ಇತಿಹಾಸವನ್ನು ಗುರುತಿಸುತ್ತ ಇದುವರೆಗೆ ಅದು 200ಕ್ಕೂ ಹೆಚ್ಚು ಸಿಪಿಐ(ಎಂ) ಕಾರ್ಯಕರ್ತರ ಬಲಿ ತೆಗೆದುಕೊಂಟಿದೆ, 300ಕ್ಕೂ ಹೆಚ್ಚು ಮಂದಿಯನ್ನು ತೀವ್ರವಾಗಿ ಗಂಭೀರವಾಗಿ ಗಾಯಗೊಳಿಸಿದೆ ಎಂದರು. ಈ ಬಾರಿ ಎಲ್‌ಡಿಎಫ್ ಅಧಿಕಾರಕ್ಕೆ ಬಂದ ನಂತರವೂ ಇದುವರೆಗೆ ಆರುಸಂಗಾತಿಗಳ ಬಲಿ ತೆಗೆದುಕೊಳ್ಳಲಾಗಿದೆ, 200ಕ್ಕೂ ಹೆಚ್ಚು ಸಂಗಾತಿಗಳನ್ನು ಗಾಯಗೊಳಿಸಿದ್ದಾರೆ, 80 ಮನೆಗಳು, 35 ಪಕ್ಷದ ಕಚೇರಿಗಳ ಮೇಲೆ ದಾಳಿ ನಡೆಸಿದ್ದಾರೆ ಎಂದು ಹೇಳಿದರು.ಈ ಬಗ್ಗೆ ಕಾಂಗ್ರೆಸ್ ಮತ್ತು ಯುಡಿಎಫ್ ಮೌನ ಧರಿಸಿ ಅವರಿಗೆ ಪರೋಕ್ಷ ಮಂಜೂರಾತಿ ನೀಡಿವೆ ಎಂದು ಅವರು ಹೇಳಿದರು.

ಈ ರಾಜಕೀಯ ಹಿಂಸಾಚಾರವನ್ನು ಕೊನೆಗೊಳಿಸಲಾಗುವುದು ಎಂದ ಮುಖ್ಯಮಂತ್ರಿಗಳು ಪಕ್ಷ ಮತ್ತು ಎಲ್‌ಡಿಎಫ್ ಈ ಬಗ್ಗೆ ಮಾತುಕತೆಗಳನ್ನು ನಡೆಸಲು ಪ್ರಯತ್ನಿಸಿದರೂ ಆರೆಸ್ಸೆಸ್ ಮತ್ತು ಬಿಜೆಪಿ ಇದಕ್ಕೆ ಸಿದ್ಧವಿಲ್ಲ ಎಂದು ಹೇಳಿದರು.

ಈ ಹಿಂಸಾಚಾರ ಕಣ್ಣೂರು ಜಿಲ್ಲೆಗಷ್ಟೇ ಸೀಮಿತವಾಗಿಲ್ಲ, ತ್ರಿಶೂರ್ ಮತ್ತು ತಿರುವನಂತಪುರ ಜಿಲ್ಲೆಗಳಲ್ಲೂ ನಡೆಯುತ್ತಿವೆ ಎಂದು ಸಿಪಿಐ(ಎಂ) ರಾಜ್ಯ ಕಾರ್ಯದರ್ಶಿ ಕೊಡಿಯೇರಿ ಬಾಲಕೃಷ್ಣನ್ ಮಾತಾಡುತ್ತ ತಿಳಿಸಿದರು.

76 ಪ್ಯಾನೆಲ್‌ಗಳಿರುವ ಈ ಪ್ರದರ್ಶನ ದಿಲ್ಲಿಯಲ್ಲಿ ಎರಡು ದಿನ ಇದ್ದು ಮುಂದೆ ಅವನ್ನು ಇತರ ರಾಜ್ಯಗಳಿಗೂ ಒಯ್ಯಲಾಗುವುದು.





ಈ ವಾರ ಚರಿತ್ರೆಯಲ್ಲಿ

16 ನವೆಂಬರ್ 1933

1917ರಲ್ಲಿ ರಶ್ಯನ್ ಕ್ರಾಂತಿಯಾಗಿ ಕಮ್ಯುನಿಸ್ಟ್ ಪಕ್ಷ ಅಧಿಕಾರಕ್ಕೆ ಬಂದಾಗ ಅಮೆರಿಕ ರಶ್ಯದ ಜತೆ ರಾಜ ತಾಂತ್ರಿಕ ಸಂಬಂಧ ಕಡಿದುಕೊಂಡಿತ್ತು. ರಶ್ಯದ ಹೊಸ ಸರಕಾರಕ್ಕೆ ಮಾನ್ಯತೆ0ಯನ್ನೂ ಕೊಟ್ಟಿರಲಿಲ್ಲ. ಯುರೋಪಿನ ಹಾಗೂ ಜಗತ್ತಿನ ಪ್ರಮುಖ ದೇಶಗಳು ರಶ್ಯಕ್ಕೆ ಮಾನ್ಯತೆ ಕೊಟ್ಟಿದ್ದು, ಅಮೆರಿಕ ರಶ್ಯವನ್ನು ಮಾನ್ಯ ಮಾಡಿದ ಹೆಚ್ಚು ಕಡಿಮೆ ಕೊನೆ0ಯ ದೇಶವಾಗಿತ್ತು. 1933ರಲ್ಲಿ ಅಧ್ಯಕ್ಷರಾಗಿ ಆಯ್ಕೆಯಾದ ರೂಸ್ ವೆಲ್ಟ್ ಈ ನಿರ್ಧಾರ ಕೈಗೊಂಡರು. ಹಿಂದಿನ ರಶ್ಯನ್ ಝಾರ್ ಸರಕಾರದ ಒಪ್ಪಂದಗಳು ಹಾಗೂ ಸಾಲಗಳನ್ನು ಹೊಸ ಸರಕಾರ ಮಾನ್ಯ ಮಾಡದ್ದು ಬರಿಯ ನೆಪವಾಗಿತ್ತು. 1930–31ರ ಮಹಾ ಕುಸಿತ ಅಮೆರಿಕದ ಈ ನಿರ್ಧಾರಕ್ಕೆ ಕಾರಣವಾಗಿತ್ತು ಎನ್ನಲಾಗಿದೆ.

ಹರಡುತ್ತಿರುವ ಕೋಮುವಿಷವನ್ನು ತಡೆಯಲು ಕಠಿಣ ಕ್ರಮ ಕೈಗೊಳ್ಳಬೇಕು

ಸಂಪಾದಕೀಯ

ದಕ್ಷಿಣ ಕನ್ನಡ ಜಿಲ್ಲೆಯ ಉಳ್ಳಾಲ ಮತ್ತು ಕೊಣಾಜೆ ಪೊಲೀಸ್ ಠಾಣೆಯಲ್ಲಿ ಸಾಮಾನ್ಯ ಜನರ ಮೇಲೆ ಸರಣಿ ಹಲ್ಲೆಗಳು ನಡೆಯುತ್ತಿವೆ. ಟಿಪ್ಪು ಸುಲ್ತಾನ್ ಜಯಂತಿಯಂದು ಪೊಲೀಸ್ ಇಲಾಖೆ ಸಕಲ ಭದ್ರತೆ ಕೈಗೊಂಡಿದ್ದರೂ, ದುಷ್ಕರ್ಮಿಗಳು ಬೈಕಲ್ಲಿ ಬಂದು ಕುತ್ತಾರು ನಿವಾಸಿ ಆರೆಸ್ಸೆಸ್ ನಾಯಕ ರಾಮ್ ಮೋಹನ್ ಮೇಲೆ ಹಲ್ಲೆಯನ್ನು ನಡೆಸಿದ್ದಾರೆ. ಮರು ದಿವಸ ಮಂಜನಾಡಿ ನಿವಾಸಿ ನವಾಝ್ ಮೇಲೆ, ಅನ್ಸಾರ್ ನಗರದ ಸಮೀರ್ ಮೇಲೆ ಒಂದೇ ದಿನ 15 ನಿಮಿಷದ ಅಂತರದಲ್ಲಿ ಚೂರಿ ಇರಿದು ಪರಾರಿಯಾಗಿದ್ದಾರೆ. ಅದರ ಮರು ದಿವಸ ಸಣ್ಣ ಹುಡುಗ ರಾಝಿಕ್ ನ ಕೈಗೆ ಇರಿದು ಪರಾರಿಯಾಗಿದ್ದಾರೆ. ಈ ರೀತಿ ಸರಣಿ ದಾಳಿ ನಡೆದರೂ ಆರೋಪಿಗಳ ಬಂಧನವಾಗಲಿಲ್ಲ, ಮಾತ್ರವಲ್ಲ ಪ್ರಾರ್ಥನಾ ಮಂದಿರದ ಮೇಲೆ ಕಲ್ಲು ತೂರಾಟದ ಘಟನೆಗಳು ನಡೆಯುತ್ತಿವೆ.

ಮಂಗಳೂರು ಸತತ ಇರಿತಗಳಿಂದ ಕಂಗೆಟ್ಟಿದೆ. ಕತ್ತಲಾದರೆ ಸಾಕು ಎಲ್ಲಿ ಯಾರ ಮೇಲೆ ಮಚ್ಚು ಬೀಸುತ್ತಾರೋ ತಿಳಿಯದೆ ಜನ ಕತ್ತಲಾಗುವ ಮುಂಚೆ ಭೀತಿಯಿಂದ ಮನೆ ಸೇರುತ್ತಿದ್ದಾರೆ.. ಜನರು ಹೊರಗೆ ಬರಲು ಭಯಪಡುವ ವಾತಾವರಣ ನಿರ್ಮಾಣವಾಗಿದೆ. ಮಿಂಚಿನಂತೆ ಬಂದು ಇರಿದು ಹೋಗುವವರ ಗುರಿ ಅಮಾಯಕರು ಎನ್ನುವುದು ಮೇಲ್ನೋಟಕ್ಕೆ ಸ್ಪಷ್ಟವಾಗುವಂತಿದೆ.

ನಿಷೇಧಾಜ್ಞೆ ಇದ್ದಾಗಲೇ ಈ ರೀತಿಯ ಕೃತ್ಯಗಳು ನಡೆದಿವೆ. ಪೊಲೀಸ್ ಇಲಾಖೆ ಇಬ್ಬರನ್ನು ಅನುಮಾನಾಸ್ಪದವಾಗಿ ಬಂಧಿಸಿದ ದಿವಸವೇ, ಸಂಜೆ ರಾಝಿಕ್ ಎಂಬ ಸಣ್ಣ ಹುಡುಗನ ಮೇಲೆ ಹಲ್ಲೆಯಾಗಿದೆ. ಇದನ್ನು ಗಮನಿಸಿದಾಗ ಯಾವುದೋ ಒಂದು ತಂಡ ಇದರ ಹಿಂದೆ ಕೆಲಸ ಮಾಡುತ್ತಿದೆ ಎಂಬ ಅನುಮಾನ ದಟ್ಟವಾಗಿದೆ. ಇಷ್ಟರವರೆಗೆ ಇರಿದು ಪರಾರಿಯಾಗುತ್ತಿರುವವರ ಗುರುತು ಪತ್ತೆಯಾಗದಿರುವುದು ಇನ್ನಷ್ಟು ಆತಂಕಕಾರಿ. ಈ ಎಲ್ಲಾ ದಾಳಿಗಳನ್ನು ಗಮನಿಸಿದಾಗ ಕೋಮು ಸೂಕ್ಷ್ಮ ಪ್ರದೇಶವಾದ ಈ ಎರಡು ಠಾಣಾ ವ್ಯಾಪ್ತಿಯಲ್ಲಿ ಗಲಭೆಗಳನ್ನು ನಡೆಸುವ ಹುನ್ನಾರ ಇದಾಗಿದೆ. ಇಡೀ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ನಿಷೇಧಾಜ್ಞೆ ಜಾರಿಯಾಗಿದ್ದರೂ ಕೋಮುಗಲಭೆಯ ಆತಂಕ ಕಡಿಮೆಯಾಗಿಲ್ಲ.

ವೇಗವಾಗಿ ಹರಡುತ್ತಿರುವ ಕೋಮುವಿಷ ಬರಿಯ ದಕ್ಷಿಣ ಕನ್ನಡ ಜಿಲ್ಲೆಗೆ ಅಥವಾ ಕರಾವಳಿಗೆ ಮಾತ್ರ ಸೀಮಿತವಾಗಿಲ್ಲ. ಮಸೀದಿಯಲ್ಲಿದ್ದ ಕುರಾನಿಗೆ ಕಿಡಿಗೇಡಿಗಳು ಬೆಂಕಿಹಾಕಿ ಸುಟ್ಟಿರುವ ಘಟನೆ ಕೊಡಗು ಜಿಲ್ಲೆಯ ಸೋಮವಾರಪೇಟೆ ತಾಲ್ಲೂಕಿನ ಐಗೂರು ಗ್ರಾಮದಲ್ಲಿ ನಡೆದಿದ್ದು, ಬೆಳಕಿಗೆ ಬಂದಿದೆ. ಗ್ರಾಮದ ಅಬ್ದುಲ್ ರೆಹಮಾನ್ ಪ್ರಾರ್ಥನೆಗೆ ತೆರಳಿದ ಸಂದರ್ಭದಲ್ಲಿ ಈ ಕೃತ್ಯ ಬೆಳಕಿಗೆ ಬಂದಿದೆ. ರಂಜಾನ್ ಮಾಸದಲ್ಲಿ ಮಾತ್ರ ನಿತ್ಯ ಇಲ್ಲಿ ಪ್ರಾರ್ಥನೆ ನಡೆಯುತ್ತದೆ. ನಂತರ, ಅಪರೂಪಕ್ಕೊಮ್ಮೆ ಬಾಗಿಲು ತೆರೆದು ಪ್ರಾರ್ಥನೆ ಸಲ್ಲಿಸಲಾಗುತ್ತದೆ. ಇದನ್ನೇ ಬಳಸಿಕೊಂಡಿರುವ ಕಿಡಿಗೇಡಿಗಳು ರಾತ್ರಿ ಸಮಯದಲ್ಲಿ ಹೆಂಚು ತೆಗೆದು, ಪ್ರಾರ್ಥನಾ ಸ್ಥಳದಲ್ಲಿದ್ದ ಕುರಾನ್, ಚಾಪೆ ಮತ್ತು ಹೊದಿಕೆಗಳನ್ನು ರಾಶಿ ಹಾಕಿ ಬೆಂಕಿ ಹಚ್ಚಿದ್ದಾರೆ.

ಬಳ್ಳಾರಿ ಜಿಲ್ಲೆಯ ಸಿರಗುಪ್ಪ ಪಟ್ಟಣದ ಪ್ರಾರ್ಥನಾ ಮಂದಿರದ ಚಿತ್ರದ ಮೇಲೆ ಯುವಕನೊಬ್ಬ ಹಂದಿಗಳ ಚಿತ್ರ ಬರೆದು ಫೇಸ್ಬುಕ್ ಖಾತೆಯಲ್ಲಿ ಹಾಕಿದ್ದು ಕೋಮು ಉದ್ರೇಕಕ್ಕೆ ಕಾರಣವಾಗಿದೆ. ಇದನ್ನು ಖಂಡಿಸಿ ಅಲ್ಲಿನ ಟಿಪ್ಪುಸುಲ್ತಾನ್ ವೃತ್ತದಲ್ಲಿ ಪ್ರತಿಭಟನೆ ನಡೆದಿದೆ. ಚಿತ್ರ ವಿರೂಪಗೊಳಿಸಿದ ಆರೋಪದ ಪಟ್ಟಣದ ಬಲರಾಮ ಎಂಬಾತನನ್ನು ಪೊಲೀಸರು ಬಂಧಿಸಿದ್ದಾರೆ.

ಈಗಾಗಲೇ ಕೋಮುವಾದಿ ವಿಷ ದೊಡ್ಡ ಪ್ರಮಾಣದಲ್ಲಿ ದಕ್ಷಿಣ ಕನ್ನಡ ಮತ್ತು ಕೊಡಗು, ಜಿಲ್ಲೆಗಳಲ್ಲಿ ಹರಡಿದೆ. ಆದರೂ ಈಗಿನ ಸರಣಿ ಇರಿತಗಳು ನಿಗೂಢ ಹೊಸ ಬೆಳವಣಿಗೆಯಂತೆ ಕಾಣುತ್ತಿದೆ. ಈ ಕೋಮುವಿಷ ಬಳ್ಳಾರಿಗಳಂತಹ ಜಿಲ್ಲೆಗೂ ಹರಡುತ್ತಿರುವುದು ಇನ್ನಷ್ಟು ಆತಂಕದ ಸಂಗತಿ. ದಕ್ಷಿಣ ಕನ್ನಡ ಮತ್ತು ಕೊಡಗು, ಜಿಲ್ಲೆಗಳಲ್ಲಿ ಇತ್ತೀಚಿನ ಟಿಪ್ಪು ಜಯಂತಿಯ ಸಂದರ್ಭವನ್ನು ಕೋಮುವಾದಿ ಶಕ್ತಿಗಳು ಕೋಮುಉದ್ರೇಕ ಉಂಟು ಮಾಡಲು ವ್ಯವಸ್ಥಿತವಾಗಿ ಬಳಸಿದ್ದರು. ಕಳೆದ ವರ್ಷ ಮೂಡುಬಿದಿರಿಯಲ್ಲಿ ಪ್ರಶಾಂತ್ ಪೂಜಾರಿ ಹತ್ಯೆಯ ಆರೋಪಿಯನ್ನು ಮೈಸೂರು ಜೈಲಿನಲ್ಲಿ ಇತ್ತೀಚೆಗೆ ಹತ್ಯೆ ಮಾಡಿದ್ದರ ಪರಿಣಾಮವೂ ಒಂದು ಕಾರಣವಾಗಿರಬಹುದು.

ಆದರೆ ಇಂತಹ ಉದ್ವಿಗ್ನತೆಗೆ ಮತೀಯ ಸಂಘಟನೆಗಳ ನಾಯಕರ ಪ್ರಚೋದನೆ, ಉದ್ರೇಕಕಾರಿ ಭಾಷಣಗಳು ಹಾಗೂ ದೀರ್ಘ ಕಾಲದಿಂದ ಕೋಮುಹಿಂಸೆಯ ಅಪರಾಧಿಗಳನ್ನು ಬಂಧಿಸಿ ಶಿಕ್ಷೆಗೆ ಒಳಪಡಿಸದಿರುವುದು ಪ್ರಮುಖ ಕಾರಣ ಎಂಬುದು ಸ್ಪಷ್ಟ. ಬಳ್ಳಾರಿಯ ಸಿರುಗುಪ್ಪದ ಪ್ರಕರಣ ಬಿಟ್ಟರೆ, ದಕ್ಷಿಣ ಕನ್ನಡ ಮತ್ತು ಕೊಡಗು, ಜಿಲ್ಲೆಗಳಲ್ಲಿ ಇತ್ತೀಚೆಗೆ ನಡೆದ ಸರಣಿ ಕೋಮುಹಿಂಸೆ ಪ್ರಕರಣಗಳಲ್ಲಿ ಅಪರಾಧಿಯನ್ನು ಪತ್ತೆ ಹಚ್ಚಿ ಬಂಧಿಸಲಾಗಿಲ್ಲ ಎಂಬುದು ಕಣ್ಣಿಗೆ ರಾಚುವ ಸತ್ಯಸಂಗತಿ. ಹಿಂದೆ ಸಂಘ ಪರಿವಾರದ ಕೆಲವು ನಾಯಕರು ಬಹಿರಂಗವಾಗಿ 'ಕೊಚ್ಚಿಕೊಂಡಂತೆ', ದಕ್ಷಿಣ ಕನ್ನಡದಲ್ಲಿ ಅವರು ಪರಿಣಾಮಕಾರಿಯಾಗಿ ಸಾಧಿಸಿದ ಪೋಲೀಸ್ ವ್ಯವಸ್ಥೆಯ ಕೋಮುವಾದೀಕರಣ ನಿಜವಾದ ಮೂಲಕಾರಣ. ಸಿದ್ಧರಾಮಯ್ಯ ಅವರ ಕಾಂಗ್ರೆಸ್ ಸರಕಾರ 'ಪೋಲೀಸ್ ವ್ಯವಸ್ಥೆಯ ಕೋಮುವಾದೀಕರಣ'ವನ್ನು ತೊಡೆದು ಹಾಕಲು ಪ್ರಯತ್ನವನ್ನೂ ಮಾಡಿಲ್ಲ, ಇಚ್ಛಾಶಕ್ತಿಯನ್ನೂ ತೋರಿಲ್ಲ.

ಮಾತ್ರವಲ್ಲ ರಾಜಕೀಯವಾಗಿಯೂ ದಕ್ಷಿಣ ಕನ್ನಡದಲ್ಲೂ, ಇಡೀ ರಾಜ್ಯದಲ್ಲೂ ಬಿಜೆಪಿ–ಸಂಘ ಪರಿವಾರದ ಕೋಮುವಾದಿ ಅಜೆಂಡಾದ ವಿರುದ್ಧ ರಾಜಕೀಯವಾಗಿ ಹೋರಾಟ ನಡೆಸಲೂ ಪ್ರಯತ್ನವನ್ನೂ ಮಾಡಿಲ್ಲ, ಇಚ್ಛಾಶಕ್ತಿಯನ್ನೂ ತೋರಿಲ್ಲ. ಬದಲಾಗಿ ಕಾಂಗ್ರೆಸಿನ ಕೆಲವು ಬಣಗಳು ನಾಯಕರು 'ಮೆದು ಹಿಂದುತ್ವ' ಧೋರಣೆ ತಳೆದಿದ್ದರೆ, ಇತರ ಬಣಗಳು ನಾಯಕರು ಅಲ್ಪಸಂಖ್ಯಾಂತ ಕೋಮುವಾದಿ ಶಕ್ತಿ/ಸಂಘಟನೆಗಳನ್ನು ಓಲೈಸುವ ಧೋರಣೆ ತಳೆದಿವೆ. ಇವೆಲ್ಲದರ ಒಟ್ಟು ಫಲವಾಗಿಯೇ ದೇಶದಲ್ಲೇ 2015ರಲ್ಲಿ ಕೋಮುದಂಗೆಗಳಲ್ಲಿ ಕರ್ನಾಟಕಕ್ಕೆ 2ನೇ ಸ್ಥಾನ, ದಕ್ಷಿಣ ಭಾರತದಲ್ಲಿ ಮೊದಲ ಸ್ಥಾನ ದೊರಕಿದೆ.

2011ರಿಂದ 2015ವರೆಗೆ ಒಟ್ಟು 3365 (ಸರಾಸರಿ ತಿಂಗಳಿಗೆ 58) ಕೋಮುದಂಗೆಗಳು ದೇಶದಲ್ಲಿ ನಡೆದಿವೆ. ದೇಶದ ಶೇ. 85 ರಷ್ಟು ಕೋಮುದಂಗೆಗಳು ಕೇವಲ 8 ಪ್ರಮುಖ ರಾಜ್ಯಗಳಲ್ಲಿ ನಡೆದಿವೆ. ಕರ್ನಾಟಕ ಆ 8 ರಾಜ್ಯಗಳಲ್ಲಿ ಒಂದು. ಕರ್ನಾಟಕದಲ್ಲಿ ಈ ಅವಧಿಯಲ್ಲಿ 321 ಕೋಮುದಂಗೆಗಳು ದಾಖಲಾಗಿದ್ದು ದೇಶದ (ಜನಸಂಖ್ಯೆಯಲ್ಲಿ ಕೇವಲ ಶೇ. 5 ಇದ್ದರೂ) ಶೇ. 10.5 ಕೋಮುದಂಗೆಗಳು ರಾಜ್ಯದಲ್ಲೇ ನಡೆದಿವೆ. ರಾಜ್ಯದಲ್ಲಿ ಕೋಮುದಂಗೆಗಳು 2013–14 ಗಳಲ್ಲಿ ಸರಾಸರಿ ಸುಮಾರು 70 ಇದ್ದಿದ್ದು 2015ರಲ್ಲಿ 163ಕ್ಕೆ ಏರಿದೆ.

ಈ ಹಿನ್ನೆಲೆಯಲ್ಲಿ ದಕ್ಷಿಣ ಕನ್ನಡ ಮತ್ತು ರಾಜ್ಯದ ಇತ್ತೀಚಿನ ಕೋಮುಹಿಂಸೆಯ ಘಟನೆಗಳ ತನಿಖೆ ನಡೆಸಿ ಅವುಗಳ ಹಿಂದಿರುವ ವ್ಯಕ್ತಿ, ಶಕ್ತಿ, ಸಂಘಟನೆ, ಪಿತೂರಿಗಳನ್ನು ಬಯಲುಗೊಳಿಸಿ ಇಂತಹ ಪರಿಸ್ಥಿತಿ ಮರುಕಳಿಸದಂತೆ ಕಠಿಣ ಕ್ರಮ ಕೈಗೊಳ್ಳುವುದು ರಾಜ್ಯ ಸರಕಾರದ ಪ್ರಾಥಮಿಕ ಜವಾಬ್ದಾರಿ. ರಾಜ್ಯ ಸರಕಾರ ಇಂತಹ ಕ್ರಮ ಕೈಗೊಳ್ಳುವ ಪರಿಸ್ಥಿತಿ ನಿರ್ಮಾಣ ಆಗುವಂತೆ, ಎಲ್ಲಾ ಎಡ ಪ್ರಜಾಸತ್ತಾತ್ಮಕ ಸೆಕ್ಯುಲರ್ ಶಕ್ತಿಗಳನ್ನು ಅಣಿ ನೆರೆಸಿ ಪ್ರಬಲ ಐಕ್ಯ ಕೋಮುವಾದಿ–ವಿರೋಧಿ ಚಳುವಳಿ ಕಟ್ಟಬೇಕಾಗಿದೆ.

ಈ ಅಕ್ಷಮ್ಯ ಅನೈತಿಕ ಅದ್ದೂರಿ ಮದುವೆಗೆ ಕಡಿವಾಣ ಏಕಿಲ್ಲ

ಎಸ್.ವೈ. ಗುರುಶಾಂತ್

ಕಪ್ಪುಹಣದ ವಿರುದ್ಧ ಪ್ರಧಾನಿಗಳು ಸಾರಿರುವ ಯುದ್ಧದಲ್ಲಿ 47 ಸ್ವದೇಶಿಯರ ಸಾವು. ತಮ್ಮಲ್ಲಿದ್ದ ಅಲ್ಪ ಸ್ವಲ್ಪ ಹಣವೂ ಇಲ್ಲವಾಗುವ ಭೀತಿಯಲ್ಲಿ ಪ್ರಜೆ ನಿದ್ದೆಗೆಟ್ಟು ಕ್ಯೂ ನಲ್ಲಿ ನಿಂತು ಬಸವಳಿದ ಭಾರತೀಯ ಪ್ರಜೆಗಳು.. .. ಈ ದುರಂತವನ್ನು ಅತ್ಯಂತ ರೋಚಕವಾಗಿಸಿ ವರದಿ ಮಾಡುತ್ತಿದ್ದ ವಂಧಿ ಮಾಗಧ ಮಾಧ್ಯಮಗಳೀಗ ಅದನ್ನು ಮರೆಸುವ ಮತ್ತೊಂದು ಮಗ್ಗುಲಿಗೆ ಹೊರಳಿರುವುದು ಈ ವಾರದ ವಿಶೇಷ.

ಕನ್ನಡದ ಬಹುತೇಕ ಟಿವಿ ಚಾನೆಲ್‌ಗಳು ಗಾಲಿ ಜನಾರ್ಧನ ರೆಡ್ಡಿಯವರ ಮಗಳ ಮದುವೆ ಸಮಾರಂಭದ ವರದಿಗೆ ದಿನವಿಡೀ ಹಮ್ಮು ಕಟ್ಟಿ ನಿಂತಿವೆ. ಬೆಂಗಳೂರಿನ ಅರಮನೆ ಮೈದಾನದಲ್ಲಿ 'ಸ್ವರ್ಗವೇ ಧರೆಗಿಳಿದೆ' ಎನ್ನುತ್ತಿವೆ ಮಾಧ್ಯಮಗಳು. ಅಲ್ಲಿ ಹಂಪಿಯ ವಿಜಯನಗರ ಸಾಮ್ರಾಜ್ಯದ ವೈಭವದ ಮರುಸೃಷ್ಟಿಯೇ ಆಗಿದೆಯಂತೆ! ತಿರುಮಲ ದೇವಸ್ಥಾನ, ಹಂಪಿಯ ವಿಜಯ ವಿಠ್ಠಲನ ಗುಡಿ, ಕೃಷ್ಣ ದೇವರಾಯನ ಅರಮನೆ, ಇತ್ಯಾದಿಗಳ ಮರುಸೃಷ್ಟಿ, ಸ್ವರ್ಣ ದೇಗುಲಗಳ ಹೊಳಪು.. ಮಾತ್ರವಲ್ಲ. ಬಳ್ಳಾರಿಯ ಗ್ರಾಮೀಣ–ಹಳ್ಳಿಯ ಸೃಷ್ಟಿಯೂ ಆಗಿದೆ. ಅರಮನೆಯ ಸೇವೆಗೆ 'ನೆರೆಯ ಮನೆ'ಯೂ ಇರಬೇಕಲ್ಲಾ ಎಂಬಂತೆ!.

ವಧು–ವರರೊಂದಿಗೆ ಗಾಲಿಜನಾರ್ಧನ ರೆಡ್ಡಿ, ಅವರ ಪತ್ನಿ, 'ಜೀವದ ಗೆಳೆಯ' ಶ್ರೀರಾಮುಲು ಎಲ್ಲರೂ ರಾಜರ ಉಡುಗೆ ತೊಡುಗೆಗಳಲ್ಲಿ ಮಿಂಚಿದ್ದೋ ಮಿಂಚಿದ್ದು. ಇವೆಲ್ಲಾ ಆಹ್ವಾನ ಪತ್ರಿ–ಕೆ ಹಂಚುವಾಗಿನಿಂದ ಹಿಡಿದು ಇಲ್ಲಿಯವರೆಗೂ ಅದ್ದೂರಿಯೇ! ಆಹ್ವಾನ ಪತ್ರಿಕೆಗೇ ಹಲವು ದಶ ಕೋಟಿಗಳು, ರೆಡ್ಡಿಯವರ ಮಗಳು ವಧು ಬ್ರಹ್ಮಿಣಿಗೆ ಕೊಟ್ಟ ಆಭರಣಗಳೇ 90 ಕೋಟಿ ರೂ. ಗಳ ಮೌಲ್ಯದ್ದು. ಊಟ, ಸೆಟ್ಟಿಂಗ್, ಇತ್ಯಾದಿ ಮೀಡಿಯಾ ಮ್ಯಾನೇಜ್ ಮೆಂಟ್ ಇತ್ಯಾದಿ ಎಲ್ಲಾ ಸೇರಿ ಒಟ್ಟು ಸುಮಾರು 500 ಕೋಟಿ ರೂ.ಗಳ ಖರ್ಚಾಗಿರುವ ಅಂದಾಜು. ಜನಶ್ರೀ ಚಾನೆಲ್ ಒಳಗೊಂಡು ಹಲವು ಚಾನೆಲ್‌ಗಳು ಉದ್ವೇಗದಿಂದ ಕೂಗಿಕೊಂಡಂತೆ 'ಕೃಷ್ಣ ದೇವರಾಯನು ನಡೆಸಿದ ಮದುವೆ ಸಮಾರಂಭವಂತೂ ನೋಡಲಾಗಲಿಲ್ಲ. ಆದರೆ 'ಅಭಿನವ ಕೃಷ್ಣದೇವರಾಯ' ಗಾಲಿಜನಾರ್ಧನರೆಡ್ಡಿ ಮಗಳ ಮದುವೆ ವಿಜಯನಗರದ ಅರಸನನ್ನು ಮೀರಿಸಿದೆ! ಎಂದು ಜನ್ಮ ಸಾರ್ಥಕ ಪಡಿಸಿಕೊಂಡದ್ದು ಹೇಸಿಗೆ ತರುವಂತಿತ್ತು. ಈ ಮದುವೆಗೆ ರಾಜ್ಯಪಾಲರು ಒಳಗೊಂಡು, ಬಿಜೆಪಿಯ ಬಹುತೇಕ ಎಲ್ಲಾ ಪ್ರಮುಖ ನಾಯಕರು, ಕಾಂಗ್ರೆಸ್‌ನ ಕೆಲ ಪ್ರಮುಖರು ಆಡಂಬರದಲ್ಲಿ ಅಡಿ ಇಟ್ಟು ರೆಡ್ಡಿಯ ಕೃಪೆಗೆ ಪಾತ್ರರಾದರು. ಅಕ್ರಮ, ಅನೈತಿಕ ಹಣದ ಮೆರೆದಾಟ ಇವರಿಗೆ ಅಸಹ್ಯ, ಆಕ್ರೋಶ ತರಲಿಲ್ಲ ಎಂಬುದು ಇಂದಿನ ಸ್ಥಿತಿಗೆ ಹಿಡಿದ ಕನ್ನಡಿ, ಕನಿಷ್ಠ ಕಾಂಗ್ರೆಸ್‌ನ ಮುಖ್ಯಮಂತ್ರಿ, ರಮೇಶ್ ಕುಮಾರ್, ಕಾಗೋಡು ತಿಮ್ಮಪ್ಪ ನಂತಹವರು ಹೊರಗೆ ಉಳಿದದ್ದು ಸ್ವಾಗತಾರ್ಹ. ಆದರೆ ಆ ಪಕ್ಷದ ಅಧ್ಯಕ್ಷರೂ ಒಳಗೊಂಡು ಡಿಕೆಶಿ ಮುಂತಾದವರು ಭಾಗವಹಿಸಿದ್ದು ನಾಚಿಕೆಗೇಡು.

ನಿಜ, ಇದು ತಮ್ಮಲ್ಲಿರುವ ಸಂಪತ್ತಿನ ಅಸಹ್ಯ ಹಾಗೂ ವಿಕೃತ ಪ್ರದರ್ಶನವಾಗಿದೆ. ಗಾಲಿ ರೆಡ್ಡಿಗಳು ಮಾಡಿದ ಈ ದುಂದು ವೆಚ್ಚದ ಹಣ ಬಂದಿದ್ದಾದರೂ ಎಲ್ಲಿಂದ? ಬಳ್ಳಾರಿ, ಚಿತ್ರದುರ್ಗ ಪ್ರದೇಶಗಳಲ್ಲಿ ಅಕ್ರಮ ಗಣಿಗಾರಿಕೆಯ ಲೂಟಿಯಿಂದ ದೋಚಿದ ಅನೈತಿಕ ಹಣವದು. ಕರ್ನಾಟಕದ ಲೋಕಾಯುಕ್ತರು ನೀಡಿದ ವರದಿಯಂತೆ ಸರ್ಕಾರಕ್ಕೆ ತೆರಿಗೆ ವಂಚಿಸಿರುವುದು ಸುಮಾರು 16,000 ಕೋಟಿ ರೂಪಾಯಿಗಳು. ನಡೆದ ಅಕ್ರಮದ ಅಂದಾಜು 1 ಲಕ್ಷ ಕೋಟಿಗೂ ಮೀರಿದೆ. ಈ ಕೇಸ್‌ಗಳಲ್ಲಿಯೇ ಜನಾರ್ಧನರೆಡ್ಡಿ ಈಗಲೂ ಬೆಂಗಳೂರು–ಹೈದ್ರಾಬಾದ್‌ಗಳ ಜೈಲುಗಳಲ್ಲಿ ಖೈದಿಯಾಗಿ ಇರುವುದು. ಕರ್ನೂಲು, ಬಳ್ಳಾರಿ ಜಿಲ್ಲೆಗೆ ಭೇಟಿ ನೀಡಕೂಡದು ಎಂದು ನ್ಯಾಯಾಲಯಗಳು ತಡೆಯೊಡ್ಡಿರುವುದು. ಮಗಳ ಮದುವೆಗೆಂದು ಪೆರೋಲ್ ಮೇಲೆ ಹೊರ ಬಂದ ರೆಡ್ಡಿ ತೋರಿಸಿದ ದವಲತ್ತಿನ ದರ್ಬಾರು ಇದು. ಅದೂ ಸರ್ಕಾರಕ್ಕೆ, ಜನತೆಗೆ, ದೇಶಕ್ಕೆ ಸಲ್ಲಬೇಕಾದ ಹಣ ಸಂಪತ್ತಿನ ಅಕ್ರಮ ಬಳಕೆಯಲ್ಲಿ!.

ಇಲ್ಲಿ ಬರುವ ಪ್ರಶ್ನೆ ದೇಶದ ಸಾಮಾನ್ಯ ನಾಗರೀಕರು ತಮ್ಮಲ್ಲಿರುವ 500 ನೋಟುಗಳನ್ನು ಬದಲಾಯಿಸಿಕೊಳ್ಳಲು 4000 ಮಿತಿ, ಈಗ 2000 ಮಿತಿ ಇರುವ ಹಿನ್ನೆಲೆಯಲ್ಲಿ ಹಗಲಿಡೀ ಪರಿತಪಿಸುವಾಗ, 'ಗಾಲಿ' ಗಳಿಗೆ 500 ಕೋಟಿ ರೂ. ಗಳು ಖರ್ಚು ಮಾಡಲು ಎಲ್ಲಿಂದ ಸಿಕ್ಕಿತು?. ಅವರ ಭಟ್ಟಂಗಿಗಳು ಹೇಳುವಂತೆ ಈ ಹಿಂದೆಯೇ ರೆಡ್ಡಿ 10,000 ಕೋಟಿ ರೂಪಾಯಿಗಳನ್ನು ಸರ್ಕಾರಕ್ಕೆ ಸಲ್ಲಿಸಿ 6000 ಕೋಟಿಯನ್ನು ಬಿಳಿಯಾಗಿಸಿಕೊಂಡಾಗಿದೆ ಎಂಬುದು. ಇದು ನಿಜವೇ ಆಗಿದ್ದರೆ ಈ ಹಣವೂ ಅಕ್ರಮದಲ್ಲಿಯೇ ಗಳಿಸಿದ್ದು. ಅದರ ಬಲದಿಂದಲೇ ರಾಜಕಾರಣ, ದೌರ್ಜನ್ಯ, ದವಲತ್ತಿನ ಮೆರವಣಿಗೆ. ಅದಕ್ಕಾಗಿ ಅಂದು ನಾವು ಆಗ್ರಹಿಸಿ ರೆಡ್ಡಿಗಳ ಬಂಧನವಷ್ಟೇ ಸಾಲದು, ಅವರ ಎಲ್ಲಾ ಆಸ್ತಿಯನ್ನು ಮುಟ್ಟುಗೋಲು ಹಾಕಿಕೊಳ್ಳಿ ಎಂದು. ಹಿಂದೆ–ಈಗ ಬಿಜೆಪಿ ಗೆ ಮಾತು ಕೇಳಲಿಲ್ಲ, ಅದಕ್ಕೂ ಬೇಕಿರಲಿಲ್ಲ.

ಪುಟ 4 ಕ್ಕೆ

ಸಬ್ಸಿಡಿ ಹಾಗೂ ಶೇ.4ರ ಬಡ್ಡಿ ದರದಲ್ಲಿ ಸ್ವಸಹಾಯ ಗುಂಪುಗಳಿಗೆ ಸಾಲ ನೀಡಿ

ಮಹಿಳಾ ಸಬಲೀಕರಣ ಎನ್ನುತ್ತಾ ಮಹಿಳೆಯರ ಅಭಿವೃದ್ಧಿ ಬಗ್ಗೆ ಮಾತಾಡುವ ಸರಕಾರ ಘೋಷಿಸಿದ ಶೇ.4ರ ಬಡ್ಡಿಯ ಸಾಲವನ್ನು ಇನ್ನೂ ಮಹಿಳಾ ಸ್ವಸಹಾಯ ಗುಂಪುಗಳಿಗೆ ನೀಡದೆ ಸತಾಯಿಸುತ್ತಿದೆ ಎಂದು ಸಂಗಾತಿ ಗುಂಪು ಯೋಜನೆಯ ವ್ಯವಸ್ಥಾಪಕ ನಿರ್ದೇಶಕರಾದ ನ್ಯಾಯವಾದಿ ಬಿ.ಎಂ.ಭಟ್ ಹೇಳಿದರು.

ಅವರು ನವೆಂಬರ್ 15ರಂದು ಕಳೆಂಜ ಗ್ರಾಮದ ಕಾಯರ್ತಡ್ಕದಲ್ಲಿ ಸಂಗಾತಿ ಗುಂಪುಗಳ ಜಂಟಿ ಸಭೆಯನ್ನುದ್ದೇಶಿಸಿ ಮಾತನಾಡಿ "ಸರಕಾರ ಘೋಷಿಸಿದಂತೆ ಮಹಿಳಾ ಸ್ವಸಹಾಯ ಗುಂಪುಗಳಿಗೆ ಶೇ.4 ಬಡ್ಡಿ ದರದಲ್ಲಿ ಬ್ಯಾಂಕ್ ಸಾಲ ಒದಗಿಸಲು, ಬಡ ಜನರ ಅಭಿವೃದ್ಧಿಗೆ ಸರಕಾರ ಮುಂದಾಗಬೇಕೆಂದು ಒತ್ತಾಯಿಸಿ ನವೆಂಬರ್ 21ರಂದು ಬೆಳ್ತಂಗಡಿ ತಾಲೂಕು ತಹಶೀಲ್ದಾರ್ ಮತ್ತು ಸಿಡಿಪಿಓ ಮೂಲಕ ಸರಕಾರಕ್ಕೆ ಮನವಿ ನೀಡಲಿದ್ದೇವೆ. ಸಂಗಾತಿ ಗುಂಪುಗಳ ಎಲ್ಲಾ ಸದಸ್ಯರು ಈ ಹೋರಾಟದಲ್ಲಿ ಭಾಗವಹಿಸಿ ಈ ಸವಲತ್ತುಗಳನ್ನು ಪಡಕೊಳ್ಳಲು ಮುಂದಾಗಬೇಕೆಂದು ಅವರು ಕರೆ ನೀಡಿದರು.

ಅದೇ ರೀತಿ ಭೂಹೀನ ಪ್ರತಿ ಕುಟುಂಬಕ್ಕೂ ಕನಿಷ್ಟ 5 ಎಕ್ರೆ ಭೂಮಿ ಸಿಗಬೇಕೆಂಬ ಕರ್ನಾಟಕ ಪ್ರಾಂತ ರೈತ ಸಂಘದ ಹೋರಾಟಕ್ಕೂ ಬೆಂಬಲ ನೀಡಿ ಯಶಸ್ವಿಗೊಳಿಸೋಣ ಎಂದು ಕರೆ ನೀಡಿದರು.

ಸಭೆಯಲ್ಲಿ ಸಂಗಾತಿ ಗುಂಪು ಯೋಜನೆಯ ತಾಲೂಕು ಸಂಚಾಲಕ ಜಯರಾಮ ಮಯ್ಯ, ಸಹಸಂಚಾಲಕ ಲೋಕೇಶ್ ಕುದ್ಯಾಡಿ, ಶ್ರೀಮತಿ ನೆಬಿಸಾ, ದೇವಕಿ, ಜಯಶ್ರೀ, ಶ್ರೀಮತಿ ಇಂದಿರಾ ಶ್ಯಾಮರಾಜ್ ಪಟ್ರಮೆ ಮೊದಲಾದವರು ಸಭೆಯಲ್ಲಿ ಉಪಸ್ಥಿತರಿದ್ದರು.

ಇದೇ ರೀತಿ ಸಂಗಾತಿ ಗುಂಪುಗಳ ಜಂಟಿ ಸಭೆಯು ಸಾಲೆತಡ್ಕ, ಕಿಲ್ಲೂರು, ನಡ, ಮಿತ್ತಬಾಗಿಲು, ಕಕ್ಕಿಂಜೆ, ಚಾರ್ಮಾಡಿ, ನೆರಿಯ, ಮೀಯಾರು, ಪಟ್ರಮೆ, ಬೆಳಾಲು, ಉಜಿರೆ, ಕುದ್ಯಾಡಿ, ನಾರಾವಿ, ಹೊಸಂಗಡಿ, ಗರ್ಡಾಡಿ, ಸೋಣಂದೂರು, ಕುಕ್ಕಳ, ಕಲ್ಲೇರಿ, ಮೊಗ್ರು, ಕಣಿಯೂರು, ಇಳಂತಿಲ ಮೇಲಂತಬೆಟ್ಟು, ಕಲ್ಮಂಜ, ಬದ್ಯಾರ್, ಧರ್ಮಸ್ಥಳ, ಮೊದಲಾದ ಕಡೆ ನಡೆಯಿತು.

ನಾರಾಯಣ ಕೈಕಂಬ, ಶ್ರೀಮತಿ ಪುಷ್ಪಾ ಮುಗುಳಿ, ಲಾರೆನ್ಸ್ ಕೈಕಂಬ, ರೇಖಾ ಅಳದಂಗಡಿ, ಉಜಿರೆ ರಾಮಚಂದ್ರ, ಉಜಿರೆ ಸಂಜೀವ ನಾಯ್ಕ, ಹೊಸಂಗಡಿ ನಾರಾಯಣ ಪೂಜಾರಿ, ವಿಠಲ ಮಲೆಕುಡಿಯ, ಚನಿಯಪ್ಪ ಮಲೆಕುಡಿಯ, ಸದಾಶಿವ ಮಲೆಕುಡಿಯ, ಜಯಾನಂದ ಮಲೆಕುಡಿಯ ಮೊದಲಾದವರು ಜಂಟಿ ಸಭೆಯನ್ನು ವ್ಯವಸ್ತಿತವಾಗಿ ನಡೆಸಿಕೊಟ್ಟರು.

ನೆಹರು ಮೈದಾನದಲ್ಲಿ ಯಕ್ಷಗಾನ ಕಾರ್ಯಕ್ರಮಕ್ಕೆ ಅವಕಾಶ ನೀಡಿ

ಉಡುಪಿ ಜಿಲ್ಲೆ ಕುಂದಾಪುರದ ನೆಹರು ಮೈದಾನದಲ್ಲಿ ನಡೆಯುವ ಯಕ್ಷಗಾನ ಕಾರ್ಯಕ್ರಮಗಳು ಈ ಹಿಂದಿನಂತೆ ನಡೆಯಲು ಅವಕಾಶ ನೀಡಬೇಕು. ಇದಕ್ಕೆ ನೂರಾರು ವರ್ಷಗಳ ಇತಿಹಾಸವಿದೆ. ಕಲೆ, ಕಲಾಮೇಳ, ಕಲಾವಿದರು, ಕಾರ್ಯಕ್ರಮದ ಸಂಘಟಕರು, ವ್ಯಾಪಾರಸ್ಥರು ಎಲ್ಲರ ಜೀವನದ ಪ್ರಶ್ನೆ ಇದರಲ್ಲಿ ಅಡಗಿದೆ. ಕಲೆಯ ಮೇಲಿನ ಆಸಕ್ತಿ ಇರುವ ಜನ ವಿಭಾಗದ ಭವಿಷ್ಯದ ಪ್ರಶ್ನೆ ಕೂಡಾ ಇದಾಗಿದೆ.

ಸಾಂಸ್ಕೃತಿಕ ಚಟುವಟಿಕೆಗಳಿಗೆ ಅಡ್ಡಿಯಾಗುವ ಯಾವ ಕ್ರಮ ತೆಗೆದುಕೊಳ್ಳದೇ ಮಾನ್ಯ ತಹಸಿಲ್ದಾರರು, ಜನಪ್ರತಿನಿಧಿಗಳು ನೀಡುವ ಕಾರಣಗಳಿಗೆ ಬದಲಿ ವ್ಯವಸ್ಥೆ ಮಾಡಿ, ನೆಹರು ಮೈದಾನದಲ್ಲಿ ಯಕ್ಷಗಾನ, ನಾಟಕ ಹಾಗೂ ಸಾರ್ವಜನಿಕ ಸಭೆ ಸಮಾರಂಭಗಳಿಗೆ, ಇತರ ಸಾಂಸ್ಕೃತಿಕ ಚಟುವಟಿಕೆಗಳಿಗೆ ಅವಕಾಶ ಮಾಡಬೇಕೆಂದು ಸಿಪಿಐ(ಎಂ) ಕುಂದಾಪುರ ವಲಯ ಸಮಿತಿಯ ತಾಲೂಕು ಆಡಳಿತವನ್ನು ಒತ್ತಾಯಿಸುತ್ತದೆ ಕಾರ್ಯದರ್ಶಿ ಹೆಚ್.ನರಸಿಂಹ ತಿಳಿಸಿದ್ದಾರೆ. ಅವಕಾಶ ನೀಡದೇ ಇದ್ದಲ್ಲಿ ತೀವ್ರ ಹೋರಾಟದ ಕಾರ್ಯಕ್ರಮಗಳನ್ನು ರೂಪಿಸಬೇಕಾಗುತ್ತದೆ ಎಂದರು.

ಅದ್ದೂರಿ ಮದುವೆಗೆ ಕಡಿವಾಣ ಏಕಿಲ್ಲ......... ಪುಟ 3 ರಿಂದ

ಈಗ–ಹಿಂದೆ ಕಾಂಗ್ರೆಸ್ ಪಕ್ಷಕ್ಕೆ ಇದು ಬೇಕೇ ಆಗಿಲ್ಲ. ಅಂದರೆ ಮೊಕದ್ದಮೆ, ತೊಡೆ ತಟ್ಟುವುದು ಒಂದು ನಾಟಕವೇ ಆದಂತಾಯಿತಲ್ಲ.

ಈಗಲೂ ಕಪ್ಪು ಹಣದ ವಿರುದ್ಧ ಸಮರಸಾರಿದ್ದೇವೆ ಎಂದು ಬೊಗಳೆ ಹೊಡೆವ ಪ್ರಧಾನಮಂತ್ರಿ ಮೋದಿ, ಹಣಕಾಸು ಸಚಿವ ಜೇಟ್ಲಿ ಬಾಯಿ ಮುಚ್ಚಿ ಸುಮ್ಮನಿರುವುದೇಕೆ? ತೆರಿಗೆ ಅಧಿಕಾರಿಗಳು ಏನು ಮಾಡುತ್ತಾರೆ? ಅಂದರೆ ಮೋದಿ ಆಡಳಿತದಲ್ಲಿ ಬಿಜೆಪಿ ಸಖ್ಯದಲ್ಲಿದ್ದರೆ ಅವರು ಪವಿತ್ರರು. ಅವರಿಗೊಂದು ನ್ಯಾಯ, ಜನ ಸಾಮಾನ್ಯರಿಗೆ ಇನ್ನೊಂದು! ಇದು ಪ್ರಜಾಪ್ರಭುತ್ವವೋ ಅಥವಾ ಸರ್ವಾಧಿಕಾರತ್ವವೋ? ಬಿಜೆಪಿ ನಾಯಕರ ಡೋಂಗಿತನ 'ಗಾಲಿಗಳ' ಮುಂದೆ ಬಯಲಾಗಿದೆ! ಬೆತ್ತಲಾಗಿದೆ!

ಜೈಲಿನಲ್ಲಿ ಕೈದಿಯಾಗಿರುವ ಜನಾರ್ಧನರೆಡ್ಡಿ ಈ ಮದುವೆಯನ್ನು ಅದ್ದೂರಿ ಮಾಡುವ ಮೂಲಕ ತಾನು ಇನ್ನೂ ಬಲವಾಗಿ, ಜೀವಂತವಾಗಿ ಇದ್ದೇನೆ, ತನ್ನ ಆಟ ಮುಗಿದಿಲ್ಲ, ಹೊರಬಂದ ಕೂಡಲೇ ರಾಜಕೀಯ ಆಟಕ್ಕೆ ರೆಡಿ ಎಂದು ತೋರಿಸುವ ಇಚ್ಛೆ ಇದ್ದಂತೆ ಕಾಣುತ್ತದೆ.

ಈ ಮೂಲಕ ಸಮಾಜಕ್ಕೆ ನೀಡಿದ ಸಂದೇಶ ಅತ್ಯಂತ ಅಪಾಯಕರವಾಗಿದೆ. ಮದುವೆಗಾಗಿಯೇ ಸಾಲಮಾಡಿ ಜೀವನವಿಡೀ ಶೋಷಣೆ, ಸುಲಿಗೆಯ ನರಕದಲ್ಲಿ ನರಳುವ ಜನ ಸಾಮಾನ್ಯರು, ಗಂಡಿ–ಗೆ ವರದಕ್ಷಿಣೆ, 'ವರೋಪಚಾರ' ಮಾಡಲಾಗದೇ ನರಳುವ 'ನತದೃಷ್ಟರು, ಕಣ್ಣೆದುರೇ ಇರುವಾಗ ಈ ಅದ್ದೂರಿ ವಿವಾಹಗಳು ಜನಸಾಮಾನ್ಯರನ್ನು ನಿಕೃಷ್ಟತೆಯಿಂದ ಕಂಡು ಅಣಕಿಸುತ್ತವೆ, ಅಮಾನವೀಯ ಅವಮಾನಿಸುತ್ತವೆ.

ಇಂತಹ ಖಂಡನೀಯ ವಿವಾಹಗಳಿಗೆ ಕಡಿವಾಣ ಹಾಕಲೇಬೇಕು, ಆಹ್ವಾನ ಬಂದರೆ ಧಿಕ್ಕರಿಸಿ, ಬಹಿಷ್ಕರಿಸಬೇಕು.

ಮೇಲಾಗಿ ಸರ್ಕಾರದ ಸಂಸ್ಥೆಗಳು ಅಂತಹವರನ್ನು ದಂಡಿಸಿ, ಕಠಿಣ ಕ್ರಮ ಕೈಗೊಳ್ಳಬೇಕು. ನಮ್ಮ ರಾಜ್ಯ ಸರ್ಕಾರವೇನೋ ಅದ್ದೂರಿ ಮದುವೆಗಳಿಗೆ ಕಡಿವಾಣ ಹಾಕುವ ಮಸೂದೆ ಮಂಡಿಸುವುದಾಗಿ ಹೇಳುತ್ತಿದೆ, ಹೇಳುತ್ತಲೇ ಇದೆ. ಆದರೆ ರಾಜ್ಯದ ಕಾಂಗ್ರೆಸ್ ಸರ್ಕಾರಕ್ಕೆ ರಾಜಕೀಯ ಇಚ್ಛಾಶಕ್ತಿಯೇ ಇಲ್ಲ.

ಮೇಲಾಗಿ ಅಲ್ಲಿಯೂ ಅದ್ದೂರಿ – ಆಡಂಬರ ಪ್ರದರ್ಶನ ಮಾಡಬೇಕೆಂಬುವ ಬಲವಾದರೂ ಎಲ್ಲಿಂದ ಬರಬೇಕು? ಇವೆಲ್ಲವನ್ನೂ ಸಿದ್ಧರಾಮಯ್ಯನವರು, ಖಾಸಗಿ ಮಸೂದೆ ಮಂಡಿಸಿದ್ದ ಸಚಿವ ರಮೇಶಕುಮಾರ್‌ರವರು ಮೀರುವರೇ? ನೋಡಬೇಕು.

ಈ ಸಂದರ್ಭದಲ್ಲಿ ಕನಿಷ್ಠ ಕೇಂದ್ರ ಸರ್ಕಾರ 'ಗಾಲಿ' ಆಡಂಬರದ ಮದುವೆಯ ಖರ್ಚು ಆದಾಯಗಳ ಬಗ್ಗೆ ಕೂಡಲೇ ಕ್ರಮ ವಹಿಸಬೇಕು. ಸಂಪತ್ತನೆಲ್ಲಾ ವಶಪಡಿಸಿಕೊಳ್ಳಬೇಕು. ಇಲ್ಲವಾದರೆ ತನ್ನದು ಕೇವಲ್ಲ ಬೂಟಾಟಿಕೆಯ ಪ್ರದರ್ಶನ, ಡೋಂಗಿ ನಾಟಕ ಎನ್ನುವುದನ್ನೂ ಮೋದಿ ಒಪ್ಪಿಕೊಳ್ಳಬೇಕು.

ಪ್ರೋ. ಎಸ್.ಆರ್. ನಾರಾಯಣರಾವ್ ಅವರಿಗೆ ಶ್ರದ್ಧಾಂಜಲಿ

ಉತ್ತರ ಕನ್ನಡ ಜಿಲ್ಲೆ ಪ್ರೋ. ಎಸ್. ಆರ್.ನಾರಾಯಣರಾವ್ ಅವರ ಜನ್ಮ ಭೂಮಿಯಲ್ಲ. ಕರ್ಮಭೂಮಿ. ಮೂರು ದಶಕಗಳಿಗೂ ಹೆಚ್ಚು ಕಾಲ ಕುಮಟಾ ಕಾಲೇಜಿನಲ್ಲಿ ಉಪನ್ಯಾಸಕರಾಗಿ ಪ್ರಾಚಾರ್ಯರಾಗಿ ಸೇವೆ ಸಲ್ಲಿಸಿದ ಅವರು ಉತ್ತರ ಕನ್ನಡವನ್ನು ಪ್ರೀತಿಸಿದರು. ಇಲ್ಲಿಯ ಜನಜೀವನದಲ್ಲಿ ಒಂದಾಗಿ ಬಾಳಿ ಶ್ರೇಷ್ಠ ಶಿಕ್ಷಕರೆಂದು ಮನೆ ಮಾತಾದರು. ಶ್ರೇಷ್ಠ ವಿಚಾರವಾದಿಯೂ ಆಗಿದ್ದ ನಾರಾಯಣ ರಾವ್ ಅವರು ಪ್ರಜಾಪ್ರಭುತ್ವದ ಮೌಲ್ಯಗಳಲ್ಲಿ ಮತ್ತು ಮಾರ್ಕ್ಸವಾದದಲ್ಲಿ ಆಳವಾದ ಶ್ರದ್ಧೆ ಇದ್ದವರು, ವಿಚಾರ ಕ್ರಾಂತಿಯ ಕನಸು ಕಂಡವರು.

ಗಿಬ್ ಗುಂಪು, ಹಂಸ ಮಂಟಪ, ಗೌರೀಶ ಕಾಯ್ಕಿಣಿ ಪ್ರತಿಷ್ಠಾನ ಸಂಘಟನೆಗಳ ಪೋಷಕ ಶಕ್ತಿಯಾಗಿದ್ದ ಅವರು ಈ ಸಂಘಟನೆಗಳ ಮೂಲಕ ಜಿಲ್ಲೆಯಲ್ಲಿ ವೈಚಾರಿಕ ಜಾಗೃತಿಗೆ ಹಾಗೂ ಜಿಲ್ಲೆಯ ಸಾಹಿತ್ಯಿಕ ವೃದ್ಧಿಗೆ ಶ್ರಮಿಸಿದರು. 'ಚಿಂತನ ಉತ್ತರ ಕನ್ನಡ'ವು ಪ್ರಾರಂಭವಾದಾಗ ಅದಕ್ಕೆ ನೈತಿಕ ಬೆಂಬಲವಾಗಿ ನಿಂತವರು ಅವರು. ಅವರ ನಿಧನ ಜಿಲ್ಲೆಯ ವೈಚಾರಿಕ ಕ್ಷೇತ್ರಕ್ಕೆ ಆದ ನಷ್ಟ ಎನ್ನುವುದಾಗಿ ಸಹಯಾನ(ಡಾ.ಆರ್. ವಿ. ಭಂಡಾರಿ ನೆನಪಿನ ಸಂಸ್ಕೃತಿ ಅಧ್ಯಯನ ಕೇಂದ್ರ)ಕೆರೆಕೋಣ ಭಾವಿಸುತ್ತದೆ ಮತ್ತು ಅವರಿಗೆ ಭಾವಪೂರ್ಣ ಶ್ರದ್ಧಾಂಜಲಿ ಅರ್ಪಿಸುತ್ತದೆ.

ಡಾ. ಆರ್. ವಿ. ಭಂಡಾರಿಯವರ ಆತ್ಮೀಯರಾಗಿದ್ದ ಅವರು ಭಂಡಾರಿಯವರ ವಿಚಾರಗಳೊಂದಿಗೆ ಸಹಮತ ಹೊಂದಿದ್ದರು. ಜನ ಶಿಕ್ಷಣದ ಚಟುವಟಿಕೆಗಳಲ್ಲಿ ಅವರೊಂದಿಗೆ ಕೈ ಜೋಡಿದ್ದನ್ನು ನೆನಪಿಸಿಕೊಳ್ಳುತ್ತೇವೆ. ಆರ್.ವಿ ಯವರ ನಿಧನಾನಂತರ ಸ್ಥಾಪನೆಯಾದ "ಸಹಯಾನ" ಒಬ್ಬ ಸಹಯಾನಿಯನ್ನು ಕಳೆದುಕೊಂಡಿದೆ ಎಂದು ಮತ್ತು ಸಹಯಾನ ಅವರಿಗೆ ಶ್ರದ್ಧಾಂಜಲಿ ಅರ್ಪಿಸುತ್ತದೆ ಎಂದು ಗೌರವಾಧ್ಯಕ್ಷ ನಾಡೋಜ ಬರಗೂರು ರಾಮಂಚಂದ್ರಪ್ಪ, ಅಧ್ಯಕ್ಷರಾದ ಶಾಂತಾರಾಮ ನಾಯಕ ಹಿಚ್ಕಡ, ಕಾರ್ಯಧ್ಯಕ್ಷರಾದ ವಿಷ್ಣು ನಾಯ್ಕ ತಿಳಿಸಿದ್ದಾರೆ. ಮುಂಬರುವ ಸಹಯಾನ ಸಾಹಿತ್ಯೋತ್ಸವವನ್ನು ಅವರಿಗೆ ಅರ್ಪಿಸುತ್ತದೆ ಎಂದು ಸಹಯಾನದ ಸಮಿತಿ ನಿರ್ಧರಿಸಿದೆ.

– ವಿಠ್ಠಲ ಭಂಡಾರಿ

ಅತಿಥಿ ಉಪನ್ಯಾಸಕರ ಪ್ರತಿಭಟನೆ



ಸೇವಾ ಭದ್ರತೆ ಒದಗಿಸುವಂತೆ ಆಗ್ರಹಿಸಿ ರಾಜ್ಯ ಸರಕಾರಿ ಪ್ರಥಮ ದರ್ಜೆ ಕಾಲೇಜುಗಳ ಅತಿಥಿ ಉಪನ್ಯಾಸಕರ ಸಂಘದ ಸದಸ್ಯರು ನವೆಂಬರ್ 15ರಂದು ಬೆಂಗಳೂರಿನಲ್ಲಿ ಪ್ರತಿಭಟನೆ ನಡೆಸಿದರು.

ಸಸೇವಾ ಹಿರಿತನ ಹಾಗೂ ವಯೋಮಿತಿ ಆಧಾರದ ಮೇಲೆ ಅತಿಥಿ ಉಪನ್ಯಾಸಕರನ್ನು ಸೇವೆಯಲ್ಲಿ ವಿಲೀನ ಮಾಡುವಂತೆ, ಮಹಿಳಾ ಉಪನ್ಯಾಸಕರಿಗೆ ಹೆರಿಗೆ ರಜೆ ನೀಡುವಂತೆ ಪ್ರತಿಭಟನಾಕಾರರು ಆಗ್ರಹಿಸಿದರು. ಈಗಾಗಲೇ ಹಲವು ಬಾರಿ ಪ್ರತಿಭಟನೆ ನಡೆಸಿದರೂ ಸಹ ತಮ್ಮ ಬೇಡಿಕೆಗಳು ಈಡೇರಲಿಲ್ಲ ಎಂದು ಉಪನ್ಯಾಸಕರು ಆಗ್ರಹಿಸಿದರು.

ಸಂಘದ ಅಧ್ಯಕ್ಷರಾದ ಎನ್.ಶ್ರೀನಿವಾಸಾಚಾರ್ ಮಾತನಾಡಿ ಸೇವಾ ವಿಲೀನಕ್ಕೆ ಹಲವು ತೊಡಕುಗಳಿದ್ದು, ಅದರ ನಿವಾರಣೆಗೆ ತಜ್ಞರ ಸಮಿತಿ ರಚಿಸಬೇಕು. ಈ ಹಿಂದೆಯೇ ಸಮಿತಿ ರಚನೆಗೆ ಮುಂದಾಗಿದ್ದರೂ, ಆದರೆ ಪ್ರಕ್ರಿಯೆ ಕುಂಠಿತವಾಗಿದೆ. ಹಾಗಾಗಿ ಸಾಹಿತಿ ಡಾ॥ಬರಗೂರು ರಾಮಚಂದ್ರಪ್ಪ, ವಿಧಾನ ಪರಿಷತ್ ಸದಸ್ಯರು ಹಾಗೂ ಸಂಘದ ಪದಾಧಿಕಾರಿಗಳನ್ನು ಒಳಗೊಂಡ ಸಮಿತಿಯನ್ನು ಕೂಡಲೇ ರಚಿಸಬೇಕು ಎಂದು ಮನವಿ ಮಾಡಿದರು.

2016ರ ಜನವರಿಯಿಂದ ಫೆಬ್ರವರಿವರೆಗೆ ಸುಮಾರು ಒಂದು ತಿಂಗಳು ಪ್ರತಿಭಟನೆ ನಡೆಸಲಾಗಿದೆ. ಆ ಅವಧಿಯ ವೇತನ ಸಹ ಬಿಡುಗಡೆ ಮಾಡಬೇಕು ಎಂದು ಆಗ್ರಹಿಸಿದರು. ಡಿಸೆಂಬರ್ 15ರಂದು ಅತಿಥಿ ಉಪನ್ಯಾಸಕರ ಸಭೆ ನಡೆಸಿ, ಸರಕಾರದ ನಡೆ ಬಗ್ಗೆ ಮುಂದಿನ ನಡೆ ತೀರ್ಮಾನಿಸಲಾಗುವುದು ಎಂದು ಇದೇ ವೇಳೆ ತಿಳಿಸಿದರು.

ಹಳೆ ನೋಟು ಸ್ವೀಕರಿಸದ ಖಾಸಗಿ ಆಸ್ಪತ್ರೆಗಳ ವಿರುದ್ಧ ಪ್ರತಿಭಟನೆ



ಕೇಂದ್ರ ಸರಕಾರವು ಹಳೆಯ 500 ಮತ್ತು 1000 ನೋಟುಗಳನ್ನು ನಿಷೇಧ ಮಾಡಿದ್ದು, ಬ್ಯಾಂಕ್‌ಗಳಲ್ಲಿ ಸೂಕ್ತ ವ್ಯವಸ್ಥೆ ಇಲ್ಲದೆ ಸಾಮಾನ್ಯ ಜನರಿಗೆ ನೋಟು ಬದಲಾವಣೆ ಮಾಡಲು ಇನ್ನೂ ಸಾಧ್ಯವಾಗಲಿಲ್ಲ. ಕೆಲವು ಪ್ರಮುಖ ಕಡೆ ಹಳೆ ನೋಟು ಸ್ವೀಕರಿಸಬೇಕೆಂದು ತಿಳಿಸಿದ್ದರೂ ಸಹ ದಕ್ಷಿಣ ಕನ್ನಡ ಜಿಲ್ಲೆಯ ಸರಕಾರ ಆಸ್ಪತ್ರೆಗಳಲ್ಲಿ ಹಳೆಯ ನೋಟುಗಳನ್ನು ಸ್ವೀಕರಿಸುತ್ತಿಲ್ಲ. ಜೊತೆಗೆ ಖಾಸಗಿ ಆಸ್ಪತ್ರೆಗಳು ಸಹ ಸ್ವೀಕರಿಸುತ್ತಿಲ್ಲ.

ಕೂಡಲೇ ಕ್ರಮ ಕೈಗೊಳ್ಳಬೇಕೆಂದು ಡಿವೈಎಫ್‌ಐ ನೇತೃತ್ವದಲ್ಲಿ ನವೆಂಬರ್ 17ರಂದು ಪ್ರತಿಭಟನೆ ನಡೆಸಲಾಗಿದೆ. ಅಲ್ಲದೆ ಖಾಸಗಿ ಆಸ್ಪತ್ರೆಗಳ ಶುಲ್ಕವು ದುಬಾರಿಯಾಗಿದ್ದು ರೋಗಿಗಳು ತಕ್ಷಣ–ಕ್ಕೆ ಅಷ್ಟು ಹಣವನ್ನು ಹೊಸ ನೋಟುಗಳಿಗೆ ಬದಲಾಯಿಸಲು ಸಾಧ್ಯವಾಗುತ್ತಿಲ್ಲ. ಹಾಗಾಗಿ ರೋಗಿಗಳು ಗುಣಮುಖರಾದರೂ ಹಣದ ನೆಪವನ್ನು ಮುಂದಿಟ್ಟುಕೊಂಡು ಅವರನ್ನು ಬಂಧನದಲ್ಲಿ ಇಟ್ಟಿರುವಂತಹ ಪ್ರಕರಣಗಳು ಎಲ್ಲಾ ಖಾಸಗಿ ಆಸ್ಪತ್ರೆಗಳಲ್ಲಿ ನಡೆಯುತ್ತಿವೆ. ಈ ಎಲ್ಲಾ ಸಮಸ್ಯೆಗಳಿಂದ ಜನಸಾಮಾನ್ಯರು ತೀರಾ ಸಂಕಷ್ಟದಲ್ಲಿದ್ದಾರೆ. ಕೂಡಲೇ ಈ ಬಗ್ಗೆ ಕ್ರಮಕೈಗೊಳ್ಳಬೇಕೆಂದು ಜಿಲ್ಲಾಧಿಕಾರಿಗಳಿಗೂ ಸಹ ಮನವಿ ಸಲ್ಲಿಸಿ ಆಗ್ರಹಿಸಿದ್ದಾರೆ.

ಪ್ರತಿಭಟನೆಯಲ್ಲಿ ಡಿವೈಎಫ್‌ಐ ರಾಜ್ಯಾ ಧ್ಯಕ್ಷರಾದ ಮುನೀರ್ ಕಾಟಿಪಳ್ಳ, ಜಿಲ್ಲಾ ಕಾರ್ಯದರ್ಶಿ ಸಂತೋಷ ಬಜಾಲ್ ಮುಂತಾದವರು ಭಾಗವಹಿಸಿದ್ದರು.

ವರದಿ : ಸಂತೋಷ್ ಬಜಾಲ್

ಬೃಹತ್ ಸಾರ್ವಜನಿಕ ಸಂಸ್ಥೆಯಾದ, ಸಾವಿರಾರು ಕಾರ್ಮಿಕರು ಕೆಲಸ ಮಾಡುವ ಬಿಇಎಂಎಲ್ ಎಂಬ ಕಾರ್ಖಾನೆಯಲ್ಲಿ ಖಾಸಗೀಕರಣ ಮಾಡುವ ಕ್ರಮವನ್ನು ವಿರೋಧಿಸಿ ನೌಕರರು ಬೆಂಗಳೂರಿನ ಕೇಂದ್ರ ಕಛೇರಿ ಬಳಿ ನವೆಂಬರ್ 09ರಂದು ಮಾನವ ಸರಪಳಿ ನಡೆಸುವ ಮೂಲಕ ಕೇಂದ್ರದ ಬಿಜೆಪಿ ಸರ್ಕಾರದ ಕ್ರಮವನ್ನು ಖಂಡಿಸಿದರು. ಮಹಿಳಾ ಕಾರ್ಮಿಕರು ಒಳಗೊಂಡು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಿದ್ದರು.

ವರದಿ: ವಾ. ಉ.



ಮಂಗಳೂರು



ಮಂಗಳೂರಿಗೆ ಆಗಮಿಸಿದ ಕಿಸಾನ್ ಸಂಘರ್ಷ ಜಾಥಾ

ರೈತರ ಸಾಲ ಮನ್ನಾ ಮಾಡಲು ಡಾ|ಅಶೋಕ್ ಧವಳೆ ಕರೆ

ಕಳೆದ 20ಕ್ಕೂ ಹೆಚ್ಚಿನ ವರ್ಷಗಳಲ್ಲಿ ದೇಶದ ಕೃಷಿ ರಂಗ ಗಂಭೀರ ಬಿಕ್ಕಟ್ಟು ಎದುರಿಸುತ್ತಿದೆ. 1995–2015ರ ಅವಧಿಯಲ್ಲಿ ದೇಶದ ಮೂರೂವರೆ ಲಕ್ಷ ರೈತರು ಬ್ಯಾಂಕ್ ಹಾಗೂ ಇನ್ನಿತರ ಸಾಲ ಪಡೆದು ತೀರಿಸಲಾಗದೆ ಆತ್ಮಹತ್ಯೆ ಮಾಡಿಕೊಂಡಿದ್ದಾರೆ. ಅವರಲ್ಲಿ ಮಹಾರಾಷ್ಟ್ರದ ರೈತರು ಮೊದಲ ಸ್ಥಾನದಲ್ಲಿದ್ದರೆ, ಎರಡನೆ ಸ್ಥಾನದಲ್ಲಿ ಸಂಯುಕ್ತ ಆಂಧ್ರಪ್ರದೇಶದ ರೈತರಿದ್ದಾರೆ. ಮೂರನೇ ಸ್ಥಾನದಲ್ಲಿ ಕರ್ನಾಟಕದ ರೈತರಿದ್ದಾರೆ. ಯಾಕಾಗಿ ಈ ರೈತರು ಆತ್ಮಹತ್ಯೆ ಮಾಡಿಕೊಳ್ಳುತ್ತಿದ್ದಾರೆ ಎಂಬುದನ್ನು ನಾವು ವಿವೇಚಿಸಬೇಕಾಗಿದೆ ಎಂದು ಎಐಕೆಎಸ್ ಜಂಟಿ ಕಾರ್ಯದರ್ಶಿ ಮಹಾರಾಷ್ಟ್ರದ ಹಿರಿಯ ರೈತ–ಕಾರ್ಮಿಕ ಮುಖಂಡರೂ ಆದ ಡಾ||ಅಶೋಕ ಧವಳೆ ಹೇಳಿದರು.

ಅವರು ಮಂಗಳೂರಿನ ಸರಕಾರೀ ನೌಕರರ ಸಂಘದ ಸಭಾಂಗಣದಲ್ಲಿ ನವೆಂಬರ್ 15ರಂದು ಏರ್ಪಡಿಸಿದ್ದ ಅಖಿಲ ಭಾರತ ಕಿಸಾನ್ ಸಂಘರ್ಷ ಜಾಥಾದ ಸ್ವಾಗತ ಸಮಾರಂಭದಲ್ಲಿ ಸೇರಿದ್ದ ಸಾರ್ವಜನಿಕರನ್ನು ಉದ್ದೇಶಿಸಿ ಮಾತನಾಡುತ್ತಿದ್ದರು.

ಕಿಸಾನ್ ಸಂಘರ್ಷ ಜಾಥಾದ ತಂಡ ನಾಯಕರಾದ ಕೇರಳದ ಮಾಜಿ ಶಾಸಕ ಕೃಷ್ಣ ಪ್ರಸಾದ್ ಅವರು ಮಾತನಾಡಿ ರೈತರ ಬೆಳೆಗಳಿಗೆ ಬೆಲೆ ಸಿಗದೆ ರಸ್ತೆಗಳಲ್ಲಿ ಎಸೆದು ಹೋಗುವ ಚಿತ್ರಗಳು ಪತ್ರಿಕೆಗಳಲ್ಲಿ ವರದಿಯಾಗುತ್ತಿವೆ. ಅನೇಕ ಗ್ರಾಮೀಣ ಜನಗಳಿಗೆ ಕೃಷಿ ಭೂಮಿಯೂ ಇಲ್ಲ. ಇದ್ದಲ್ಲಿ ಜೀವನ ಮಾಡಲಾರದಂಥ ಪರಿಸ್ಥಿತಿ. ಇನ್ನೊಂದೆಡೆ ಇದೇ ಗ್ರಾಮಾಂತರಗಳಲ್ಲಿ ಭೂಮಾಲೀಕರು, ಬಡ್ಡಿ ಸಾಹುಕಾರರು, ವ್ಯಾಪಾರಿಗಳು ಬಲಿತು ಬಡವರ ಮೇಲೆ ದಬ್ಬಾಳಿಕೆ ಮಾಡುತ್ತಿದ್ದಾರೆ. ಬಡವರ ಮಧ್ಯೆ ಕೋಮುಭೇದ ಉಂಟುಮಾಡಿ ರೈತರು ಕೂಲಿಕಾರರು ತಮ್ಮ ಸಮಸ್ಯೆಯನ್ನು ಮರೆಯುವಂತೆ ಮಾಡಲಾಗುತ್ತಿದೆ. ನವ ಉದಾರೀಕರಣದ ನೀತಿಗಳು ಗ್ರಾಮೀಣ ಶ್ರೀಮಂತರಿಗೂ, ಕಾರ್ಪರೇಟ್ ಉದ್ಯಮಿಗಳಿಗೂ ಲಾಭಕರವಾಗಿ ಪರಿಣಮಿಸಿದೆ. ಕೋಮುವಾದವನ್ನು ಸೋಲಿಸಬೇಕಿದ್ದರೆ ನವ ಉದಾರವಾದವನ್ನು ಸೋಲಿಸಬೇಕು, ಜೊತೆಗೆ ನವಉದಾರೀಕರಣವನ್ನು ಸೋಲಿಸಲು ಕೋಮುವಾದವನ್ನು ಸೋಲಿಸಬೇಕು ಎಂಬುದಾಗಿ ಕೃಷ್ಣ ಪ್ರಸಾದ್ ವಿಶ್ಲೇಷಿಸಿದರು.

ಜಾಥಾ ತಂಡದ ಸದಸ್ಯರೂ ಕಿಸಾನ್ ಸಭಾದ ಕೇಂದ್ರ ಸಮಿತಿ ಸದಸ್ಯರೂ ಆದ ಒಮ್ಮೆಲೂರು ಶಂಕರನ್ ಮಾತನಾಡಿ, ಕೇರಳ, ತ್ರಿಪುರಾ ಹಾಗೂ ಪಶ್ಚಿಮ ಬಂಗಾಳ ರಾಜ್ಯಗಳನ್ನು ಹೊರತುಪಡಿಸಿ, ಬೇರಾವ ರಾಜ್ಯಗಳಿಗೂ ಭೂಸುಧಾರಣಾ ಕಾಯ್ದೆಯನ್ನು ಜಾರಿಗೊಳಿಸಿಲ್ಲ. ಕೇರಳದ ಭೂಸುಧಾರಣಾ ಕಾಯ್ದೆಯ ಪ್ರಕಾರ ಗರಿಷ್ಠ ಹಿಡುವಳಿ ಮಿತಿಯನ್ನು 15 ಎಕ್ರೆ ಎಂದು ನಿಗದಿಗೊಳಿಸಲಾಗಿದೆ. 15 ಎಕ್ರೆಗಿಂತ ಹೆಚ್ಚಿನ ಭೂಮಿಯನ್ನು ಸರ್ಕಾರ ವಶಕ್ಕೆ ಪಡೆದು ಭೂರಹಿತರಿಗೆ ವಿತರಿಸಿದೆ. ಕಮ್ಯೂನಿಸ್ಟ್ ಸರಕಾರದ ಈ ಕ್ರಮದಿಂದಾಗಿ ಕೇರಳದಲ್ಲಿ 30 ಲಕ್ಷ ಭೂರಹಿತರು ಭೂಮಿ ಪಡೆಯುವಂತಾಗಿದೆ ಎಂದು ಅವರು ಹೇಳಿದರು.

ಭೂಸುಧಾರಣಾ ಕಾಯ್ದೆಯ ಪರಿಣಾಮಕಾರಿ ಜ್ಯಾರಿ, ಭೂಸ್ವಾಧೀನತಾ ಮಸೂದೆಯ ರದ್ಧತಿ, ರೈತರ ಸಾಲ ಮನ್ನಾ, ಗ್ರಾಮೀಣ ಉದ್ಯೋಗ ಖಾತ್ರಿ ಯೋಜನೆಯ ಕೂಲಿ ಹೆಚ್ಚಳ, ವಸತಿ ಹೀನರಿಗೆ ಮನೆ ಸಹಿತ ನಿವೇಶನ, ವಾಸವಾಗಿರುವ ಸರಕಾರಿ ಹಾಗೂ ಅರಣ್ಯ ಜಮೀನಿನ ಹಕ್ಕು, ಕೃಷಿ ಉತ್ಪನ್ನಗಳಿಗೆ ವೆಚ್ಚದ ಒಂದೂವರೆಪಟ್ಟು ಬೆಲೆ, ಕೃಷಿ ಕೂಲಿಕಾರರಿಗೆ ಮತ್ತು ಬಡ ರೈತರಿಗೆ ಕನಿಷ್ಠ ರೂ.3,000 ಪಿಂಚಣಿ ಇತ್ಯಾದಿ ಬೇಡಿಕೆಗಳಿಗಾಗಿ 'ಕಿಸಾನ್ ಸಂಘದ ಜಾಥಾ' ನಡೆಸಲಾಗುತ್ತಿದೆ ಎಂಬುದಾಗಿ ಒ.ಶಂಕರನ್ ವಿವರಿಸಿದರು.

ನವಂಬರ್ 18 ರಂದು ಕರ್ನಾಟಕದ ರೈತರು ಮತ್ತು ಕೃಷಿಕೂಲಿಕಾರರು ಭೂಮಿಯ ಹಕ್ಕುಗಳಿಗಾಗಿ 'ಜೈಲ್‌ಭರೋ'ಚಳುವಳಿ ಹೂಡಲಿದ್ದಾರೆ ಎಂಬುದಾಗಿ ಕರ್ನಾಟಕ ಪ್ರಾಂತ ರೈತ ಸಂಘದ ರಾಜ್ಯಾಧ್ಯಕ್ಷ ಮಾರುತಿ ಮಾನ್ಪಡೆ ಹೇಳಿದರು.

ಜಾಥಾ ತಂಡದಲ್ಲಿದ್ದ ಕೇಂದ್ರ ಕಿಸಾನ್ ಸಮಿತಿ ಸದಸ್ಯೆ ಶ್ರೀಮತಿ ಪ್ರೀಜಾ, ಮಾಜಿ ಶಾಸಕ ಹಾಗೂ ಕಾಸರಗೋಡಿನ ಜಿಲ್ಲಾ ಕಿಸಾನ್ ಸಭಾ ಕಾರ್ಯದರ್ಶಿ ಕುಂಞಂಬು ಆಗಮಿಸಿ ವೇದಿಕೆಯಲ್ಲಿದ್ದರು. ಕರ್ನಾಟಕ ಪ್ರಾಂತ ರೈತ ಸಂಘದ ಜಂಟಿ ಕಾರ್ಯದರ್ಶಿ ಟಿ.ಎಲ್. ಕೃಷ್ಣೇಗೌಡ, ಜಾಥಾ ಸ್ವಾಗತ ಸಮಿತಿ ಗೌರವಾಧ್ಯಕ್ಷ ವಸಂತ ಆಚಾರಿ, ಸಭೆಯ ಅಧ್ಯಕ್ಷತೆ ವಹಿಸಿದ್ದ ಪ್ರಾಂತ ರೈತ ಸಂಘದ ದ.ಕ. ಜಿಲ್ಲಾಧ್ಯಕ್ಷ ಕೆ.ಆರ್.ಶ್ರೀಯಾನ್, ಪ್ರಧಾನ ಕಾರ್ಯದರ್ಶಿ ಯಾದವ ಶೆಟ್ಟಿ ವೇದಿಕೆಯ ಮೇಲೆ ಉಪಸ್ಥಿತರಿದ್ದರು. ಸುಮಾರು 300ಕ್ಕು ಹೆಚ್ಚಿನ ಜನ ಭಾಗವಹಿಸಿದ್ದರು.


ಕುಂದಾಪುರ

ದ್ . ಕ್ . ಜಿ ಲ್ಲ್ ಿಂ ು್ ು ಲ್ಲಿ ಕೋಮುಸೂಕ್ಷ್ಮ ಪರಿಸ್ಥಿತಿ ಇದ್ದುದರಿಂದ ಬಹಿರಂಗ ಸಭೆಯನ್ನು ಸಭಾಂಗಣಕ್ಕೆ ಸ್ಥಳಾಂತರಿಸಲಾಗಿತ್ತು. ಕಾರ್ಯದರ್ಶಿ ಯಾದವ ಶೆಟ್ಟಿ ಸ್ವಾಗತಿಸಿ ಉಪಾಧ್ಯಕ್ಷ ಕೃಷ್ಣಪ್ಪ ಸಾಲ್ಯಾನ್ ವಂದಿಸಿದರು. ಮಂಗಳೂರಿನ ಕಾರ್ಯಕ್ರಮದ ಬಳಿಕ ಜಾಥಾ ಕುಂದಾಪುರಕ್ಕೆ ತೆರಳಿತು.

ನವೆಂಬರ್ 15ರ ಸಂಜೆ ಉಡುಪಿ ಜಿಲ್ಲೆಯ ಕುಂದಾಪುರದ ಶಾಸ್ತ್ರೀ ಸರ್ಕಲ್ ಬಳಿ ಬಹಿರಂಗ ಸಭೆಯನ್ನು ಏರ್ಪಡಿಸಲಾಗಿತ್ತು. ಜಿಲ್ಲೆಯ ಮುಖಂಡರಾದ ಬಾಲಕೃಷ್ಣ ಶೆಟ್ಟಿ, ವೆಂಕಟೇಶ ಕೋಣಿ, ಮುಂತಾದ ಮುಖಂಡರು ಉಪಸ್ಥಿತರಿದ್ದರು.


ಬೆಳಗಾವಿ

ಉಡುಪಿ ಜಿಲ್ಲೆಯಲ್ಲಿ ಸಂಚರಿಸದ ಜಾಥಾ ನಂತರದಲ್ಲಿ ಉತ್ತರ ಕನ್ನಡ ಜಿಲ್ಲೆಯ ಕಾರವಾರ ಮತ್ತು ಸ್ವಾತಂತ್ರ್ಯ ಹೋರಾಟದ ಸ್ಫೂರ್ತಿ ಕೇಂದ್ರ ಅಂಕೋಲಕ್ಕೆ ನವೆಂಬರ್ 16ರಂದು ಆಗಮಿಸಿದಾಗ ಕರ್ನಾಟಕ ಪ್ರಾಂತ ರೈತ ಸಂಘದ ಮುಖಂಡರಾದ ಶಾಂತಾರಾಮ ನಾಯಕ್, ಗೌರೀಶಣ್ಣ, ಸಂತೋಷ ನಾಯ್ಕ, ಮತ್ತು ಯಮುನಾ ಗಾಂವ್ಕರ್ ಮುಂತಾದ ಮುಖಂಡರು ಜಾಥಾವನ್ನು ಸ್ವಾಗತಿಸಿದರು. ಜಾಥಾದ ಅಖಿಲ ಭಾರತ ಮುಖಂಡರು ಹಾಗೂ ರಾಜ್ಯ ಮುಖಂಡರು ಮುಖಂಡರು ಮಾತನಾಡಿದರು.

ಕರ್ನಾಟಕ ಮತ್ತು ಮಹಾರಾಷ್ಟ್ರದ ಗಡಿಭಾಗದ ಜಿಲ್ಲೆ ಬೆಳಗಾವಿಗೆ ಜಾಥಾ ಆಗಮಿಸಿದಾಗ ಅಭೂತಪೂರ್ವವಾಗಿ ಸ್ವಾಗತ ನೀಡಲಾಯಿತು. ಬಹಿರಂಗ ಸಭೆಯನ್ನು ಉದ್ದೇಶಿಸಿ ರಾಷ್ಟ್ರೀಯ ಮುಖಂಡರು ಮಾತನಾಡಿದರು. ಈ ಸಂದರ್ಭದಲ್ಲಿ ನೂರಾರು ರೈತರು ಭಾಗವಹಿಸಿದ್ದರು.

ಸತತ 6 8 ದಿನಗಳಿಂದ ದಕ್ಷಿಣ ಕನ್ನಡದಲ್ಲಿ 144 ಸೆಕ್ಷನ್ ಜಾರಿ ಇತ್ತು. ಟಿಪ್ಪು ಜಯಂತಿ ಮತ್ತು ಕೊಣಾಜೆ, ವಿಟ್ಲದಲ್ಲಿನ ಕೋಮುಗಲಭೆಗಳಿಂದಾಗಿ ಇಡೀ ಜಿಲ್ಲೆ ಉದ್ವಿಗ್ನ ಪರಿಸ್ಥಿತಿ ಇತ್ತು. ನವೆಂಬರ್ 16ರವರೆಗೆ ಇಡೀ ಜಿಲ್ಲೆಯಲ್ಲಿದ್ದ 144 ಸೆಕ್ಷನ್ ದಿನಾಂಕ 17 ರಿಂದ 23ರವರೆಗೂ ಕೆಲವು ಸೂಕ್ಷ್ಮ ಪ್ರದೇಶಗಳ ಜಾರಿಗೊಳಿಸಲಾಗಿದೆ. ಈ ಹಿನ್ನೆಲೆಯಲ್ಲಿ ಮಂಗಳೂರಿಗೆ ಆಗಮಿಸಿದ ಎಐಕೆಎಸ್ ಜಾಥಾ ಸ್ವಾಗತ ಕಾರ್ಯಕ್ರಮವನ್ನು ಬೇರೆಡೆ ನಡೆಸಲಾಗಿದೆ.

ಉಳ್ಳಾಲ, ಕೊಣಾಜೆಯಲ್ಲಿ ಸರಣಿ ಧಾಳಿ : ಉನ್ನತ ಮಟ್ಟದ ತನಿಖೆಗೆ ಆಗ್ರಹ

ದಕ್ಷಿಣ ಕನ್ನಡ ಜಿಲ್ಲೆಯ ಉಳ್ಳಾಲ ಮತ್ತು ಕೊಣಾಜೆ ಪೊಲೀಸ್ ಠಾಣೆಯಲ್ಲಿ ಸಾಮಾನ್ಯ ಜನರ ಮೇಲೆ ಸರಣಿ ಹಲ್ಲೆಗಳು ನಡೆಯುತ್ತಿದೆ. ಕೋಮು ಸೂಕ್ಷ್ಮ ಪ್ರದೇಶವಾದ ಈ ಎರಡು ಠಾಣಾ ವ್ಯಾಪ್ತಿಯಲ್ಲಿ ಗಲಭೆಗಳನ್ನು ನಡೆಸುವ ಹುನ್ನಾರ ಇದಾಗಿದೆ. ಕಳೆದ 3 ದಿನ 4 ಜನರು ಚೂರಿ ಇರಿತಕ್ಕೆ ಒಳಗಾಗಿರುವುದು ಈ ಭಾಗದ ಜನರು ಆತಂಕಕ್ಕೆ ಒಳಗಾಗಿದ್ದಾರೆ.



ಜನರು ಹೊರಗೆ ಬರಲು ಭಯಪಡುವ ವಾತಾವರಣ ನಿರ್ಮಾಣವಾಗಿದೆ. ಸೆಕ್ಷನ್ 144 ಇದ್ದಾಗಲೇ ಈ ರೀತಿಯ ಕೃತ್ಯಗಳು ನಡೆದಿರುವುದರಿಂದ ಪೊಲೀಸರು ಮತ್ತು ಸರಕಾರ ಈ ಪ್ರಕರಣಗಳನ್ನು ಗಂಭೀರವಾಗಿ ಪರಿಗಣಿಸಬೇಕು. ಪೊಲೀಸ್ ಇಲಾಖೆ ಇಬ್ಬರನ್ನು ಅನುಮಾನಾಸ್ಪದವಾಗಿ ಬಂಧಿಸಿದ ದಿನವೇ ಸಂಜೆ ರಾಝಿಕ್ ಎಂಬ ಸಣ್ಣ ಹುಡುಗನ ಮೇಲೆ ಹಲ್ಲೆಯಾಗಿದೆ. ಇದನ್ನು ಗಮನಿಸಿದಾಗ ಯಾವುದೇ ಒಂದು ತಂಡ ಇದರ ಹಿಂದೆ ಕೆಲಸ ಮಾಡುತ್ತಿದೆ ಎಂಬ ಅನುಮಾನ ವ್ಯಕ್ತವಾಗಿದೆ.

ಅಲ್ಲದೇ ರಾಜಕೀಯ ಲಾಭ ಪಡೆಯಲು ಕೋಮುವಾದಿಗಳು ಮತ್ತು ಮೂಲಭೂತವಾದಿಗಳು ಕಾಯುತ್ತಿದ್ದಾರೆ. ಈ ಹಿಂದೆ ನಡೆದ ಕಾರ್ತಿಕ್ ರಾಜ್ ಕೊಲೆ ಪ್ರಕರಣದ ಆರೋಪಿಗಳು ಇನ್ನೂ ಸಿಕ್ಕಿಲ್ಲ. ಹಾಗಾಗಿ ಎಲ್ಲಾ ಪ್ರಕರಣಗಳನ್ನು ಉನ್ನತ ಮಟ್ಟದ ತನಿಖೆಗೆ ಒಳಪಡಿಸಬೇಕು ಮತ್ತು ಇದಕ್ಕೆ ಸ್ಥಳೀಯ ಪೊಲೀಸ್ ಅಧಿಕಾರಿಗಳ ವಿಶೇಷ ತಂಡ ರಚನೆ ಮಾಡಿ, ಅರೋಪಿಗಳನ್ನು ಬಂಧಿಸಿ ಸೂಕ್ತ ಕ್ರಮ ಕೈಗೊಂಡು ಜನರನ್ನು ಆತಂಕದಿಂದ ಹೊರಬರುವಂತೆ ಮಾಡಬೇಕೆಂದು ಭಾರತ ಪ್ರಜಾಸತ್ತಾತ್ಮಕ ಯುವಜನ ಫೆಡರೇಷನ್ (ಡಿವೈಎಫ್ಐ) ದಕ್ಷಿಣ ಕನ್ನಡ ಜಿಲ್ಲಾ ಸಮಿತಿ ಆಗ್ರಹಿಸಿದೆ.

ನವೆಂಬರ್ 15ರಂದು ಡಿವೈಎಫ್ಐ ವತಿಯಿಂದ ಆಸ್ಪತ್ರೆ ದಾಖಲಾಗಿರುವ ವಿದ್ಯಾರ್ಥಿ ರಾಝಿಕ್ ರನ್ನು ಭೇಟಿ ಮಾಡಲಾಗಿದೆ. ಇದೇ ಸಂದರ್ಭದಲ್ಲಿ ನವಾಝ್ ಹಾಗೂ ಸಮೀರ್ ರವರ ಆರೋಗ್ಯವನ್ನು ವಿಚಾರಿಸಲಾಯಿತು. ಆಸ್ಪತ್ರೆಗೆ ಭೇಟಿ ನೀಡಿದ ಸಚಿವ ಯು.ಟಿ.ಖಾದರ್‌ರವರ ಬಳಿ ಘಟನೆಯ ಬಗ್ಗೆ ಸಂಘಟನಾ ಮುಖಂಡರು ಚರ್ಚಿಸಿದರು.

ಈ ಬಗ್ಗೆ ನವೆಂಬರ್ 16ರಂದು ಸಂಘಟನೆ ವತಿಯಿಂದ ಪತ್ರಿಕಾಗೋಷ್ಠಿ ನಡೆಸಲಾಗಿದೆ. ಡಿವೈಎಫ್ಐ ಜಿಲ್ಲಾಧ್ಯಕ್ಷರಾದ ದಯಾನಂದ ಶೆಟ್ಟಿ, ವಲಯ ಕಾರ್ಯದರ್ಶಿ ಜೀವನ್ ರಾಜ್ ಕುತ್ತಾರ್, ವಲಯ ಕೋಶಾಧಿಕಾರಿ ರಫೀಕ್ ಹರೇಕಳ, ಉಪಾಧ್ಯಕ್ಷರಾದ ಹರೀಶ್ ಕರಬೈಲು, ಜೊತೆ ಕಾರ್ಯದರ್ಶಿಗಳಾದ ರೋಹಿದಸ್ ಅಬ್ಬಂಜರ, ರಝ್ವಾಕ್ ಮೆಂಟೆಪದವು ಉಪಸ್ಥಿತರಿದ್ದರು. ■

ಅತಿಥಿ ಅಂಕಣ



ಪ್ರೊ. ಟಿ. ಆರ್. ಚಂದ್ರಶೇಖರ

ಉಳ್ಳವರಿಗೆ ವರ : ಉಳಿದವರಿಗೆ ಶಾಪ

ಕೇಂದ್ರ ಸರ್ಕಾರವು ಘೋಷಿಸಿರುವ ಐನೂರು ಮತ್ತು ಸಾವಿರ ರೂಪಾಯಿ ನೋಟುಗಳ ಅನಾಣ್ಯೀಕರಣ ಕ್ರಮವನ್ನು ಆರಂಭದಲ್ಲಿ ಹೊಗಳದವರೇ ಇಲ್ಲ ಅನ್ನುವಂತಿತ್ತು. ಪೈಪೋಟಿಯಲ್ಲಿ ಕೆಲವು ಜನರು ಸರ್ಕಾರದ ಕ್ರಮವನ್ನು ಶ್ಲಾಘಿಸುತ್ತಿದ್ದವರು ಈಗ ಮರುಆಲೋಚನೆ ಮಾಡತೊಡಗಿದ್ದಾರೆ. ಆ ಶ್ಲಾಘನೆಯಲ್ಲಿ ಸಕಾರಾತ್ಮಕ ಸಂಗತಿಗಳಿದ್ದುದನ್ನು ಅಲ್ಲಗಳೆಯಲು ಬರುವುದಿಲ್ಲ. ಆದರೆ ಕಪ್ಪುಹಣವನ್ನು ಹೊರತೆಗೆಯಲು ಸರ್ಕಾರವು ಅನುಸರಿಸಿದ ಕ್ರಮವು ಎಷ್ಟರ ಮಟ್ಟಿಗೆ ದುಡಿಯುವ ವರ್ಗಕ್ಕೆ ಅನುಕೂಲಕರ ಎಂಬುದನ್ನು ನಾವು ಯೋಚಿಸಬೇಕಾಗಿದೆ. ಕಪ್ಪು ಹಣವನ್ನು ಹೊರ ತೆಗೆಸಲು, ಸಮಾನಾಂತರ ಆರ್ಥಿಕತೆಯನ್ನು ಹತ್ತಿಕ್ಕಲು ಇದೊಂದೇ ದಾರಿಯೇ ಇದ್ದದ್ದು? ಪರ್ಯಾಯ ಮಾರ್ಗಗಳಿರಲಿಲ್ಲವೆ? ಬಡವರು, ದುಡಿಯುವ ವರ್ಗ, ಅಂಚಿನಲ್ಲಿರುವವರು ಮಾತ್ರ ಕಷ್ಟ ಪಡಬೇಕು, ಉಳ್ಳವರು ಕಪ್ಪು ಹಣವನ್ನು ಕೂಡಿಟ್ಟುಕೊಂಡೂ ಅನುಕೂಲ ಪಡೆಯಬೇಕು? ಇದು ಯಾವ ಸೀಮೆಯ ನ್ಯಾಯ? ದುಡಿಯುವ ವರ್ಗ ಅಂದಾಗ ಅದು ಕೇವಲ ನಗರ ಪ್ರದೇಶಗಳಲ್ಲಿನ ಸಂಘಟಿತ ವಲಯದ ಕೆಲಸಗಾರರು ಮಾತ್ರವಲ್ಲ, ನೌಕರಶಾಹಿ ಮಾತ್ರವಲ್ಲ ತಾನೆ! ನಮ್ಮ ಆರ್ಥಿಕತೆಯಲ್ಲಿನ ದುಡಿಮೆಗಾರರಲ್ಲಿ ಶೇ90ರಷ್ಟು ಅಸಂಘಟಿತ ವಲಯಗಳಲ್ಲಿದ್ದಾರೆ, ಗ್ರಾಮಗಳಲ್ಲಿದ್ದಾರೆ, ಕೃಷಿಯಲ್ಲಿದ್ದಾರೆ. ಇವರನ್ನು 'ದಿನಗೂಲಿ ದುಡಿಮೆಗಾರರು' ಎಂದು ಕರೆಯಬಹುದು. ಕರ್ನಾಟಕದಲ್ಲಿ 2011ರ ಜನಗಣತಿ ಪ್ರಕಾರ ದಿನಗೂಲಿ ದುಡಿಮೆಗಾರರ ಸಂಖ್ಯೆ 72 ಲಕ್ಷ. ಅನಾಣ್ಯೀಕರಣವು ಇವರಿಗೆ ಯಾವ ಬಗೆಯ ಭಾಗ್ಯವನ್ನು ಒದಗಿಸಿದೆ ಎಂಬುದನ್ನು ನೋಡುವ ಅಗತ್ಯವಿದೆ.

ಅನಾಣ್ಯೀಕರಣವನ್ನು ತಾತ್ವಿಕವಾಗಿ ಕಪ್ಪುಹಣದ ಸಮಸ್ಯೆಯನ್ನು ಹೋಗಲಾಡಿಸಲು ಸೂಕ್ತ ಕ್ರಮವೆಂದು ಒಪ್ಪಿಕೊಂಡರೂ ಅದನ್ನು ಅನುಷ್ಠಾನಗೊಳಿಸುತ್ತಿರುವ ರೀತಿಯು ಹೇಗೆ ಉಳಿದವರ ಬದುಕನ್ನು ಹೈರಾಣವಾಗಿಸುತ್ತಿದೆ ಎಂಬುದನ್ನು ಗಮನಿಸಬೇಕು. ಒಮ್ಮೆ ನೋಟು ಬದಲಾಯಿಸಿಕೊಳ್ಳಲು ಬ್ಯಾಂಕುಗಳ ಮುಂದೆ ಸರದಿ ನಿಂತಿರುವ ಜನರ ವರ್ಗ ಸ್ವರೂಪವನ್ನು ನೋಡಿದರೆ ಅದರ ಸಮಸ್ಯೆ ಅರ್ಥವಾಗುತ್ತದೆ. ಅದರಲ್ಲಿ ಕಪ್ಪುಹಣದ ಮಾಲೀಕರಾರು ಕಾಣುವುದಿಲ್ಲ. ಅಲ್ಲಿ ನಮಗೆ ಹೆಚ್ಚು ಕೂಲಿಕಾರರು, ಕಿರಾಣಿ ವರ್ತಕರು, ವೃದ್ಧರು, ಪಿಂಚಣಿಗಾರರು, ಟ್ಯಾಕ್ಸಿ-ರಿಕ್ಷಾ ಚಾಲಕರು ಕಣ್ಣಿಗೆ ಬೀಳುತ್ತಾರೆ. ಕಪ್ಪುಹಣದ ಪ್ರಭುಗಳು ಏಕೆ ಇಲ್ಲಿ ಸರದಿ ನಿಲ್ಲುತ್ತಿಲ್ಲ! ಅವರಿಗೆ ರೂ. 4000 ತೆಗೆದುಕೊಂಡು ಆಗಬೇಕಾದುದೇನಿದೆ? (ಈಗ ಅದು ರೂ. 4500 ಆಗಿದೆ). ಅವರ ಕಪ್ಪು ಹಣಕ್ಕೆ ಅನಾಣ್ಯೀಕರಣದಿಂದ ದಕ್ಕೆ ಉಂಟಾಗಿರಬಹುದು, ನಷ್ಟವೂ ಆಗಿರಬಹುದು. ಆದರೆ ಅವರ ದೈನಂದಿನ ಬದುಕು ಹಳಿ ತಪ್ಪಿಲ್ಲ. ಡಿಜಿಟಲ್ ದಾರಿಯಲ್ಲಿ ಅವರು ಸರಾಗವಾಗಿ ಸಾಗುತ್ತಾರೆ ಮತ್ತು ಅವರ ಬಳಿಯಲ್ಲಿ ಬಿಳಿ ಹಣದ ದಾಸ್ತಾನು ಸಾಕಷ್ಟಿರುತ್ತದೆ. ಬರಿ ಬಿಳಿ ಹಣವನ್ನೇ ನಂಬಿದವರ ಮತ್ತು ಗ್ರಾಮೀಣ ಭಾಗದಲ್ಲಿರುವ ಜನರ ಅಳಲನ್ನು ಕೇಳುವವರಿಲ್ಲದಂತಾಗಿದೆ. ನೋಟು ಪರಿವರ್ತನೆಗೆ ಬ್ಯಾಂಕಿನ ಹೆಸರು, ಗುರುತಿನ ಚೀಟಿಯ ಕ್ರಮಸಂಖ್ಯೆ, ಮೊಬೈಲ್ ಸಂಖ್ಯೆ ಇಂಗ್ಲೀಷಿನಲ್ಲಿ ತುಂಬಬೇಕು ಮತ್ತು ಅದಕ್ಕೆ ಗುರುತಿನ ಚೀಟಿಯ ಪ್ರತಿಯನ್ನು ಲಗತ್ತಿಸಬೇಕು. ಸರ್ಕಾರವು ಇದಕ್ಕೆ ಸಂಬಂಧಿಸಿದಂತೆ ಜಾಹಿರಾತನ್ನು ಇಂಗ್ಲೀಷಿನಲ್ಲಿ ನೀಡುತ್ತಿದೆ. ಇದರ ಅರ್ಜಿ ನಮೂನೆಯು ಇಂಗ್ಲೀಷಿನಲ್ಲಿದೆ! ಈ ವಿಷಯಗಳಿಗೆ ಸಂಬಂಧಿಸಿದಂತೆ ಸರ್ಕಾರಕ್ಕೆ ರವಷ್ಟೂ ಮುಂಜಾಗರೂಕತೆ ಇಲ್ಲದಿದ್ದರೆ ಹೇಗೆ?

ನಮ್ಮ ರಾಜ್ಯದಲ್ಲಿ ಪ್ರತಿ 10 ಸಾವಿರ ಜನರಿಗೆ ಒಂದು ಬ್ಯಾಂಕು ಶಾಖೆಯಿದೆ. ಅದೂ ಅವೆಲ್ಲವೂ ನಗರಗಳಲ್ಲಿ, ದೊಡ್ಡ ಗ್ರಾಮಗಳಲ್ಲಿ ನೆಲೆಗೊಂಡಿವೆ. ಕರ್ನಾಟಕದಲ್ಲಿ 29 ಸಾವಿರ ಹಳ್ಳಿಗಳಿವೆ. ನಮ್ಮ ರಾಜ್ಯದಲ್ಲಿರುವ ಬ್ಯಾಂಕು ಶಾಖೆಗಳ ಸಂಖ್ಯೆ 8500. ಗ್ರಾಮಾಂತರ ಪ್ರದೇಶದ ಎಷ್ಟು ಗ್ರಾಮಗಳಲ್ಲಿ ಬ್ಯಾಂಕುಗಳಿವೆ, ಎಟಿಎಮ್‌ಗಳಿವೆ? ನಮ್ಮಲ್ಲಿ ಎರಡು ಆರ್ಥಿಕತೆಗಳಿದ್ದಂತೆ ಎರಡು ಬಗೆಯ ಮಾರುಕಟ್ಟೆಗಳಿವೆ. ಡಿಜಿಟಲ್ ಮಾರುಕಟ್ಟೆಗೆ ಅನಾಣ್ಯೀಕರಣದಿಂದ ಕಿಂಚಿತ್ತೂ ದಕ್ಕೆಯಾಗಿಲ್ಲ. ಇನ್ನೊಂದು ಮಾರುಕಟ್ಟೆಯುದೆಯಲ್ಲಾ-ಅಸಂಘಟಿತ, ತಳಮಟ್ಟದಲ್ಲಿನ, ಜನಮುಖಿಯಾದ ದೇಶೀ ಮಾರುಕಟ್ಟೆ ಅದು ಅನಾಣ್ಯೀಕರಣದಿಂದ ದಿಕ್ಕೆಟ್ಟು-ಕಂಗೆಟ್ಟು ಹೋಗಿದೆ.

ದುಡಿಯುವ ಜನರ, ಸಣ್ಣ ವ್ಯಾಪಾರಿಗಳ ಬವಣೆ

ಕರ್ನಾಟಕದಲ್ಲಿ 2011ರ ಜನಗಣತಿ ಪ್ರಕಾರ 132 ಲಕ್ಷ ಅನಕ್ಷರಸ್ಥರಿದ್ದಾರೆ. ನಮ್ಮ ರಾಜ್ಯದಲ್ಲಿ ಪ್ರತಿ 10 ಸಾವಿರ ಜನರಿಗೆ ಒಂದು ಬ್ಯಾಂಕು ಶಾಖೆಯಿದೆ. ಅದೂ ಅವೆಲ್ಲವೂ ನಗರಗಳಲ್ಲಿ, ದೊಡ್ಡ ಗ್ರಾಮಗಳಲ್ಲಿ ನೆಲೆಗೊಂಡಿವೆ. ಕರ್ನಾಟಕದಲ್ಲಿ 29 ಸಾವಿರ ಹಳ್ಳಿಗಳಿವೆ. ನೋಟುಗಳ ಬದಲಾವಣೆಗಾಗಿ ಬ್ಯಾಂಕಿನ ಶಾಖೆಗಳಿರುವ ಗ್ರಾಮ/ನಗರಗಳಿಗೆ ಜನರು ಹೋಗಬೇಕು. ತಾವು ದುಡಿದ ಹಣವನ್ನು ಬಳಸುವುದಕ್ಕೆ ಅವರು ತಮ್ಮದೇ ಹಣ ಖರ್ಚು ಮಾಡಬೇಕು! ಇದು ದುರಂತ. ಅದಕ್ಕೇ ಹೇಳಿದ್ದು: ಅನಾಣ್ಯೀಕರಣ ಉಳ್ಳವರಿಗೆ ವರವಾದರೆ ಉಳಿದವರಿಗೆ ಶಾಪವಾಗಿದೆ. ಅಕ್ರಮಗಳ ಮೂಲಕ ಕಪ್ಪು ಹಣ ಸಂಪಾದನೆ ಮಾಡಿದವರ ಬದುಕು ಸುಗಮವಾಗಿ ನಡೆದಿದೆ. ಕಪ್ಪು ಹಣದ ಒಡೆಯರಾಗಿದ್ದಾಗ ಅವರು ಬದುಕು ವೈಭವದಿಂದ ಕೂಡಿತ್ತು. ಈಗ ಅದಕ್ಕೆ ಕಿಂಚಿತ್ತು ಊನ ಉಂಟಾಗಿರಬಹುದು. ಆದರೆ ತಪ್ಪು ಮಾಡದಿರುವ ದುಡಿಮೆಗಾರರ, ಬಡವರ, ಸಣ್ಣ ವ್ಯಾಪಾರಿಗಳ ಬದುಕು ಅನಾಣ್ಯೀಕರಣದಿಂದ ಹೈರಾಣವಾಗಿದೆ.

ನಮ್ಮ ರಾಜ್ಯದಲ್ಲಿರುವ ಬ್ಯಾಂಕು ಶಾಖೆಗಳ ಸಂಖ್ಯೆ 8500. ಗ್ರಾಮಾಂತರ ಪ್ರದೇಶದ ಎಷ್ಟು ಗ್ರಾಮಗಳಲ್ಲಿ ಬ್ಯಾಂಕುಗಳಿವೆ, ಎಟಿಎಮ್‌ಗಳಿವೆ? ದಿನಗೂಲಿಕಾರರು ರೂ. 4000 ಪರಿವರ್ತಿಸಲು ಎರಡು-ಮೂರು ದಿನಗಳ ಕೂಲಿಯನ್ನು ತ್ಯಾಗ ಮಾಡಬೇಕು. ಒಮ್ಮೆ ಪಡೆದ ರೂ. 4000 ಖರ್ಚಾದ ಮೇಲೆ ಮತ್ತೆ ಎರಡು-ಮೂರು ದಿನಗಳಲ್ಲಿ ಸರದಿಯಲ್ಲಿ ನಿಲ್ಲಬೇಕು. ಮತ್ತೆ ಕೂಲಿ ಕಳೆದುಕೊಳ್ಳಬೇಕು. ಇದನ್ನು ಸರ್ಕಾರವು ಭವಿಷ್ಯದಲ್ಲಿನ ಲಾಭಕ್ಕಾಗಿ ನಾಗರಿಕರು ವರ್ತಮಾನದಲ್ಲಿ ಮಾಡಬೇಕಾದ 'ತ್ಯಾಗ' ಎಂದು ಹೇಳುತ್ತಿದೆ. ಯಾವಾಗಲೂ ಹೀಗೆಯೆ! ತ್ಯಾಗ ಮಾಡಬೇಕಾದವರು, ಬವಣೆ ಪಡಬೇಕಾದವರು, ವರಮಾನದಿಂದ ವಂಚಿತರಾಗಬೇಕಾದವರು ಉಳಿದವರು. ಉಳ್ಳವರಿಗೆ ಇಂತಹ ಕಷ್ಟಗಳನ್ನು ಎದುರಿಸುವ ಪ್ರಮೇಯ ಬರುವುದಿಲ್ಲ. ಸರ್ಕಾರಗಳು ಬಡವರಿಂದ ತ್ಯಾಗವನ್ನು ಬಯಸುತ್ತವೆ. ಆದರೆ ಉಳ್ಳವರಿಗೆ ಎಲ್ಲ ಭಾಗ್ಯವನ್ನು ಒದಗಿಸುತ್ತವೆ. ಬಡವರ ಹೆಸರಿನಲ್ಲಿ ಸುಧಾರಣೆಗಳನ್ನು ತರುತ್ತವೆ. ಈ ಕ್ರಮಗಳು ಬಡವರ ಬದುಕನ್ನು ಸುಧಾರಿಸುವುದಿಲ್ಲ. ಜಾಗತೀಕರಣ, ಖಾಸಗೀಕರಣದಲ್ಲಿಯೂ ನಡೆದದ್ದು ಇದೇ ತಾನೆ!

ದುಡಿಮೆಗಾರರಿಗೆ, ಸಣ್ಣ ವ್ಯಾಪಾರಿಗಳಿಗೆ, ತಲೆಯ ಮೇಲೆ ಹೊತ್ತು ಮಾರಾಟ ಮಾಡುವವರಿಗೆ ಅಗತ್ಯವಾಗಿರುವುದು 50ರ, 100ರ ಮೌಲ್ಯದ 10ರ, 20ರ ಮೌಲ್ಯದ ನೋಟುಗಳು. ಹಾಗಾದರೆ ಎರಡು ಸಾವಿರದ ನೋಟುಗಳು ಯಾರಿಗಾಗಿ ಬಿಡುಗಡೆಗೊಳಿಸಲಾಗಿದೆ? ನಮ್ಮ ದೇಶದಲ್ಲಿ ಚಲಾವಣೆಯಲ್ಲಿರುವ ಸುಮಾರು ರೂ. 17 ಲಕ್ಷ ಕೋಟಿ ಹಣದಲ್ಲಿ ರೂ. 500 ಮತ್ತು ರೂ. 1000 ನೋಟುಗಳ ಪ್ರಮಾಣ ಶೇ.86 ರಷ್ಟಿದೆ. ನಗದನ್ನೇ ಹೆಚ್ಚು ಬಳಸುವ ಸಮಾಜದಲ್ಲಿ ಸಣ್ಣ ಮೌಲ್ಯದ ನೋಟುಗಳಿಗೆ ಬೇಡಿಕೆ ಅಧಿಕ. ಅವು ದುಡಿಮೆಗಾರರಿಗೆ, ಬಡವರಿಗೆ, ಸಣ್ಣ-ಪುಟ್ಟ ವ್ಯಾಪಾರಸ್ಥರಿಗೆ ಅಗತ್ಯ. ಉಳ್ಳವರಿಗೆ ಅನುಕೂಲ ಮಾಡಿಕೊಡಲು ಹೆಚ್ಚಿನ ಮೌಲ್ಯದ ನೋಟುಗಳನ್ನು ಮೊದಲು ಬಿಡುಗಡೆಗೊಳಿಸಿ ಸಣ್ಣ ಮೌಲ್ಯದ ನೋಟುಗಳ ಜನರಿಗೆ ಎಷ್ಟು ಬೇಕೋ ಅಷ್ಟು ಪ್ರಮಾಣದಲ್ಲಿ ದೊರೆಯದಂತೆ ಮಾಡಲಾಗಿದೆ. ತಲೆಯ ಮೇಲೆ ಹೊತ್ತು ಮಾರುವವರು, ತಳ್ಳುವ ಗಾಡಿ ವ್ಯಾಪಾರಗಾರರು ಗೃಹಿಣಿಯರಿಗೆ ಸಾಲದಲ್ಲಿ ತರಕಾರಿ ಮಾರಾಟ ಮಾಡುತ್ತಿದ್ದಾರೆ. ಸಗಟು ಮಾರುಕಟ್ಟೆಯಿಂದ ಸರಕುಗಳನ್ನು ತರಲು ಅವರೆಲ್ಲ ಇನ್ನಿಲ್ಲದ ಬವಣೆ ಪಡುತ್ತಿದ್ದಾರೆ. ವ್ಯಾಪಾರ ನೆಲ ಕಚ್ಚಿ ಬಿಟ್ಟಿದೆ. ಅವರಿಗೆ ಮತ್ತು ಇನ್ನಿತರರಿಗೆ ನಗರ ಸಾರಿಗೆಯಲ್ಲಿ ಓಡಾಡುವುದು ಕಷ್ಟವಾಗಿ ಬಿಟ್ಟಿದೆ.

ಎಷ್ಟು ಜನರ ಬಳಿಯಲ್ಲಿ ಎಟಿಎಮ್ ಕಾರ್ಡುಗಳಿವೆ?

ಸರ್ಕಾರವು ಎಟಿಎಮ್ ಬಗ್ಗೆ, ಡಿಜಿಟೈಸೇಶನ್ ಬಗ್ಗೆ, ನೆಟ್ ಬ್ಯಾಂಕಿಂಗ್ ಬಗ್ಗೆ ಮಾತನಾಡುತ್ತಿದೆ. ನಮ್ಮ ರಿಸರ್ವ್ ಬ್ಯಾಂಕಿನ ಗೌರ್ವನರ್ 'ಜನರು ಡಿಜಿಟೈಸ್ ಆಗಬೇಕು' ಎಂದು ಹೇಳುತ್ತಿದ್ದಾರೆ. ಇದೆಲ್ಲ ಸರಿ. ಇವೆಲ್ಲ ಹೊಟ್ಟೆ ತುಂಬಿದ ಆರ್ಥಿಕತೆಗೆ ಅನ್ವಯವಾಗುವ ಮಾತು. ಆದರೆ ನಮ್ಮ ದೇಶದಲ್ಲಿ ಹಸಿವಿನ ಆರ್ಥಿಕತೆ ಅನ್ನುವುದೊಂದಿದೆಯಲ್ಲ! ಅಕ್ಷರ ಜಗತ್ತಿದ್ದಂತೆ ಅನಕ್ಷರತೆಯ ಭಾರತವೂ ಇದೆ. ನಮ್ಮ ರಾಜ್ಯದಲ್ಲಿ ಪ್ರತಿ ದಿನ ದುಡಿದರೆ ಮಾತ್ರ ಕೂಳು, ಇಲ್ಲದಿದ್ದರೆ ಉಪವಾಸ ಅನ್ನುವ 72 ಲಕ್ಷ ದಿನಗೂಲಿ ದುಡಿಮೆಗಾರರಿದ್ದಾರೆ. ಅನಾಣ್ಯೀಕರಣವು ಅವರಿಗೆ ಬಿಕ್ಕಟ್ಟು ತಂದಿದೆ. ಅದು ಅಲ್ಪ ಕಾಲಾವಧಿಯದ್ದೇ ಇರಬಹುದು. ಅನಾಣ್ಯೀಕರಣದ ಮೂಲಕ ಯಾರನ್ನು ಶಿಕ್ಷಿಸಬೇಕೆಂದು ಸರ್ಕಾರ ಬಯಸಿತ್ತೊ ಅವರಿಗೆ ಶಿಕ್ಷೆಯಾಗುತ್ತಿಲ್ಲ. ಅವರು ಕಳೆದುಕೊಂಡರೆ ತಮ್ಮ ಹಣ ಕಳೆದುಕೊಳ್ಳುತ್ತಾರೆ. ಅನಾಣ್ಯೀಕರಣದಿಂದ ಶಿಕ್ಷೆಗೆ ಒಳಗಾಗಿರುವವರು ದುಡಿಮೆಗಾರರು, ಬಡವರು, ವಂಚಿತರು, ಗ್ರಾಮಸ್ಥರು, ಅನಕ್ಷರಸ್ಥರು. ಈ ಬಗೆಯ ಜನರ ಇರುವನ್ನು ಸರ್ಕಾರವು ಗಮನಿಸಿದಂತೆ ಕಾಣುವುದಿಲ್ಲ. ಅದೇನಿದ್ದರೂ ಉಳ್ಳವರ ಬಗ್ಗೆ ಚಿಂತಿಸುತ್ತದೆ. ಅವರಿಗೆ ಮಾತ್ರ ತಾನೆ ಧ್ವನಿ ಇರುವುದು!. ಧ್ವನಿ ಇಲ್ಲದವರು ಏನು ಮಾಡಬೇಕು? ವಾಸ್ತವವಾಗಿ ಸಮಾಜದ ಒಂದು ಬಹುದೊಡ್ಡ ಸಮುದಾಯಕ್ಕೆ ಅಕ್ಷರವನ್ನು ನಿಷೇಧಿಸಿದ್ದ ಪರಂಪರೆ ನಮ್ಮದು. ಒಂದು ವರ್ಗಕ್ಕೆ ಊರೊಳಗಿನ ನೀರನ್ನು ನಿಷೇಧಿಸಿದ್ದ ಸಮಾಜ ನಮ್ಮದು. ಇಂದು ಬಡವರಿಗಾಗಿ ಯಾವ ಸುಧಾರಣೆಗಳನ್ನು ಜಾರಿಗೊಳಿಸಲಾಗುತ್ತಿದೆಯೋ ಆ ಸುಧಾರಣೆಗಳು ಉಳ್ಳವರಿಗೆ ವರವಾಗಿದ್ದರೆ ಉಳಿದವರಿಗೆ ಶಾಪವಾಗಿ ಬಿಟ್ಟಿವೆ.

ಸ್ವಿಸ್ ಬ್ಯಾಂಕ್ ಖಾತೆಯ ಕಪ್ಪು ಹಣ ಏನಾಯಿತು?

ಆಳುವ ಪಕ್ಷದ ಚುನಾವಣೆಯಲ್ಲಿನ ಆಶ್ವಾಸನೆಯು ವಿದೇಶದಲ್ಲಿನ ಕಪ್ಪುಹಣವನ್ನು ತಂದು ಪ್ರತಿ ಭಾರತೀಯರ ಖಾತೆಗೆ ರೂ.15 ಲಕ್ಷ ಜಮಾ ಮಾಡುವುದು ಎಂಬುದಾಗಿತ್ತು. ಅದನ್ನು ಕೈಬಿಡಲಾಗಿದೆ. ಈಗ ಅನಾಣ್ಯೀಕರಣಕ್ಕೆ ಸರ್ಕಾರ ಮುಂದಾಗಿದೆ. ಸರ್ಕಾರವೇ ಪ್ರಕಟಿಸಿರುವಂತೆ ಸ್ವಿಸ್ ಬ್ಯಾಂಕಿನಲ್ಲಿ ಭಾರತೀಯರು ಅಕ್ರಮವಾಗಿ ಇಟ್ಟಿರುವ ಖಾತೆಗಳ ಸಂಖ್ಯೆ 648. ಅದರ ಬಗ್ಗೆ ಯಾವುದೇ ಕ್ರಮ ತೆಗೆದುಕೊಂಡಿದ್ದು ಕಾಣಲಿಲ್ಲ. ದೇಶದೊಳಗೂ ಕಪ್ಪು ಹಣವಿರುವುದು ಸತ್ಯ. ಅದನ್ನು ಹೊರ ತೆಗೆಸುವುದಕ್ಕೆ ಅನೇಕ ವಿಕಲ್ಪಗಳಿದ್ದವು. ಅನಾಣ್ಯೀಕರಣ ಒಂದೇ ಮಾರ್ಗವಾಗಿರಲಿಲ್ಲ. ಕಪ್ಪುಹಣದ ಪ್ರಭುಗಳು ತಮ್ಮ ಸಂಪತ್ತನ್ನು ಹಣದ ರೂಪದಲ್ಲಿ ಹೆಚ್ಚು ಇಟ್ಟಿರುವುದಿಲ್ಲ. ಅವರು ಅದನ್ನು ಭೂಮಿ, ಅಪಾರ್ಟ್‌ಮೆಂಟುಗಳು, ಒಡವೆ, ಬಂಗಾರ ಮುಂತಾದ ರೂಪದಲ್ಲಿ ಅಡಗಿಸಿಟ್ಟಿರುತ್ತಾರೆ. ಈ ಬಗೆಯ ಅಕ್ರಮಗಳನ್ನು, ಕಪ್ಪುಹಣದ ಉತ್ಪಾದನೆಯನ್ನು, ಐಷಾರಾಮಿ ಬದುಕು ನಡೆಸುತ್ತಿರುವವರನ್ನು (ಉದಾಹರಣೆಗೆ ಬಳ್ಳಾರಿ ರಿಪಬ್ಲಿಕ್ ಜಗತ್ತಿನಲ್ಲಿ ನಡೆಯುತ್ತಿರುವ ವೈಭವೋಪೇತ ಮದುವೆ) ತಡೆಯುವುದಕ್ಕೆ ಪ್ರತಿಯಾಗಿ ದುಡಿಮೆಗಾರರಿಗೆ ಸಂಕಟ ಉಂಟುಮಾಡುವ ಅನಾಣ್ಯೀಕರಣ ಕ್ರಮವನ್ನು ಅನುಸರಿಸುವುದಕ್ಕೆ ಮೊದಲು ಕೇಂದ್ರ ಸರ್ಕಾರವು ಎರಡು ಬಾರಿ ಯೋಚಿಸಬೇಕಾಗಿತ್ತು.

ಈ ಕ್ರಮವು ಬಡವರಿಗೆ, ದುಡಿಮೆಗಾರರಿಗೆ, ದಿನಗೂಲಿಯನ್ನೇ ಅವಲಂಬಿಸಿರುವವರಿಗೆ, ಪುಟ್ಟ ವ್ಯಾಪಾರಿಗಳಿಗೆ ನೋಟುಗಳ ಪಡೆಯುವುದಕ್ಕೆ ಸಂಬಂಧಿಸಿದಂತೆ ತೊಂದರೆ ಉಂಟು ಮಾಡುವುದಲ್ಲದೆ ಅಲ್ಪಾವಧಿಯಲ್ಲಿ ಅದು ಆರ್ಥಿಕತೆಯಲ್ಲಿ ಡೀಫ್ಲೇಶನ್‌ಗೆ ಮತ್ತು ಬೇಡಿಕೆ ಹಿಂಜರಿತಕ್ಕೆ(ರಿಸೆಶನ್) ಕಾರಣವಾಗಿ ಅವರ ಬದುಕನ್ನು ಮತ್ತಷ್ಟು ಹೈರಾಣವಾಗಿಸಬಹುದು. ಇವೆಲ್ಲದರ ಪರಿಣಾಮವಾಗಿ ಸಮಗ್ರ ಅನುಭೋಗದ ಬೇಡಿಕೆಯಲ್ಲಿ ತೀವ್ರ ಕುಸಿತ ಉಂಟಾಗುತ್ತದೆ. ಇದು ಮುಂದೆ ಉತ್ಪಾದನೆಯಲ್ಲಿ, ಉದ್ಯೋಗದಲ್ಲಿ ಮತ್ತು ಜಿಡಿಪಿಯಲ್ಲಿ ಕುಸಿತವನ್ನು ಉಂಟು ಮಾಡಬಹುದು. ಈಗಾಗಲೆ ಅಧ್ಯಯನಗಳು ಅಂದಾಜು ಮಾಡುತ್ತಿರುವಂತೆ ಅಸಂಘಟಿತ ವಲಯದಲ್ಲಿ ಶೇ.50 ರಿಂದ ಶೇ.90 ರಷ್ಟು ವರಮಾನ ಕುಸಿದಿದೆ.

ಕಂಗೆಟ್ಟ ದೇಶೀ ಮಾರುಕಟ್ಟೆ

ನಮ್ಮಲ್ಲಿ ಎರಡು ಆರ್ಥಿಕತೆಗಳಿದ್ದಂತೆ ಎರಡು ಬಗೆಯ ಮಾರುಕಟ್ಟೆಗಳಿವೆ. ಜಾಗತೀಕರಣ, ಉದಾರೀಕರಣ ಮತ್ತು ಖಾಸಗೀಕರಣಗಳ ಪರಿಣಾಮವಾಗಿ ಸಂಘಟಿತವಾದ ರೀತಿಯಲ್ಲಿ ಮತ್ತು ಆಧುನಿಕ ಡಿಜಿಟೈಸ್ ವಿಧಾನದಲ್ಲಿ ಅಸ್ತಿತ್ವಕ್ಕೆ ಬಂದಿರುವ ಮಾಲುಗಳು, ಮಾರ್ಟ್‌ಗಳು, ಬಿಗ್ ಬಜಾರುಗಳು, ಸೂಪರ್ ಮಾರ್ಕೆಟ್ಟುಗಳಿವೆ. ಇವು ಈಗಾಗಲೆ ಹೇಳಿದಂತಹ ಪುಟ್ಟ ವ್ಯಾಪಾರಿಗಳ, ಚಿಲ್ಲರೆ ವ್ಯಾಪಾರಗಾರರ, ಕಿರಾಣಿ ವರ್ತಕರ ಬದುಕನ್ನು ಮೂರಾಬಟ್ಟೆ ಮಾಡಿವೆ. ಈ ಬಗೆಯ ಡಿಜಿಟಲ್ ಮಾರುಕಟ್ಟೆಗೆ ಅನಾಣ್ಯೀಕರಣದಿಂದ ಕಿಂಚಿತ್ತೂ ದಕ್ಕೆಯಾಗಿಲ್ಲ. ಇನ್ನೊಂದು ಮಾರುಕಟ್ಟೆಯಿದೆಯಲ್ಲಾ-ಅಸಂಘಟಿತ, ತಳಮಟ್ಟದಲ್ಲಿನ, ಜನಮುಖಿಯಾದ ದೇಶೀ ಮಾರುಕಟ್ಟೆ ಅದು ಅನಾಣ್ಯೀಕರಣದಿಂದ ದಿಕ್ಕೆಟ್ಟು-ಕಂಗೆಟ್ಟು ಹೋಗಿದೆ.

ಮತ್ತೆ ಮತ್ತೆ ನಮ್ಮದು ಉಳ್ಳವರ ಸರ್ಕಾರ, ಉಳ್ಳವರಿಗಾಗಿರುವ ಸರ್ಕಾರ ಮತ್ತು ಉಳ್ಳವರಿಂದಲೇ ರೂಪಿತವಾಗಿರುವ ಸರ್ಕಾರ ಅನ್ನುವುದನ್ನು ಇಂದು ಆಳುವ ಪಕ್ಷವು ಸಾಬೀತು ಪಡಿಸುತ್ತಿದೆ. ಬಡವರ ಆಹಾರಕ್ಕೆ ಅದು ಆಕ್ಷೇಪವನ್ನೆತ್ತುತ್ತಿದೆ. ದೇಶ ಭಾಷೆಗಳ ಬಗ್ಗೆ ಅದಕ್ಕೆ ಅಪಥ್ಯವಿರುವಂತೆ ಕಾಣುತ್ತಿದೆ. ಬಡವರ ಅಸ್ವಚ್ಛತೆಯ ಬಗ್ಗೆ ಅದಕ್ಕೆ ತಿರಸ್ಕಾರವಿದೆ. ಅನೂಚಾನವಾಗಿ ಸ್ವಚ್ಛತೆ ಕಾಯಕ ಮಾಡಿಕೊಂಡು ಬರುತ್ತಿರುವವರಿಗೆ ಮನ್ನಣೆ ನೀಡುವುದಕ್ಕೆ ಪ್ರತಿಯಾಗಿ ಸಿನಿಮಾ ನಟ-ನಟಿಯರಿಗೆ ಅದು ಸ್ವಚ್ಛತೆಯ ರಾಯಭಾರಿ ಸ್ಥಾನಮಾನ ನೀಡಿದೆ. ಇಂದು ದೇಶದಲ್ಲಿ ದಿಢೀರನೆ ಸ್ವಚ್ಛತೆಯ ಕಾರ್ಯಕರ್ತರು ಹುಟ್ಟಿಕೊಳ್ಳುತ್ತಿದ್ದಾರೆ. ಅವರಿಗೆ ಮನ್ನಣೆ ನೀಡಲಾಗುತ್ತಿದೆಯೇ ವಿನಾ ಲಾಗಾಯ್ತಿನಿಂದ ಕಸ ಗುಡಿಸಿಕೊಂಡು ಬಂದಿರುವ ಸಮುದಾಯದ ಬಗ್ಗೆ ಅಲ್ಲ. ಉನ್ನತ ಜಾತಿಯವರು ಸ್ವಚ್ಛ ಕಾಯಕ ಮಾಡಿದರೆ ಅದಕ್ಕೆ ಮನ್ನಣೆ: ಕೆಳವರ್ಗದವರು ಅದೇ ಕೆಲಸವನ್ನು ಮಾಡಿದರೆ ಅದರ ಬಗ್ಗೆ ಔದಾಸೀನ್ಯ-ತಿರಸ್ಕಾರ. ಇದಕ್ಕಾಗಿಯೇ ಹೇಳಿದ್ದು ಅನಾಣ್ಯೀಕರಣವು ಉಳ್ಳವರಿಗೆ ವರವಾಗಿದೆ ಮತ್ತು ಉಳಿದವರಿಗೆ ಶಾಪವಾಗಿದೆ. ಅನಾಣ್ಯೀಕರಣವು ಉಳ್ಳವರ ಬದುಕನ್ನು ಹೈರಾಣವಾಗಿಸುವುದಕ್ಕೆ ಪ್ರತಿಯಾಗಿ ಉಳಿದವರ ದೇಹದಿಂದ ಬೆವರು, ಕಣ್ಣೀರು, ರಕ್ತ ಹರಿಸುತ್ತಿದೆ. ●

ದುಡಿಯುವ ಜನಗಳ ಮೇಲೆ ಅವ್ಯಾಹತ ದಾಳಿ ನಡುವೆ ಪ್ರಧಾನಿಗಳ ಕ್ರೂರ ವ್ಯಂಗ್ಯ





500/1000 ರೂ.ಗಳ ನೋಟುಗಳ ಚಲಾವಣೆ ನಿಲ್ಲಿಸಿರುವುದು ಕೋಟ್ಯಂತರ ದುಡಿಯುವ ಜನಗಳಿಗೆ ಹಣದ ಆಘಾತವನ್ನು ತಂದೊಡ್ಡಿದೆ. ಆದರೆ ಪ್ರಧಾನಿಗಳು "ಬಡವರು ನಿಶ್ಚಿಂತೆಯಿಂದ ನಿದ್ರಿಸುತ್ತಿದ್ದಾರೆ. ಆದರೆ ಶ್ರೀಮಂತರು ನಿದ್ರೆ ಗುಳಿಗೆಗಳನ್ನು ಹುಡುಕುತ್ತಿದ್ದಾರೆ" ಎಂದು ಹೇಳುವ ಮೂಲಕ ಜನತೆಯ ಸಂಕಷ್ಟಗಳ ಬಗ್ಗೆ ಕ್ರೂರ ವ್ಯಂಗ್ಯ ಮಾಡುತ್ತಿದ್ದಾರೆ. ಕಾರ್ಮಿಕ ವರ್ಗದ ಜೀವನೋಪಾಯದ ಮೇಲೆ ಬರ್ಬರ ಹಲ್ಲೆಯನ್ನು ಕೇವಲ ಒಂದು ತಾತ್ಕಾಲಿಕ ಅನಾನುಕೂಲ ಎಂದು ವರ್ಣಿಸಲಾಗುತ್ತಿದೆ. ವಾಸ್ತವವಾಗಿ ಇದು ಮೋದಿ ಸರಕಾರ ಮತ್ತು ಬಿಜೆಪಿಯ ಪ್ರತಿಗಾಮಿ ವರ್ಗ ದೃಷ್ಟಿಕೋನವನ್ನು ಕಣ್ಣಿಗೆ ರಾಚುವಂತೆ ಬಹಿರಂಗಗೊಳಿಸಿದೆ

-ಪ್ರಕಾಶ ಕಾರಟ್

500 ಮತ್ತು 1000 ರೂಪಾಯಿ ನೋಟುಗಳನ್ನು ಚಲಾವಣೆಯಿಂದ ವಾಪಸ್ ಪಡೆದಿರುವುದು ಕಪ್ಪು ಹಣದ ಮೇಲಿನ ಸಮರದ ಬದಲಾಗಿ ಜನಸಾಮಾನ್ಯರ ಮೇಲಿನ ಯುದ್ಧವಾಗಿ ಅನಾವರಣಗೊಳ್ಳುತ್ತಿದೆ.

ಬ್ಯಾಂಕ್‌ಗಳು, ಎಟಿಎಂಗಳು ಮತ್ತು ಅಂಚೆ ಕಚೇರಿಗಳ ಹೊರಗೆ ಜನರು ದೊಡ್ಡ ಸರತಿ ಸಾಲುಗಳಲ್ಲಿ ನಿಂತು ನೋಟುಗಳನ್ನು ಬದಲಾಯಿಸಿ ಕೇವಲ ನಾಲ್ಕು ಸಾವಿರ (ಈಗ 4500 ಹಾಗೂ ಈ ಲೇಖನ ಅನುವಾದಿಸುತ್ತಿರುವ ವೇಳೆಗೆ ಬರೀ 2000 ರೂಪಾಯಿ) ಪಡೆಯಲು ಕಾಯುತ್ತಿರುವ ದೃಶ್ಯಗಳ ಮೇಲೆ ಮಾಧ್ಯಮಗಳು ಗಮನ ಕೇಂದ್ರೀಕರಿಸುತ್ತಿವೆ. ಆದರೆ ಇದು ಜನರು ಅನುಭವಿಸುತ್ತಿರುವ ಸಮಸ್ಯೆಗಳ ಒಂದು ಮುಖ ಮಾತ್ರವಾಗಿದೆ.

ಕೋಟ್ಯಂತರ ಕಾರ್ಮಿಕರು, ರೈತರು, ಮೀನುಗಾರರು, ಸಣ್ಣ ವ್ಯಾಪಾರಿಗಳು, ಅಂಗಡಿಯವರು ಮತ್ತು ನಗದು ವ್ಯವಹಾರಗಳನ್ನೇ ಅವಲಂಬಿಸಿರುವ ಜನರ ಜೀವನೋಪಾಯ ಮತ್ತು ಆದಾಯಗಳು ನಷ್ಟವಾಗುವಂಥ ಹಣದ ಆಘಾತವನ್ನು ಅದು ತಂದೊಡ್ಡಿದೆ.

ನವೆಂಬರ್ ಎಂಟರಂದು ಪ್ರಧಾನ ಮಂತ್ರಿ ಘೋಷಣೆ ಮಾಡಿದ ಒಂದು ವಾರದ ನಂತರದ ಚಿತ್ರವೆಂದರೆ ಒಂದು ಆರ್ಥಿಕ ಸ್ಥಗಿತತೆ. ಗ್ರಾಮೀಣ ಆರ್ಥಿಕತೆಯಂತೂ ನೆಲಕಚ್ಚಿದ್ದು ಕೃಷಿ ಉತ್ಪಾದನೆ ಮತ್ತು ಬಳಕೆಯ ಬೇಡಿಕೆಯ ಮೇಲೆ ಅಗಣಿತ ಪರಿಣಾಮಗಳನ್ನು ಬೀರಿದೆ.

ರೈತರು ತಾವು ಕಟಾವು ಮಾಡಿದ ಬೆಳೆಗಳಿಗೆ ಹಣವನ್ನು ಪಡೆಯಲು ಸಾಧ್ಯವಾಗುತ್ತಿಲ್ಲ. ಹಿಂಗಾರು ಬೆಳೆ ನಾಟಿ ಕಾರ್ಯ ಆರಂಭವಾಗಿದ್ದು ಬೀಜ ಮತ್ತು ರಸಗೊಬ್ಬರಗಳನ್ನು ಖರೀದಿಸಲು ಅವರಲ್ಲಿ ಹಣವಿಲ್ಲ. ಕೃಷಿ ಕಾರ್ಮಿಕರಿಗೆ ಕೂಲಿ ಕೊಡಲೂ ಅವರಲ್ಲಿ ದುಡ್ಡಿಲ್ಲ. ಮಾರುಕಟ್ಟೆಗೆ ತಂದ ತರಕಾರಿಗಳನ್ನು ವರ್ತಕರು ಖರೀದಿಸದಿರುವುದರಿಂದ ಅವು ಕೊಳೆತು ಹೋಗುತ್ತಿವೆ. ಮೀನು ಮಾರುಕಟ್ಟೆಗಳಲ್ಲಿ ಮೀನಿನ ಪರಿಸ್ಥಿತಿಯೂ ಅದೇ ಆಗಿದೆ.

ಕಾರ್ಮಿಕರಿಗೆ ನಗದು ಕೂಲಿ ನೀಡಬೇಕಾಗಿರುವ ಇಟ್ಟಿಗೆ ಗೂಡಿನಿಂದ ಹಿಡಿದು ಕಾರ್ಖಾನೆಗಳ ವರೆಗೆ ಎಲ್ಲಾ ಸಣ್ಣ ಉದ್ಯಮಗಳು ಕೆಲಸ ಮಾಡುವುದನ್ನು ನಿಲ್ಲಿಸಿವೆ ಅಥವಾ ಕಾರ್ಮಿಕರಿಗೆ ಪೂರ್ಣ ವೇತನಗಳನ್ನು ನೀಡುತ್ತಿಲ್ಲ. ಅವರು ವಾರಕ್ಕೆ 25 ಸಾವಿರ ರೂಪಾಯಿ ಮಾತ್ರ ಹಿಂಪಡೆಯಲು ಅವಕಾಶ ನೀಡಲಾಗಿದೆ. ಆ ಮಿತಿಯನ್ನು ನಂತರ 50 ಸಾವಿರ ರೂಪಾಯಿಗೆ ಏರಿಸಲಾಗಿದೆ. ಆದರೂ ಅದು ಏನೇನೂ ಸಾಲದು. ಯಾಕೆಂದರೆ ಪಾವತಿಸಬೇಕಾದ ವಾರದ ಕೂಲಿ ಎರಡು ಲಕ್ಷದಿಂದ ಮೂರು ಲಕ್ಷ ರೂಪಾಯಿಗಳಷ್ಟಿರುತ್ತದೆ.

ರಿಸರ್ವ್ ಬ್ಯಾಂಕ್ ನಿರ್ದೇಶನುಸಾರ, ಮಿಲಿಯಾಂತರ ರೈತರು ವ್ಯವಹಾರ ನಡೆಸುವ ಜಿಲ್ಲಾ ಮತ್ತು ಪ್ರಾಥಮಿಕ ಸಹಕಾರಿ ಬ್ಯಾಂಕ್‌ಗಳಲ್ಲಿ ನೋಟುಗಳ ಬದಲಾವಣೆಗೆ ಅವಕಾಶ ನಿರಾಕರಿಸಲಾಗಿದೆ. ಇದರಿಂದ ಬ್ಯಾಂಕಿಂಗ್ ವ್ಯವಹಾರ ಅಸ್ತವ್ಯಸ್ತಗೊಂಡಿದ್ದು ರೈತರು ಹಾಗೂ ಗ್ರಾಮೀಣ ಜನರ ಸಂಕಷ್ಟಗಳು ಹೆಚ್ಚಿವೆ. ಪ್ರಾಥಮಿಕ ಸಹಕಾರಿ ಸಂಘಗಳ ವ್ಯಾಪಕ ಜಾಲವನ್ನು ಹೊಂದಿರುವ ಕೇರಳದಲ್ಲಿ ಇದು ವಿಶೇಷ ದುಷ್ಪರಿಣಾಮ ಬೀರಿದೆ. ಮಾರುಕಟ್ಟೆಗಳಲ್ಲಿ ಕೆಲಸ ಮಾಡುವ ಲಕ್ಷಾಂತರ ಕಾರ್ಮಿಕರು ಮತ್ತು ನಗರ ಹಾಗೂ ಗ್ರಾಮೀಣ ಪ್ರದೇಶಗಳಲ್ಲಿ ಅಂಗಡಿಗಳನ್ನು ನಡೆಸುವವರು, ಸಾರಿಗೆ ನೌಕರರು ಮತ್ತು ದಿನಗೂಲಿ ನೌಕಕರರ ಆದಾಯ ಅಕ್ಷರಶಃ ಬತ್ತಿ ಹೋಗಿದೆ. ಅವರಿಗೆ ಪಡಿತರವನ್ನಾಗಲೀ ಇತರ ಅವಶ್ಯಕ ವಸ್ತುಗಳನ್ನಾಗಲೀ ಖರೀದಿಸಲು ಆಗುತ್ತಿಲ್ಲ. ಖಾಸಗಿ ಆಸ್ಪತ್ರೆಗಳಲ್ಲಿ ಚಿಕಿತ್ಸೆ ಪಡೆಯಲು ಆಗದಿರುವುದರಿಂದ ಹಾಗೂ ಔಷಧಿಗಳನ್ನು ಖರೀದಿಸಲು ಆಗದಿರುವುದರಿಂದ ದುಡಿಯುವ ಜನಗಳ ಮಾನವ ಸಂಕಷ್ಟಗಳ ಪ್ರಮಾಣ ಹಲವು ಪಟ್ಟು ಹೆಚ್ಚಾಗಿದೆ.

> **ಪರ್ಯಾಯ ಕರೆನ್ಸಿ ಪೂರೈಕೆ ಪೂರ್ಣ ಪ್ರಮಾಣದಲ್ಲಿ ದೊರೆಯುವವರೆಗೆ, ಡಿಸೆಂಬರ್ 30ರ ವರೆಗೆ ಎಲ್ಲಾ ವ್ಯವಹಾರಗಳಿಗೆ 500 ಮತ್ತು 1000 ರೂಪಾಯಿ ನೋಟುಗಳನ್ನು ಬಳಸಲು ಅವಕಾಶ ನೀಡಬೇಕು. ಇದು ಜನರಿಗೆ ಇರಲೇಬೇಕಾದ ಹಕ್ಕು. ಈ ಹಕ್ಕನ್ನು ಸಾಧಿಸುವ ದಿಸೆಯಲ್ಲಿ ಒಂದು ಪ್ರಬಲವಾದ ಆಂದೋಲನವನ್ನು ಬೆಳೆಸಬೇಕಾಗಿದೆ.**

ಭಾರತದಲ್ಲಿ ಪ್ರಧಾನ ಪಾತ್ರ ವಹಿಸುವ ಅನೌಪಚಾರಿಕ ಆರ್ಥಿಕತೆ ನಗದು ವ್ಯವಹಾರಗಳನ್ನೇ ವ್ಯಾಪಕವಾಗಿ ಅವಲಂಬಿಸಿದೆ. 86 ಶೇಕಡಾ ಹಣವನ್ನು (ಅಂದರೆ 500 ಹಾಗೂ 1000 ರೂ. ನೋಟುಗಳನ್ನು) ಚಲಾವಣೆಯಿಂದ ಹಿಂಪಡೆದಿರುವುದರಿಂದ ಹೆಚ್ಚಿನ ಹೊರೆ ಬಿದ್ದಿರುವುದು ಅಸಂಘಟಿತ ಕಾರ್ಮಿಕರು, ಕೃಷಿ ಕೂಲಿಗಾರರು, ರೈತರು ಮತ್ತು ನಗರ ಹಾಗೂ ಗ್ರಾಮೀಣ ಬಡವರ ಮೇಲೇ.

"ಬಡವರು ನಿಶ್ಚಿಂತೆಯಿಂದ ನಿದ್ರಿಸುತ್ತಿದ್ದಾರೆ. ಆದರೆ ಶ್ರೀಮಂತರು ನಿದ್ರೆ ಗುಳಿಗೆಗಳನ್ನು ಹುಡುಕುತ್ತಿದ್ದಾರೆ" ಎಂದು ಹೇಳುವ ಮೂಲಕ ಪ್ರಧಾನಿ ನರೇಂದ್ರ ಮೋದಿ ಜನತೆಯ ಸಂಕಷ್ಟಗಳ ಬಗ್ಗೆ ಕ್ರೂರ ವ್ಯಂಗ್ಯ ಮಾಡುತ್ತಿದ್ದಾರೆ. ಅನಾಣ್ಯೀಕರಣ (ಅಂದರೆ ನೋಟುಗಳನ್ನು ಅಮಾನ್ಯ ಮಾಡುವ) ಪ್ರಕರಣ ಮೋದಿ ಸರಕಾರ ಮತ್ತು ಬಿಜೆಪಿಯ ಪ್ರತಿಗಾಮಿ ವರ್ಗ ದೃಷ್ಟಿಕೋನವನ್ನು ಕಣ್ಣಿಗೆ ರಾಚುವಂತೆ ಬಹಿರಂಗಗೊಳಿಸಿದೆ. ಕಾರ್ಮಿಕ ವರ್ಗದ ಜೀವನೋಪಾಯದ ಮೇಲೆ ಬರ್ಬರ ಹಲ್ಲೆಯನ್ನು ಕೇವಲ ಒಂದು ತಾತ್ಕಾಲಿಕ ಅನಾನುಕೂಲ ಎಂದು ವರ್ಣಿಸಲಾಗುತ್ತಿದೆ. ಇಡೀ ಕಾರ್ಯಾಚರಣೆಯನ್ನು ನಡೆಸಿದ ರೀತಿ ಸರಕಾರದ ಅದಕ್ಷತೆಯನ್ನು ಮತ್ತು ವಿಫಲತೆಯನ್ನು ಢಾಳಾಗಿ ಬಹಿರಂಗಪಡಿಸಿದೆ. ಹೊಸ ಕರೆನ್ಸಿ ನೋಟುಗಳ ಪೂರೈಕೆಗೆ ಸೂಕ್ತ ತಯಾರಿಗಳೇ ಇರಲಿಲ್ಲ. ನೋಟುಗಳ ಹೊಸ ಗಾತ್ರಕ್ಕೆ ಒಗ್ಗುವ ರೀತಿಯಲ್ಲಿ ಎಟಿಎಂಗಳನ್ನು ತಾಂತ್ರಿಕವಾಗಿ ಸಿದ್ಧಪಡಿಸಿಲ್ಲ. ಎಟಿಎಂಗಳನ್ನು ಸಜ್ಜುಗೊಳಿಸಲು ಕೆಲವು ವಾರಗಳೇ ಬೇಕಾಗುತ್ತವೆ ಎಂದು ಹಣಕಾಸು ಸಚಿವರೇ ಒಪ್ಪಿಕೊಂಡಿದ್ದಾರೆ.

500 ಮತ್ತು 1000 ರೂಪಾಯಿ ನೋಟುಗಳ ಅನಾಣ್ಯೀಕರಣ ಕಪ್ಪು ಹಣವನ್ನು ಹೊರತರುವ ನಿಟ್ಟಿನಲ್ಲಿ ಒಂದು ದೊಡ್ಡ ಹೆಜ್ಜೆ ಎಂದು ಬಿಂಬಿಸಲು ಪ್ರಧಾನಿ ಮತ್ತು ಬಿಜೆಪಿ ಸರಕಾರ ಪ್ರಯತ್ನಿಸುತ್ತಿವೆ. ಈ ಮೂಲಕ, ಕಪ್ಪು ಹಣ ಎಂದರೆ ಕರೆನ್ಸಿ ನೋಟುಗಳ ಕಳ್ಳ ಸಂಗ್ರಹ ಎಂಬ ತಪ್ಪು ಪರಿಕಲ್ಪನೆಯನ್ನು ಅವರು ಹರಡುತ್ತಿದ್ದಾರೆ. ಆದರೆ ವಾಸ್ತವವಾಗಿ, ಹೆಚ್ಚಿನ ಕಪ್ಪು ಹಣವನ್ನು ರಿಯಲ್ ಎಸ್ಟೇಟ್, ಚಿನ್ನ, ಆಭರಣಗಳನ್ನಾಗಿ ಪರಿವರ್ತಿಸಲಾಗಿದೆ ಮತ್ತು ವಿದೇಶಿ ಬ್ಯಾಂಕುಗಳಲ್ಲಿ ವಿದೇಶಿ ಕರೆನ್ಸಿಗಳಲ್ಲಿ ಇಡಲಾಗಿದೆ. ಕಪ್ಪು ಹಣ ಪರ್ಯಾಯ ಆರ್ಥಿಕತೆಯಾಗಿ ಅಸ್ತಿತ್ವದಲ್ಲಿದೆ. ಕಾನೂನುಬಾಹಿರವಾಗಿ ಅಥವಾ ಕಾನೂನಿನಲ್ಲಿ ಅನುಮತಿಸಲಾಗಿರುವುದಕ್ಕಿಂತ ಹೆಚ್ಚಿನ ಆರ್ಥಿಕ ವ್ಯವಹಾರಗಳನ್ನು ನಡೆಸುವ ಮೂಲಕ ಅದನ್ನು ಸೃಷ್ಟಿಸಲಾಗುತ್ತದೆ. ಉದಾಹರಣೆಗೆ, ರಿಯಲ್ ಎಸ್ಟೇಟ್ ಕ್ಷೇತ್ರದಲ್ಲಿ ತೆರಿಗೆ ತಪ್ಪಿಸುವ ಉದ್ದೇಶದಿಂದ ವ್ಯವಹಾರಗಳನ್ನು ಪೂರ್ಣವಾಗಿ ಘೋಷಿಸಿ ಕೊಳ್ಳುವುದಿಲ್ಲ; ಅಲ್ಲದೆ ಹಲವು ಆಸ್ತಿಗಳು ಬೇನಾಮಿ ಆಸ್ತಿಯಾಗಿರುತ್ತವೆ. ರಫ್ತು ಮತ್ತು ಆಮದು ವ್ಯವಹಾರದಲ್ಲಿ ಅಂಡರ್ ಇನ್‌ವಾಯ್ಸ್ (ಕಡಿಮೆ ಮೊತ್ತ ನಮೂದು) ಅಥವಾ ಓವರ್ ಇನ್‌ವಾಯ್ಸ್ (ಹೆಚ್ಚು ಮೊತ್ತ ನಮೂದು) ಮಾಡುವುದು ಕಪ್ಪು ಹಣ ಸೃಷ್ಟಿಯ ಇನ್ನೊಂದು ಮಾರ್ಗವಾಗಿದೆ. ಹಾಗೂ ಅದನ್ನು ವಿದೇಶಿ ಬ್ಯಾಂಕ್‌ಗಳಲ್ಲಿ ಇರಿಸಲಾಗುತ್ತದೆ. ಕಪ್ಪು ಹಣವನ್ನು ವರ್ಗಾಯಿಸಲು ಹವಾಲಾ ವ್ಯವಹಾರ ನಡೆಸಲಾಗುತ್ತದೆ ಮತ್ತು ಅದನ್ನು 'ಬಿಳಿ' ಮಾಡಲಾಗುತ್ತದೆ.

ಆರ್ಥಿಕತೆಗೆ ಕಪ್ಪು ಹಣ ಬರುವುದಕ್ಕೆ ಕಾರಣವಾಗುವ ದೋಷಗಳನ್ನು ತಡೆಯಲು ಮೋದಿ ಸರಕಾರ ಯಾವುದೇ ಕ್ರಮಗಳನ್ನು ಕೈಗೊಂಡಿಲ್ಲ. ತೆರಿಗೆಗಳನ್ನು ವಂಚಿಸಿರುವ ಮತ್ತು ರಾಷ್ಟ್ರೀಕೃತ ಬ್ಯಾಂಕ್‌ಗಳಿಂದ ಪಡೆದ ಸಾವಿರಾರು ಕೋಟಿ ರೂಪಾಯಿ ಸಾಲವನ್ನು ಮರುಪಾವತಿಸುವಲ್ಲಿ ತಪ್ಪಿರುವ ದೊಡ್ಡ ಕಾರ್ಪೊರೇಟ್ ಕಂಪೆನಿಗಳ ವಿರುದ್ಧ ಯಾವುದೇ ಕ್ರಮ ಕೈಗೊಂಡಿಲ್ಲ.

ಇದು ಭ್ರಷ್ಟಾಚಾರದ ವಿರುದ್ಧದ ಹೋರಾಟದ ಒಂದು ಹೆಜ್ಜೆ ಎಂದು ಹೇಳಿಕೊಳ್ಳುತ್ತಿರುವುದು ಕೂಡ ಒಂದು ಬೊಗಳೆಯೇ ಸರಿ. ದೊಡ್ಡ ವ್ಯವಹಾರಸ್ಥರು–ಆಳುವ ರಾಜಕಾರಣಿಗಳು ಮತ್ತು ಅಧಿಕಾರಶಾಹಿ ನಡುವಿನ ನಂಟು ಎಲ್ಲಿಯವರೆಗೆ ಮುರಿಯುವುದಿಲ್ಲವೋ ಅಲ್ಲಿಯವರೆಗೆ ಭ್ರಷ್ಟಾಚಾರ ಬೆಳೆದೇ ಬೆಳೆಯುತ್ತದೆ. ಹೊಸ 2000 ರೂಪಾಯಿ ನೋಟುಗಳು ಲಂಚ ನೀಡಲು ಅನುಕೂಲ ಕಲ್ಪಿಸುತ್ತವೆ, ಅಷ್ಟೆ.

500 ಮತ್ತು 1000 ರೂಪಾಯಿ ನೋಟುಗಳನ್ನು ರದ್ದು ಮಾಡಿರುವುದರ ನಿಜವಾದ ಉದ್ದೇಶ ಬೇರೆಯೇ ಇದೆ. ವಿದೇಶಗಳಲ್ಲಿ ಕೂಡಿಡಲಾಗಿರುವ ಕಪ್ಪು ಹಣವನ್ನು ವಾಪಸ್ ತರುವ ಮತ್ತು ಕೋಟ್ಯಂತರ ಉದ್ಯೋಗಗಳನ್ನು ಸೃಷ್ಟಿಸುವ ಚುನಾವಣೆ ಭರವಸೆಯನ್ನು ಈಡೇರಿಸಲು ದಯನೀಯವಾಗಿ ವಿಫಲ ವಾಗಿರುವುದರಿಂದ ಜನತೆಯ ಗಮನವನ್ನು ಬೇರೆಡೆ ಸೆಳೆಯುವುದು ಅದರ ಉದ್ದೇಶವಾಗಿದೆ. ಉತ್ತರ ಪ್ರದೇಶ ಮತ್ತು ಪಂಜಾಬ್ ವಿಧಾನಸಭೆ ಚುನಾವಣೆಗಳಲ್ಲಿ ಪ್ರತಿಪಕ್ಷಗಳ ಹಣಕಾಸು ಸಂಪನ್ಮೂಲಗಳ ಬಳಕೆಯನ್ನು ಕ್ಷತಿಗೊಳಿಸುವ ಮೂಲಕ ಅವುಗಳನ್ನು ನಿಶಸ್ತ್ರಗೊಳಿಸುವುದು ಕೂಡ ಅದರ ಉದ್ದೇಶವಾಗಿದೆ.

ಅನಾಣ್ಯೀಕರಣ ಪ್ರಕ್ರಿಯೆಯನ್ನು ಸಂಪೂರ್ಣ ರಹಸ್ಯವಾಗಿ ನಡೆಸಲಾಗಿದೆ ಎಂದು ಬೊಬ್ಬೆ ಹೊಡೆಯಲಾಗುತ್ತಿದ್ದರೂ ಅದರ ಕುಯುಕ್ತಿ ಬಟಾ ಬಯಲಾಗಿದೆ. ಈ ಕ್ರಮದ ಪ್ರಕಟಣೆ ಮಾಡುವ ಸ್ವಲ್ಪವೇ ಮುನ್ನ ಕೊಲ್ಕತಾದಲ್ಲಿ ಬಿಜೆಪಿ ರಾಜ್ಯ ಘಟಕ 1000 ಮತ್ತು 500 ರೂಪಾಯಿ ನೋಟುಗಳ ರೂಪದಲ್ಲಿ ಮೂರು ಕೋಟಿ ರೂಪಾಯಿಗಳನ್ನು ನಾಲ್ಕು ಕಂತುಗಳಲ್ಲಿ ತನ್ನ ಬ್ಯಾಂಕ್ ಖಾತೆಗೆ ಜಮೆ ಮಾಡಿದೆ. ಇದು ಹೇಗೆ ಸಾಧ್ಯವಾಯಿತು ಎನ್ನುವ ಬಗ್ಗೆ ತನಿಖೆ ನಡೆಯಬೇಕು.

ಜನತೆಯ ಮೇಲೆ ನಡೆಸುತ್ತಿರುವ ಈ ಅವ್ಯಾಹತ ದಾಳಿಯನ್ನು ನಿಲ್ಲಿಸುವಂತೆ ಮೋದಿ ಸರಕಾರದ ಮೇಲೆ ಒತ್ತಡ ತರಬೇಕಾಗಿದೆ. ಇದನ್ನು ಕೊನೆಗೊಳಿಸುವ ಏಕೈಕ ದಾರಿಯೆಂದರೆ ಪರ್ಯಾಯ ಕರೆನ್ಸಿ ಪೂರೈಕೆ ಪೂರ್ಣ ಪ್ರಮಾಣದಲ್ಲಿ ದೊರೆಯುವವರೆಗೆ, ಡಿಸೆಂಬರ್ 30ರ ವರೆಗೆ ಎಲ್ಲಾ ವ್ಯವಹಾರಗಳಿಗೆ 500 ಮತ್ತು 1000 ರೂಪಾಯಿ ನೋಟುಗಳನ್ನು ಬಳಸಲು ಅವಕಾಶ ನೀಡಬೇಕು. ಇದು ಜನರುಗೆ ಇರಲೇಬೇಕಾದ ಹಕ್ಕು. ಈ ಹಕ್ಕನ್ನು ಸಾಧಿಸುವ ದಿಸೆಯಲ್ಲಿ ಒಂದು ಪ್ರಬಲವಾದ ಆಂದೋಲನವನ್ನು ಬೆಳೆಸಬೇಕಾಗಿದೆ. ❐

ಮೊಸಳೆಗಳು ನೆಲದ ಮೇಲೆಯೂ ಬದುಕಬಲ್ಲವು.........

ರಾಜ್ಯಸಭೆಯಲ್ಲಿ ಸೀತಾರಾಮ್ ಯೆಚೂರಿಯವರ ಭಾಷಣದಿಂದ...

- ಸಣ್ಣ ಮೀನುಗಳು ಸಾಯುತ್ತಿವೆ, ಅತ್ತ ದೊಡ್ಡ ಮೊಸಳೆಗಳು ಮಜಾ ಮಾಡುತ್ತಿವೆ. ಅನಾಣ್ಯೀಕರಣ ಪ್ರಧಾನಿಗಳು ಮೊಸಳೆಗಳನ್ನು ಕೊಲ್ಲಲು ಕೆರೆಯನ್ನು ಬರಿದು ಮಾಡಿದಂತೆ, ಮೊಸಳೆಗಳು ನೆಲದ ಮೇಲೆಯೂ ಬದುಕಬಲ್ಲವು ಎಂಬ ಅರಿವಿಲ್ಲದೆ.
- ನೀವು 500 ರೂಪಾಯಿ, 1000 ರೂಪಾಯಿ ನೊಟುಗಳನ್ನು ನಿಲ್ಲಿಸಿದರೆ ಭ್ರಷ್ಟಾಚಾರ ನಿಲ್ಲುತ್ತದೆ ಎಂದು ಭಾವಿಸಿದ್ದೀರಾ? ಈಗ 2000 ರೂಪಾಯಿ ನೋಟುಗಳೊಂದಿಗೆ ಅದು ದುಪ್ಪಟ್ಟಾಗುತ್ತದೆ.
- ಪ್ರಧಾನಿಗಳು ಕ್ರೆಡಿಟ್‌ಕಾರ್ಡ್‌ನಿಂದ ಪಾವತಿ ಮಾಡಿ ಎನ್ನುತ್ತಾರೆ. ಒಬ್ಬ ಟ್ರಕ್‌ಡ್ರೈವರ್ ಹೆದ್ದಾರಿಯ ಲೈನ್ ದಾಬಾದಲ್ಲಿ ಕ್ರೆಡಿಟ್ ಕಾರ್ಡ್‌ನಿಂದ ಪಾವತಿ ಮಾಡಲು ಹೇಗೆ ಸಾಧ್ಯ?
- ಬಂಗಾಲ ಮತ್ತು ದಾರ್ಜಿಲಿಂಗ್‌ನಲ್ಲಿ ಚಹಾ ತೋಟದ ಕಾರ್ಮಿಕರು ಆತ್ಮಹತ್ಯೆ ಮಾಡಿಕೊಳ್ಳುತ್ತಿದ್ದಾರೆ. ಅಸ್ಸಾಂನಲ್ಲಿ ಉಪಚುನಾವಣೆಗಳು ಇರುವುದರಿಂದ ಚಹಾ ಅಲ್ಲಿ ಚಹಾ ತೋಟ ಕಾರ್ಮಿಕರಿಗೆ ವಿನಾಯ್ತಿ ಕೊಡುತ್ತಿದ್ದೀರಿ. ಅವರಿಗೆ ವಿನಾಯ್ತಿ ಕೊಡುತ್ತಿರುವುದು ಒಳ್ಳೆಯದೇ. ಆದರೆ ಎಲ್ಲ ಬಂಗಾಲ ಮತ್ತು ದಾರ್ಜಿಲಿಂಗ್‌ನ ಚಹಾತೋಟದ ಕಾರ್ಮಿಕರಿಗೂ ಏಕೆ ಕೊಡಬಾರದು?
- ಈಗ ನಮ್ಮ ಪ್ರಧಾನಿಗಳು ಪೇಟಿಎಂನಂತೆ ಜಾಹಿರಾತುಗಳಲ್ಲಿ ಕಾಣಿಸಿಕೊಳ್ಳುತ್ತಿದ್ದಾರೆ, ಜಯಹಿಂದ್ ಬದಲು ಜಿಯೋ ಹಿಂದ್ ಎಂದು ಮಾತಾಡುತ್ತಿದ್ದಾರೆ. ಈಗೇನಾಗುತ್ತಿದೆ ಇಲ್ಲಿ?
- ದೇಶದಲ್ಲಿ 86% ವ್ಯವಹಾರಗಳು ನಗದಿನಲ್ಲೆ ನಡೆಯುತ್ತಿರುವಾಗ, ಅವೆಲ್ಲ ಬಿಳಿ ಹಣವಾಗಿರುವಾಗ, ನಾವು ನಗದುರಹಿತ ಆರ್ಥಿಕದ ಬಗ್ಗೆ ಹೇಗೆ ಮಾತಾಡಲು ಸಾಧ್ಯ? ಇಂದು ದೇಶ ಕೇವಲ 14% ನಗದು ವ್ಯವಹಾರದ ಮೇಲೆಯೇ ಬದುಕುವಂತಾಗಿದೆ.
- ನಮ್ಮ ಪ್ರಧಾನ ಮಂತ್ರಿಗಳು 95% ಕಪ್ಪು ಹಣ ಸಾಗರದಾಚೆಯಲ್ಲಿದೆ, ತೆರಿಗೆ ತಪ್ಪಿಸುವ ಪ್ರದೇಶಗಳಲ್ಲಿವೆ ಎಂದು 2014ರ ಚುನಾವಣೆಗಳ ಸಮಯದಲ್ಲಿ ಹೇಳುತ್ತಿದ್ದರು. 15 ಲಕ್ಷ ತಂದು ಕೊಡುವುದಾಗಿಯೂ ಭರವಸೆ ಕೊಟ್ಟರು. ಆಗ ಅದನ್ನು ಹೇಳಿದ ಅವರೇ ಈಗೇನು ಮಾಡುತ್ತಿದ್ದಾರೆ?
- ಭ್ರಷ್ಟಾಚಾರಕ್ಕೆ ಪೂರೈಕೆಯಾಗುವುದನ್ನು ನೀವು ತಡೆಯದಿದ್ದರೆ ನೀವು ಅದನ್ನು ಎದುರಿಸಲಾರಿರಿ. ನಾನು ಹಲವು ಬಾರಿ ಹೇಳಿದ್ದೇನೆ, ಈಗಲೂ ಹೇಳುತ್ತೇನೆ, ಎಲ್ಲ ಪಾರ್ಟಿಗಳಿಗೂ ಕಾರ್ಪೊರೇಟ್ ಹಣ ಬರುವುದು ನಿಲ್ಲಬೇಕು.
- ನೀವು ಬ್ಯಾಂಕುಗಳಿಗೆ ಕರೆನ್ಸಿ ವಿನಿಮಯಕ್ಕೆ ಅವಕಾಶ ಕೊಟ್ಟಿದ್ದೀರಿ, ಆದರೆ ಗ್ರಾಮೀಣ ಸಹಕಾರಿ ಬ್ಯಾಂಕುಗಳಿಗೆ ಕೊಟ್ಟಿಲ್ಲ. ಬಹುಪಾಲು ಗ್ರಾಮೀಣ ಜನರು ವ್ಯವಹಾರ ನಡೆಸುವ ಈ ಬ್ಯಾಂಕುಗಳಲ್ಲಿ ವಾಪಾಸು ಮಾಡದ ಸಾಲಗಳ ಪ್ರಮಾಣ 1% ಕ್ಕಿಂತಲೂ ಕಡಿಮೆ. ಅವಕ್ಕೆ ಏಕೆ ಅವಕಾಶ ಕೊಟ್ಟಿಲ್ಲ? ಅತಿ ಶ್ರೀಮಂತರು ವ್ಯವಹಾರ ನಡೆಸಬಹುದು, ಬಡವರಿಗೆ ಸಾಧ್ಯವಿಲ್ಲ ಎಂದು ನಿಮ್ಮ ಅರ್ಥವೇ?
- ಗ್ರಾಮೀಣ ಪ್ರದೇಶದಲ್ಲಿ 80.8% ಮಂದಿಗೆ ಬ್ಯಾಂಕ್ ಖಾತೆಗಳಿಲ್ಲ, ಅವರು ಯಾವ ಬ್ಯಾಂಕಿಗೆ ಹೋಗಬೇಕು ಎನ್ನುತ್ತಾರೆ ಪ್ರಧಾನ ಮಂತ್ರಿಗಳು?

ರಾಜ್ಯಾದ್ಯಂತ ಭೂಮಿ-ವಸತಿಗಾಗಿ ಯಶಸ್ವಿ ಜೈಲು ಭರೋ : ಸಾವಿರಾರು ಬಂಧನ

ರಾಜ್ಯಾದ್ಯಂತ 80ಕ್ಕೂ ಹೆಚ್ಚು ಜಿಲ್ಲಾ ತಾಲೂಕು ಕೇಂದ್ರಗಳಲ್ಲಿ ಭೂಮಿ-ವಸತಿಗಾಗಿ ಜೈಲು ಭರೋ ಚಳುವಳಿ ಸ್ಫೂರ್ತಿದಾಯಕವಾಗಿ ದೊಡ್ಡ ಪ್ರಮಾಣದಲ್ಲಿ ನಡೆದಿರುವ ವರದಿಗಳು ಬರುತ್ತಿವೆ. ಇನ್ನೂ ಬರಲಿವೆ. ಹತ್ತಾರು ಸಾವಿರಾರು ಜನರು ಜಿಲ್ಲಾ ತಾಲೂಕು ಕಚೇರಿಗಳಿಗೆ ಮುತ್ತಿಗೆ ಹಾಕಿದ್ದು ಸಾವಿರಾರು ಜನರನ್ನು ಬಂಧಿಸಲಾಗಿದೆ. ಹಲವು ಕಡೆ ಪ್ರತಿಭಟನಾಕಾರ ಮೇಲೆ ಲಾಠಿ ಚಾರ್ಜ್ ಮಾಡಲಾಗಿದೆ. ಪೋಲಿಸು-ಪ್ರತಿಭಟನಾಕಾರರ ನಡುವೆ ಘರ್ಷಣೆಗಳು ನಡೆದಿವೆ. ಒಟ್ಟಿಗೆ ರೈತಸಂಘ ಸೇರಿದಂತೆ ಹಲವಾರು ಸಾಮೂಹಿಕ ಸಂಗಟನೆಗಳು ಹಮ್ಮಿಕೊಂಡಿದ್ದ ಭೂಮಿ-ವಸತಿಗಾಗಿ ಜೈಲು ಭರೋ ಯಶಸ್ವಿಯಾಗಿದೆ. ಈ ವರೆಗೆ ಬಂದಿರುವ ಜಿಲ್ಲಾವಾರು ವರದಿಗಳು ಹಾಗೂ ಚಿತ್ರಗಳು ಇಲ್ಲಿವೆ.

ವರದಿ : ಶಿವು ಹೊಸಹಳ್ಳಿ



ಚಿಕ್ಕಬಳ್ಳಾಪುರ : ಜಿಲ್ಲೆಯ ಬಾಗೇಪಲ್ಲಿ ತಾಲ್ಲೂಕಿ ಕೇಂದ್ರದಲ್ಲಿ ಸಿಪಿಐ(ಎಂ) ರಾಜ್ಯ ಕಾರ್ಯದರ್ಶಿ ಜಿ.ವಿ.ಶ್ರೀರಾಮರೆಡ್ಡಿ, ತಾಲ್ಲೂಕು ಸಮಿತಿ ಕಾರ್ಯದರ್ಶಿ ರಘುರಾಮರೆಡ್ಡಿ, ಮುಖಂಡರಾದ ಚನ್ನರಾಯಪ್ಪ, ಸೇರಿದಂತೆ ಅನೇಕ ನಾಯಕರು ನೇತೃತ್ವದಲ್ಲಿ ಸುಮಾರು 2 ಸಾವಿರಕ್ಕೂ ಹೆಚ್ಚಿನ ಸಂಖ್ಯೆಯಲ್ಲಿ ಜಮಾಯಿಸಿದ ರೈತ ಮತ್ತು ಕೃಷಿಕೂಲಿಕಾರ ಮತ್ತು ಕಾರ್ಮಿಕರು ತಾಲ್ಲೂಕು ಕಛೇರಿ ಮುತ್ತಿಗೆ ಹಾಕಿದ್ದಾರೆ. ಸ್ಥಳದಲ್ಲಿ ಸಂಘರ್ಷತ್ತಾತ್ಮಕ ವಾತಾವರಣ ಉಂಟಾಗಿದ್ದು, ಪ್ರತಿಭಟನಾಕಾರರನ್ನು ಬಂಧಿಸಿದ್ದಾರೆ.

ಗುಡಿಬಂಡೆ : ನಗರದಲ್ಲಿ ಸಿಪಿಐಎ(ಎಂ) ರಾಜ್ಯ ಸಮಿತಿ ಸದಸ್ಯರಾದ ಜಯರಾಮರೆಡ್ಡಿ ನೇತೃತ್ವದಲ್ಲಿ 2 ಸಾವಿರಕ್ಕೂ ಅಧಿಕ ಸಂಖ್ಯೆಯಲ್ಲಿ ಜನರು ಸೇರಿದ್ದರು. ಸುಮಾರು 200 ಜನ ರೈತ ಮುಖಂಡರನ್ನು ಬಂಧಿಸಿ, ನಗರದಿಂದ 20 ಕಿ.ಮೀ. ದೂರದಲ್ಲಿರುವ ಗೌಪ್ಯ ಸ್ಥಳಕ್ಕೆ ಸ್ಥಳಾಂತರಿಸಿದ್ದಾರೆ.

ಗೌರಿಬಿದನೂರು ಹಾಗೂ ಚಿಕ್ಕಬಳ್ಳಾಪುರದಲ್ಲಿ ಎಂ.ಪಿ.ಮುನಿವೆಂಕಪ್ಪ, ಸಿದ್ಧಗಂಗಪ್ಪ, ಸೇರಿದಂತೆ ಸುಮಾರು 300ಕ್ಕೂ ಹೆಚ್ಚಿನ ರೈತ-ಕಾರ್ಮಿಕರನ್ನು ಬಂಧಿಸಲಾಗಿದೆ.



ದಕ್ಷಿಣ ಕನ್ನಡ : ಮಂಗಳೂರು ನಗರದ ಮಿನಿ ವಿಧಾನಸೌಧದಿಂದ ಜಿಲ್ಲಾಧಿಕಾರಿಗಳ ಕಛೇರಿ ಕಡೆಗೆ ಹೊರಟ ಸುಮಾರು 1,500 ಪ್ರತಿಭಟನಾಕಾರರ ಮೆರವಣಿಗೆಯು ಜಿಲ್ಲಾಧಿಕಾರಿ ಕಛೇರಿ ಸಮೀಪಕ್ಕೆ ಬರುತ್ತಿದ್ದಂತೆ ಗೇಟುಗಳನ್ನು ಬಂದ್ ಮಾಡಲಾಗಿದೆ. ಈ ಕಾರಣಕ್ಕಾಗಿ ಪ್ರತಿಭಟನಾಕಾರರು ಮತ್ತು ಆರಕ್ಷಕ ಸಿಬ್ಬಂದಿಗಳ ನಡುವೆ ಗುದ್ದಾಟ ಏರ್ಪಟ್ಟಿದ್ದು ಕೊನೆಗೆ ಸುಮಾರು 160 ಜನ ಪ್ರತಿಭಟನಾಕಾರರನ್ನು ಬಂಧಿಸಿದ್ದಾರೆ. ಮುಖಂಡರಾದ ವಸಂತ ಆಚಾರಿ, ಜೆ.ಬಾಲಕೃಷ್ಣ ಶೆಟ್ಟಿ, ಕೆ.ಆರ್.ಶ್ರೀಯಾನ್, ಸೇರಿದಂತೆ ಇತರೆ ನಾಯಕರು ಭಾಗವಹಿಸಿದ್ದರು.

ಉಡುಪಿ : ಜಿಲ್ಲೆಯಲ್ಲೂ ಪ್ರತಿಭಟನೆ ನಡೆದಿದ್ದು, ಒಂದು ಸಾವಿರಕ್ಕೂ ಹೆಚ್ಚು ಜನ ಭಾಗವಹಿಸಿದ್ದರು. ಸುಮಾರು 500 ಜನರನ್ನು ಬಂಧಿಸಲಾಗಿದೆ. ಮುಖಂಡರಾದ ಬಾಲಕೃಷ್ಣ ಶೆಟ್ಟಿ, ಕೆ.ಶಂಕರ್, ಮತ್ತಿತರ ಮುಖಂಡರು ಇದ್ದರು.



ಬೆಂಗಳೂರು : ನಗರದ ಟೌನ್‌ಹಾಲ್ ಮುಂಭಾಗ ಸುಮಾರು 150ಕ್ಕೂ ಹೆಚ್ಚಿನ ಪ್ರತಿಭಟನಾಕಾರರು ಭಾಗವಹಿಸಿದ್ದರು. ಮುಖಂಡರಾದ ಜಿ.ಎನ್.ನಾಗರಾಜ್, ಕೆ.ಪ್ರಕಾಶ್, ಕೆ.ಎನ್.ಉಮೇಶ್, ಎನ್. ವೆಂಕಟಾಚಲಯ್ಯ, ಚಂದ್ರಪ್ಪ ಹೊಸ್ಕೆರಾ, ಗೋಪಾಲಕೃಷ್ಣ ಅರಳಹಳ್ಳಿ ಮತ್ತಿತರ ಮುಖಂಡರು ಭಾಗವಹಿಸಿದ್ದರು.

ಆನೇಕಲ್ ತಾಲ್ಲೂಕಿನಲ್ಲಿ ಪ್ರತಿಭಟನಾ ಮೆರವಣಿಗೆ ಹೊರಟ ರೈತ ಕಾರ್ಮಿಕರು ತಹಶೀಲ್ದಾರ್ ಕಛೇರಿ ಮುತ್ತಿಗೆ ಹಾಕಿ ಬಂಧನಕ್ಕೆ ಒಳಗಾಗಿದ್ದಾರೆ. ಮುಖಂಡರಾದ ಬಿ.ಎನ್.ಮಂಜುನಾಥ್, ಡಿ.ಮಹದೇಶ್, ಬಿ.ರಾಜಶೇಖರ ಮೂರ್ತಿ, ಕೆ.ಎಸ್.ಲಕ್ಷ್ಮಿ, ಮತ್ತಿತರ ಮುಖಂಡರು ಭಾಗವಹಿಸಿದ್ದರು.



ಬಳ್ಳಾರಿ : ಜಿಲ್ಲೆಯ 6 ತಾಲ್ಲೂಕುಗಳಲ್ಲೂ ಪ್ರತಿಭಟನೆ ಯಶಸ್ವಿಯಾಗಿ ನಡೆದಿದೆ. ಹಗರಿಬೊಮ್ಮನಹಳ್ಳಿ ತಾಲ್ಲೂಕಿನಲ್ಲಿ 500 ಜನ, ಸಿರಗುಪ್ಪ – 2000 ಜನ, ಬಳ್ಳಾರಿ – 300 ಜನ. ಕುರಗೋಡು – 300, ಹೂವಿನ ಹಡಗಲಿ – 400, ಸಂಡೂರು – 250 ಜನ, ಹೊಸಪೇಟೆ ತಾಲ್ಲೂಕಿನಲ್ಲಿ 2000 ಜನ ಭಾಗವಹಿಸಿದ್ದರು. ಮುಖಂಡರಾದ ಯು.ಬಸವರಾಜು, ಆರ್.ಎಸ್.ಬಸವರಾಜು ಸೇರಿದಂತೆ ಜಿಲ್ಲೆಯ ಒಟ್ಟು 3000 ಜನ ಬಂಧನಕ್ಕೊಳಗಾಗಿದ್ದಾರೆ.

ಕೋಲಾರ : ಜಿಲ್ಲೆಯಲ್ಲಿ ಪ್ರತಿಭಟನೆ ಸಂಪೂರ್ಣ ಯಶಸ್ವಿಯಾಗಿದೆ. ಕೋಲಾರ, ಬಂಗಾರಪೇಟೆ, ಶ್ರೀನಿವಾಪುರ, ಮಾಲೂರು, ಮುಳಬಾಗಿಲು ತಾಲ್ಲೂಕುಗಳಲ್ಲಿ ಕ್ರಮವಾಗಿ 600, 250, 300, 200, 350 ಜನರು ಭಾಗವಹಿಸಿದ್ದರು. ಎಲ್ಲರೂ ಬಂಧನಕ್ಕೆ ಒಳಗಾಗಿದ್ದಾರೆ. ಮುಖಂಡರಾದ



ನಾರಾಯಣಸ್ವಾಮಿ ಮತ್ತು ಅರ್ಜುನನ್, ವಿ.ಗೀತಾ ಪ್ರತಿಭಟನೆಯ ನೇತೃತ್ವ ವಹಿಸಿದ್ದರು.

ಕಲಬುರಗಿ : ಜಿಲ್ಲೆಯ ಕಲಬುರಗಿ – 2000 ಜನ, ಚಿಂಚೋಳ್ಳಿ – 400, ಚಿತ್ತಾಪುರ – 2000 ಜನ, ಅಳಂದ – 500 ಜನ ರೈತ, ಕೃಷಿಕೂಲಿಕಾರರು ಮತ್ತು ಕಾರ್ಮಿಕರು ಪ್ರತಿಭಟನೆಯಲ್ಲಿ ಭಾಗವಹಿಸಿದ್ದರು. ಕಲಬುರಗಿಯಲ್ಲಿ 47 ಜನ ಬಂಧನಕ್ಕೆ ಒಳಗಾಗಿದ್ದಾರೆ. ಉಳಿದ ಕಡೆ ತಾಲ್ಲೂಕು ತಹಶೀಲ್ದಾರರಿಗೆ ಮನವಿ ಪತ್ರ ನೀಡಲಾಗಿದೆ. ಮುಖಂಡರಾದ ಮಾರುತಿ ಮಾನ್ಪಡೆ, ಶರಣಬಸಪ್ಪ ಮಮಶೆಟ್ಟಿ, ಮತ್ತಿತರ ಮುಖಂಡರು ನೇತೃತ್ವ ವಹಿಸಿದ್ದರು.



ಯಾದಗಿರಿ : ಜಿಲ್ಲೆಯ ಶಹಾಪುರದಲ್ಲಿ 70 ಜನ ಭಾಗವಹಿಸಿದ್ದು, ಮನವಿ ಪತ್ರವನ್ನು ತಹಶೀಲ್ದಾರರಿಗೆ ನೀಡಿದ್ದಾರೆ. ಯಾದಗಿರಿಯಲ್ಲಿ 170 ಜನ ಪ್ರತಿಭಟನೆ ನಡೆಸಿ ಬಂಧನಕ್ಕೆ ಒಳಗಾಗಿದ್ದಾರೆ.



ಧಾರವಾಡ : ಜಿಲ್ಲೆಯಲ್ಲಿ ಪ್ರತಿಭಟನೆ ನಡೆದಿದ್ದು ಒಟ್ಟು 475 ಜನ ಬಂಧನಕ್ಕೆ ಒಳಗಾಗಿದ್ದಾರೆ. ಬಂಧನದ ನಂತರವೂ ಜೈಲಿಗೆ ಕಳುಹಿಸುವಂತೆ ಒತ್ತಾಯಿಸಿ ಪ್ರತಿಭಟನೆ ಮುಂದುವರೆದಿದೆ. ಮುಖಂಡರಾದ ಬಿ.ಎಸ್.ಸೊಪ್ಪಿನ್, ಮಹೇಶ್ ಪತ್ತಾರ್ ಸೇರಿದಂತೆ ಇತರೆ ಮಖಂಡರು ಭಾಗವಹಿಸಿದ್ದಾರೆ.

ಹಾಸನ : ನಗರದಲ್ಲಿ ಭಾರೀ ಸಂಖ್ಯೆಯಲ್ಲಿ ಪ್ರತಿಭಟನಾಕಾರರು ಜಮಾಯಿಸಿದ್ದು, ಜಿಲ್ಲಾಧಿಕಾರಿ ಕಛೇರಿಗೆ ಮುತ್ತಿಗೆ ಹಾಕಲು ಹೊರಟಿದ್ದರು. ಪ್ರತಿಭಟನಾಕಾರರನ್ನು ಪೊಲೀಸರು ಬಂಧಿಸಿ, ಪೊಲೀಸ್ ಮೈದಾನಕ್ಕೆ ಕರೆದೊಯ್ದಿದ್ದಾರೆ. ಪಟ್ಟು ಬಿಡದ ಪ್ರತಿಭಟನಾಕಾರರು ಜೈಲಿಗೆ ಕಳುಹಿಸುವಂತೆ ಪ್ರತಿಭಟನೆ ಮುಂದುವರೆಸಿದ್ದಾರೆ. ಮುಖಂಡರಾದ ಎಸ್.ವರಲಕ್ಷ್ಮಿ, ಧರ್ಮೇಶ್, ನವೀನ್‌ಕುಮಾರ್, ಸೇರಿದಂತೆ ಹಲವು ಮುಖಂಡರು ಭಾಗವಹಿಸಿದ್ದಾರೆ.

ಪುಟ 16 ಕ್ಕೆ





ಆಕ್ರಮಣಕಾರಿ ಕೋಮುವಾದದ ವಿರುದ್ಧ ಎಡಪಕ್ಷಗಳ ಸಮಾವೇಶ

ವಿನೋದ, ಶ್ರೀರಾಮಪುರ

ಆಕ್ರಮಣಕಾರಿ ಕೋಮುವಾದದ ವಿರುದ್ಧ ಸಾಕಷ್ಟು ಪ್ರತಿರೋಧ ಎದ್ದು ಬರಬೇಕಿದೆ. ಪ್ರತಿರೋಧ ಇಲ್ಲದಿರುವುದರಿಂದಲೇ ಅದು ಅಷ್ಟು ಆಕ್ರಮಣಕಾರಿಯಾಗಿದೆ. ನಮ್ಮ ದೇಶ ಸಹನಶೀಲ ದೇಶ, ಕೋಮುವಾದಕ್ಕೆ ಸರ್ಕಾರದಿಂದಲೂ ಕುಮ್ಮಕ್ಕು ಇದೆ ಎಂದು ಹಿರಿಯ ಚಿಂತಕ ಡಾ|. ಜಿ.ರಾಮಕೃಷ್ಣರವರು ಟೀಕಿಸಿದರು.

ಅವರು ನವೆಂಬರ್ 12ರಂದು ಬೆಂಗಳೂರಿನ ಸಚಿವಾಲಯ ಸಭಾಂಗಣದಲ್ಲಿ ಸಿಪಿಐ(ಎಂ), ಸಿಪಿಐ, ಎಸ್‌ಯುಸಿಐ(ಸಿ) ಮತ್ತು ಸಿಪಿಐ(ಎಂ.ಎಲ್) ನೇತೃತ್ವದ ಎಡಪಕ್ಷಗಳು ಜಂಟಿಯಾಗಿ ಹಮ್ಮಿಕೊಂಡಿದ್ದ 'ಕರ್ನಾಟಕದಲ್ಲಿ ಆಕ್ರಮಣಕಾರಿ ಕೋಮುವಾದದ ವಿರುದ್ಧ' ರಾಜ್ಯ ಸಮಾವೇಶವನ್ನು ಉದ್ಘಾಟಿಸುತ್ತಾ ಮಾತನಾಡಿದರು. ಸಚಿವಾಲಯ ಸಭಾಂಗಣ ಕಿಕ್ಕಿರಿದು ತುಂಬಿತ್ತು.

ಮುಂದುವರೆದು ಮಾತನಾಡಿದ ಅವರು "ಕೋಮುವಾದದ ಬಗ್ಗೆ ಪ್ರಸಿದ್ಧ ಇತಿಹಾಸಕಾರ ಬಿಪನ್ ಚಂದ್ರ ರವರ ಪುಸ್ತಕವೊಂದರ ಮರುಮುದ್ರಣ ಮಾಡದಿರಲು ನ್ಯಾಷನಲ್ ಬುಕ್ ಟ್ರಸ್ಟ್ ನಿರ್ಧರಿಸಿದೆ. ಇದಕ್ಕೆ ಸಾವಿರಾರು ಸಂಖ್ಯೆಯಲ್ಲಿರುವ ಚರಿತ್ರೆ ಅಧ್ಯಾಪಕರ ಪ್ರತಿರೋಧ ಅಗತ್ಯವಿದ್ದಷ್ಟು ಪ್ರಬಲವಾಗಿರಲಿಲ್ಲ. ಸಾಹಿತ್ಯ ಕ್ಷೇತ್ರದಲ್ಲಿ, ಸರ್ಕಾರಿ ನಿರ್ವಹಣೆಯ ಕೇಂದ್ರಗಳಲ್ಲಿ ಕೋಮುವಾದ ವ್ಯಾಪಕವಾಗಿ ಹರಡಿದೆ. ಪ್ರಾಧ್ಯಾಪಕ ವರ್ಗದಿಂದ ಸಾಕಷ್ಟು ವಿರೋಧ ವ್ಯಕ್ತವಾಗುತ್ತಿಲ್ಲ. ಬಾಯಿಗೆ ಬೆಣ್ಣೆ ಹಾಕಿಕೊಂಡು ಕೂತಿದ್ದಾರೆ. ಇಂದು ಅಲ್ಪಸಂಖ್ಯಾತರ ಮೇಲೆ ದಾಳಿಗಳಲ್ಲಿ, ಗೋಮಾತೆ ರಕ್ಷಣೆಯಲ್ಲಿ ತೊಡಗಿದವರು, ಭಾರತ ಮಾತಾಕಿ ಜೈ ಮತ್ತು ಜೈಶ್ರೀರಾಮ್ ಘೋಷಣೆ ಹಾಕುವವರು ದೊಡ್ಡ ದೇಶಭಕ್ತರು. ಇಲ್ಲದಿದ್ದರೆ, ದೇಶದ್ರೋಹಿಗಳು. ಆರ್‌ಎಸ್‌ಎಸ್ ಬಗ್ಗೆ ಮಾತನಾಡುವ ಹಾಗೇ ಇಲ್ಲ." ಎಂದರು.

ಮತಾಂಧತೆ ಹೆಚ್ಚುತ್ತಿರುವ ಬಗ್ಗೆ ಜನತೆ ತಿಳಿಸಬೇಕು. ಅಚಾರಿಕ, ಅವೈಚಾರಿಕತೆಯ ಅಂಶಗಳು ಹೆಚ್ಚಾಗುತ್ತಿದೆ. ನಮ್ಮದು ವೈವಿದ್ಯಮಯ ಸಂಸ್ಕೃತಿ, ಎಲ್ಲರನ್ನೂ ಎಲ್ಲ ರೀತಿಯಲ್ಲೂ ನಾವು ಬೆಳೆಸಿಕೊಳ್ಳಬೇಕು. ಬರೀ ಮಾತುಗಾರಿಕೆ, ಪಾಂಡಿತ್ಯದ ಪ್ರದರ್ಶನ ಮಾತ್ರ ಆಗುತ್ತಿದೆ. ಜನತೆಯ ಮಧ್ಯೆ ಹೋಗಬೇಕು, ಪ್ರಚಾರ ಮಾಡಬೇಕು. ನಮ್ಮ ಕೆಲಸ ಮೂಲಕ ಜನರಿಗೆ ಅರ್ಥ ಆಗುವ ಭಾಷೆಯಲ್ಲಿ ತಿಳಿಸಬೇಕು ಎಂದು ಅವರು ಒತ್ತಿ ಹೇಳಿದರು.

ನಾವು ಎಂದಿಗೂ ಹತಾಶರಾಗಬೇಕಿಲ್ಲ. ಬೌದ್ಧಿಕ ವಲಯಗಳಲ್ಲಿ ಇಂದಿಗೂ ಕೋಮುವಾದ ಪ್ರಧಾನವಾಗಿಲ್ಲ. ಇಂದಿಗೂ ಹಲವೆಡೆ ವಿಚಾರವಂತ ಕಾರ್ಯಕ್ರಮಗಳು ನಡೆಯುತ್ತಿವೆ. ಅಕಾಡೆಮಿಕ್ ಕೇಂದ್ರಗಳಿಂದ ಅವು ಜನರ ಬಳಿಗೆ ತಲುಪಿಸುವ ಕೆಲಸ ನಾವು ಮಾಡಬೇಕು. ನೈಜತೆಯನ್ನು ರೂಢಿಸಿಕೊಳ್ಳಬೇಕು. ನಾಲ್ಕು ಗೋಡೆಯ ಮಧ್ಯೆಯ ಸಭೆಗಳಿಂದ ಹೊರ ಬಂದು, ನಿರಂತರವಾಗಿ ಸಾರ್ವಜನಿಕ ಚರ್ಚೆಗಳಲ್ಲಿ ತೊಡಗಬೇಕಿದೆ" ಎಂದು ಡಾ. ಜಿ.ರಾಮಕೃಷ್ಣರವರು ತಿಳಿಸಿದರು.

ಹಿಂದುತ್ವದ ಬಗ್ಗೆ ಸಂವಿಧಾನ ಪೀಠ

ಮುಖ್ಯ ಅತಿಥಿಗಳಾಗಿ ಭಾಗವಹಿಸಿದ ಮಾಜಿ ಅಡ್ವೋಕೇಟ್ ಜನರಲ್ ಪ್ರೊ. ರವಿವರ್ಮ ಕುಮಾರ್ ರವರು ಮಾತನಾಡಿ " ಸ್ವಾತಂತ್ರ್ಯ ಪೂರ್ವದಲ್ಲೇ ಬ್ರಿಟಿಷ್ ಅಧಿಕಾರಿ "ಭಾರತದಲ್ಲಿ ಪರಿಸ್ಥಿತಿ ವಿಭಿನ್ನವಾಗಿದೆ. ರಾಜಕೀಯದಲ್ಲಿ ಧರ್ಮ ಬೆರೆಸಿದರೆ, ಪ್ರಜಾಪ್ರಭುತ್ವಕ್ಕೆ ವಿಷ ಉಣಿಸಿದಂತೆ. ಇತರೆ ಧರ್ಮಗಳು ಅಲ್ಪಸಂಖ್ಯಾತರಾಗಿಯೇ ಉಳಿಯುತ್ತಾರೆ. ಎಂದಿದ್ದರು. ಭಾರತವು ಇಂದು ಜಾತ್ಯಾತೀತ ಸಂವಿಧಾನವನ್ನು ಒಪ್ಪಿಕೊಂಡಿದೆ. ಪ್ರಜಾತಂತ್ರದಲ್ಲಿ ಯಾವ ಸನ್ನಿವೇಶದಲ್ಲೂ ಧರ್ಮ, ಜಾತಿ, ಭಾಷೆ ಬೆರೆಸಬಾರದು. ರಾಮಜನ್ಮಭೂಮಿ–ಬಾಬ್ರಿ ಮಸೀದಿ ಚಳುವಳಿಯ ನಂತರ ಚುನಾವಣಾ ರಾಜಕೀಯದಲ್ಲಿ ನೇರವಾಗಿ ಧರ್ಮದ ಬಳಕೆ ಆಗುತ್ತಿದೆ. ಮಹಾರಾಷ್ಟ್ರದಲ್ಲಿ ಧರ್ಮದ ಆಧಾರದಲ್ಲಿ ಚುನಾವಣೆ ಎದುರಿಸಿದ ಶಿವಸೇನೆ ವಿರುದ್ಧ ದಾವೆಗಳನ್ನು ಹೂಡಲಾಗಿತ್ತು. ಅವರ ವಿರುದ್ಧ ತೀರ್ಪುಗಳೂ ಬಂದಿದ್ದವು." ಎಂದು ಕೋಮುವಾದಿ ರಾಜಕಾರಣದ ಬಗ್ಗೆ ಮಾತನಾಡುತ್ತಾ ಹೇಳಿದರು.

ನಂತರದಲ್ಲಿ ನ್ಯಾಯಾಂಗದಲ್ಲಿ ಆದ ಕೆಲವು ಪ್ರಮುಖ ಬದಲಾವಣೆಗಳು ಕೋಮುವಾದ ಬಲಗೊಳ್ಳಲು ಕಾರಣವಾಗಿವೆ 1. ನ್ಯಾಯಮೂರ್ತಿಗಳ ನೇಮಕಾತಿ ಕಾರ್ಯಾಂಗದ ವ್ಯಾಪ್ತಿಯಿಂದ ನ್ಯಾಯಾಂಗಕ್ಕೆ ಹಸ್ತಾಂತರವಾಯಿತು. ನ್ಯಾಯಮೂರ್ತಿಗಳೇ, ನ್ಯಾಯಮೂರ್ತಿಗಳನ್ನು ನೇಮಕ ಮಾಡುವ ಪರಿಸ್ಥಿತಿ ಬಂದಿದೆ. 2. ಆಯೋಧ್ಯೆ ಬಗ್ಗೆ ಬಂದ ತೀರ್ಪುಗಳು: ನ್ಯಾ. ಜೆ.ಎಸ್.ವರ್ಮ ಹಿಂದುತ್ವ ಧರ್ಮವೇ ಅಲ್ಲ, ಜೀವನ ವಿಧಾನ ಎಂದು ಪ್ರತಿಪಾದಿಸಿದರು. ರಾಜಕೀಯದಲ್ಲಿ ಧರ್ಮದ ಬಳಕೆ ಹೆಚ್ಚಾಗುತ್ತಾ ಹೋಯಿತು. ನ್ಯಾಯಾಲಯದ ತೀರ್ಪುಗಳು ಸಹ ರಾಜಕೀಯ ಬದಲಾವಣೆಗೆ ರೂಪ ನೀಡಿತು. ಇದು ಗಂಭೀರವಾಗಿದ್ದು 1996ರ ಏಪ್ರಿಲ್ 16ರಂದು ಜೆ.ಎಸ್.ವರ್ಮರವರು ಹಿಂದುತ್ವದ ಪ್ರಶ್ನೆಯನ್ನು ಸುಪ್ರೀಂ ಕೋರ್ಟ್‌ನ ಸಂವಿಧಾನ ಪೀಠಕ್ಕೆ ವರ್ಗ ಮಾಡಿದರು. ಹಿಂದುತ್ವದ ಬಗ್ಗೆ ಅಂತಿಮ ತೀರ್ಪು ಇನ್ನೂ ಬಂದಿಲ್ಲ. ಹಾಗೇಯೇ ಉಳಿದಿದೆ. ಎಡಪಕ್ಷಗಳು ಈ ನ್ಯಾಯಾಂಗ ತೀರ್ಪಿನ ಬದಲಾವಣೆ ಬಗ್ಗೆ ಗಂಭಿರವಾಗಿ ಗಮನ ಹರಿಸಲಿಲ್ಲ. ಇದು ರಾಜಕಾರಣದ ಕೋಮುವಾದೀಕರಣ ತಡೆಯಲು ಮುಖ್ಯ ಎಂದು ಪ್ರೊ. ರವಿವರ್ಮ ಕುಮಾರ್ ಅವರು ಬಲವಾಗಿ ಪ್ರತಿಪಾದಿಸಿದರು.

ಮೋದಿ ಸರಕಾರ ನ್ಯಾಯಾಂಗ ನೇಮಕ ಬಗ್ಗೆ ತಂದ ಆದೇಶ ದೇಶಕ್ಕೆ ಮಾರಕವಾದದ್ದು. ಚುನಾವಣೆಯಲ್ಲಿ ಕೋಮುವಾದ, ಧರ್ಮದ ಬಳಕೆಗಳು ಇರುವುದರಿಂದ ಅದನ್ನು ತೊಡೆದು ಹಾಕಲು ಸಾಧ್ಯವಾಗುತ್ತಿಲ್ಲ. ಧರ್ಮದ ಹೆಸರಿನಲ್ಲಿ ಆಗುತ್ತಿರುವ ಕೊಲೆಗಳು ಅತಿ ಹೆಚ್ಚು ನಮ್ಮ ದೇಶದಲ್ಲಿದೆ. ದೇಶದ ರಾಜಕೀಯದಲ್ಲಿ ಪ್ರಧಾನವಾಗಿರುವ ಆಳುವ ಪಕ್ಷ ಬಿಜೆಪಿ ಪಕ್ಷದ ಕೋಮುವಾದೀಕರಣದ ವಿರುದ್ಧ ಎಲ್ಲಾ ವಿರೋಧ ಪಕ್ಷಗಳು ಒಂದಾಗಲೇಬೇಕಿದೆ ಎಂದು ಪ್ರೊ. ಕುಮಾರ್ ಕರೆ ನೀಡಿದರು.

ಜಿಲ್ಲಾ ತಾಲೂಕು ಸಮಾವೇಶ ಸಂಘಟಿಸಿ: ಜಿ.ವಿ.ಶ್ರೀರಾಮರೆಡಿ

ಸಿಪಿಐ(ಎಂ) ಪಕ್ಷದ ರಾಜ್ಯ ಕಾರ್ಯದರ್ಶಿ ಕಾ. ಜಿ.ವಿ.ಶ್ರೀರಾಮರೆಡ್ಡಿರವರು ಮಾತನಾಡಿ "ಮುಖ್ಯವಾಗಿ ಇಂದು ನವ ಉದಾರೀಕರಣ ಮತ್ತು ಕೋಮುವಾದ ಆಕ್ರಮಣಕಾರಿಯಾಗಿ ಒಂದಕ್ಕೊಂದು ಪೂರಕವಾಗಿ ಕೆಲಸ ಮಾಡುತ್ತಿದೆ. ರಾಜ್ಯದಲ್ಲಿ ಕಾಂಗ್ರೆಸ್ ಅಧಿಕಾರ ಹಿಡಿದ ನಂತದಲ್ಲಿ ಆಗುತ್ತಿರುವ ಕೋಮು ಭಾವನೆಗಳ ಬೆಳವಣಿಗೆ ಬಗ್ಗೆ ಗಮನಿಸಬಹುದು. ನಮ್ಮ ಈ ಸಭೆ 'ಆಕ್ರಮಣಕಾರಿ ಕೋಮುವಾದ'ದ ವಿರುದ್ಧ ಎಂದು ಇದ್ದು, ಪೊಲೀಸರು ಹೆಚ್ಚಿನ ಸಂಖ್ಯೆಯಲ್ಲಿ ಭದ್ರತೆಗೆ ಬಂದಿದ್ದಾರೆ. ಅವರು ಕೋಮುವಾದದ ಬದಲು ನಾವು 'ಆಕ್ರಮಣಕಾರಿ' ಎಂದು ಭಾವಿಸಿದಂತಿದೆ. ಇದು ಕೋಮುವಾದದ ಬಗ್ಗೆ ಕಾಂಗ್ರೆಸ್ ಸರಕಾರದ ಧೋರಣೆಯ ಪ್ರತಿಬಿಂಬ ಇದ್ದಂತಿದೆ" ಎಂದರು.

"ರಾಜ್ಯದ ಕಾಂಗ್ರೆಸ್ ಸರ್ಕಾರ ಕೋಮುವಾದವನ್ನು ನಿರ್ಣಾಯಕವಾಗಿ ಎದುರಿಸಲು ಮುಂದಾಗುತ್ತಿಲ್ಲ. ಆಡಳಿತ ಯಂತ್ರ ಕೈಯಲ್ಲಿದ್ದರೂ ಸಹ ಕೋಮುವಾದ ಹರಡುವಿಕೆ ಹೆಚ್ಚಾಗುತ್ತಲೇ ಇದೆ. ಕಾಂಗ್ರೆಸ್ ಸರ್ಕಾರ ಕೋಮುವಾದ ವಿಚಾರದಲ್ಲಿ ಒಂದೇ ಒಂದು ಕಠಿಣ ಕ್ರಮ ಕೈಗೊಂಡಿಲ್ಲ. ಕರಾವಳಿ, ತುಮಕೂರು, ಬೆಂಗಳೂರು ಇತ್ಯಾದಿ ಕಡೆ ನಡೆದ ಘಟನೆಗಳ ಬಗ್ಗೆ ಸರಕಾರದ ಧೋರಣೆಗಳಿಂದ ಇದನ್ನು ತಿಳಿಯಬಹುದು. ತುಮಕೂರು ವಿದ್ಯಾರ್ಥಿ ಬಂಧನ ಖಂಡಿಸಿ ಮತ್ತು ಕರಾವಳಿಯ ಪ್ರಬಾಕರ್ ಭಟ್ ಬಂಧನ ಆಗಬೇಕೆಂದು ಎರಡು ಬಾರಿ ಮುಖ್ಯಮಂತ್ರಿ ಸಿದ್ಧರಾಮಯ್ಯನವರನ್ನು ಭೇಟಿ ಮಾಡಿ, ಮಾತನಾಡಿದರು. ಯಾವುದೇ ಪ್ರಯೋಜನ ಆಗಲಿಲ್ಲ." ಎಂದು ಕಾ. ಜಿ.ವಿ.ಎಸ್. ಟೀಕಿಸಿದರು.

"ರಾಜ್ಯದಲ್ಲಿ ಬಿಜೆಪಿ ಈಗಾಗಲೇ ಅಧಿಕಾರದ ಗುಂಗಿನಲ್ಲಿದೆ. ಕೇಂದ್ರದ ಬಿಜೆಪಿ ಸರ್ಕಾರ ಸಂವಿಧಾನದ ಆಶಯಗಳನ್ನು ಬುಡಮೇಲು ಮಾಡಲು ಹೊರಟಿದೆ. ಆರ್.ಎಸ್.ಎಸ್. ಅಣತಿಯಂತೆ ಸಂವಿಧಾನದ ಪೀಠಿಕೆಯಲ್ಲಿರುವ ಮೂಲಭೂತ ಆಶಯಗಳನ್ನು ತೆಗೆದು ಹಾಕಲು ಪ್ರಯತ್ನಿಸುತ್ತಿದೆ. ನಾವೆಲ್ಲಾ ಒಟ್ಟುಗೂಡಿ ಹೋರಾಟ ನಡೆಸಬೇಕು. ಸಕಾರಾತ್ಮಕವಾಗಿ ಆಲೋಚಿಸಬೇಕಿದೆ. ಇಂದಿನ ಸಮಾವೇಶ ಉದ್ಘಾಟನಾ ಸಮಾವೇಶವಾಗಿದ್ದು ಡಿಸೆಂಬರ್ ಕೊನೆ ವಾರದ ಹೊತ್ತಿಗೆ ಎಲ್ಲಾ ಜಿಲ್ಲಾ ತಾಲ್ಲೂಕು ಸಮಾವೇಶಗಳನ್ನು ಸಂಘಟಿಸಿ ಕೋಮುವಾದದ ವಿರುದ್ಧ ಪ್ರಬಲವಾದ ಸಂಘಟಿತ ಜಂಟಿ ಹೋರಾಟಕ್ಕೆ ಮುಂದಾಗಲು ತೀರ್ಮಾನಿಸಲಾಗಿದೆ." ಎಂದು ವಿವರಿಸಿದರು.

ಪ್ರಬಲ ಸಾಂಸ್ಕೃತಿಕ ಚಳುವಳಿ ರೂಪಿಸಬೇಕು

ಸಿಪಿಐ ಪಕ್ಷದ ರಾಜ್ಯ ಕಾರ್ಯದರ್ಶಿ ಕಾ. ಪಿ.ವಿ.ಲೋಕೇಶ್ ರವರು ಮಾತನಾಡಿ "ಕೋಮುವಾದಕ್ಕೆ ಬಲಿಯಾಗಿರುವ ಜನರನ್ನೇ ನಮ್ಮ ವಿರುದ್ಧ ಬಳಸಲಾಗುತ್ತಿದೆ. ನಾವು ಕೆಲಸ ಮಾಡುವ ಕಡೆಗಳಲ್ಲಿ ಕೋಮುವಾದದ ಬಗ್ಗೆ ತಿಳಿಸಬೇಕು. ಗಂಭೀರವಾಗಿರುವ ಬರ ಪರಿಸ್ಥಿತಿ ಬಗ್ಗೆಯೂ ತಿಳಿಸಬೇಕು. ಜನತೆಯಲ್ಲಿ ವರ್ಗ ಜಾಗೃತಿಯನ್ನು ಮೂಡಿಸಬೇಕು. ಕೋಮುವಾದದ ವಿರುದ್ಧ ಹೋರಾಟದಲ್ಲಿ ಜನತೆಯ ಸಮಸ್ಯೆಗಳನ್ನು ತೆಗೆದುಕೊಂಡು ಸಂಘಟಿಸಬೇಕಿದೆ. ಯಶಸ್ವಿ ಸೆ.2 ಮಹಾ ಮುಷ್ಕರ ಮತಯಿತರ ದುಡಿಯುವ ಜನರ ಬೇಡಿಕೆಗಳಿಗೆ ನಿರಂತರವಾಗಿ ಹೋರಾಡುತ್ತಿರುವ ಎಡಪಕ್ಷಗಳ ವಿರುದ್ಧ ಬಲಪಂಥಿಯ ಬುದ್ಧಿಜೀವಿಗಳು, ಮತ್ತು ಆಳುವ ವರ್ಗ ನಿರಂತರವಾದ ಅಪಪ್ರಚಾರವನ್ನು ಕೈಗೊಂಡಿದೆ. ಕೋಮುವಾದದ ವಿರುದ್ಧ ದುಡಿಯುವ ಜನರ ನಡುವೆ ಐಕ್ಯ ಚಳುವಳಿಗೆ ಎಡಪಕ್ಷಗಳು ಮುಂದಾಗಬೇಕು" ಎಂದು ಕರೆ ನೀಡಿದರು.

ಎಸ್.ಯು.ಸಿ.ಐ.(ಸಿ) ಪಕ್ಷದ ರಾಜ್ಯ ಕಾರ್ಯದರ್ಶಿ ಕಾ. |ಕೆ. ರಾಧಾಕೃಷ್ಣ ಮಾತನಾಡಿ "ನೋಟಿನ ಸಮಸ್ಯೆ ಇಂದು ದೇಶದಲ್ಲಿ ಬಹುದೊಡ್ಡ ಸಮಸ್ಯೆಯಾಗಿ ಪರಿಣಮಿಸಿದೆ. ನೋಟು ಬದಲಾವಣೆಯಿಂದ ಕಪ್ಪು ಹಣ, ಭ್ರಷ್ಟಾಚಾರ ತೊಡೆದುಹಾಕಲು ಸಾಧ್ಯವಿಲ್ಲ. ಇದು ಸ್ವಪ್ರಚಾರದ ಗೀಳಿನ ಕ್ರಮವಾಗಿದೆ. ಬ್ರಿಟಿಷರ ವಿರುದ್ಧ ಹೋರಾಡದವರು ಇಂದು ದೇಶವನ್ನು ಆಳುತ್ತಿದ್ದಾರೆ. ಕೋಮುವಾದದ ವಿರುದ್ಯ ಪ್ರಬಲ ಸಾಂಸ್ಕೃತಿಕ ಚಳುವಳಿ ರೂಪಿಸಬೇಕಿದೆ ಎಂದು ತಿಳಿಸಿದರು.

ಸಿಪಿಐ(ಎಂಎಲ್) ಪಕ್ಷದ ಮುಖಂಡರಾದ ಕಾ. |ಮಾರುತಿ ರವರು ಮಾತನಾಡಿ "ಆರ್.ಎಸ್.ಎಸ್.ನವರು ಭಾರತ ಮಾತಾಕಿ ಜೈ ಘೋಷಣೆ ಇಟ್ಟುಕೊಂಡು ಹಲವೆಡೆ ಆತಂಕ ಹುಟ್ಟಿಸುತ್ತಿದ್ದಾರೆ. ರಾಮದೇವ್ ಒಮ್ಮೆ ಕಾನೂನು ಇಲ್ಲದಿದ್ದರೆ ಘೋಷಣೆ ಕೂಗದವರ ತಲೆ ಚೆಂಡಾಡುವೆ ಎಂದು ಬಹಿರಂಗವಾಗಿಯೇ ಹೇಳಿಕೆ ನೀಡುತ್ತಾರೆ. ಸಂವಿಧಾನವನ್ನು ರಕ್ಷಣೆ ಮಾಡುವ ಕೇಂದ್ರಗಳು ಇಂದು ಕೋಮುವಾದೀಕರಣಗೊಂಡಿದೆ. ಯಡಿಯೂರಪ್ಪ ಕಾಲದಲ್ಲಿ ದಾಖಲಾದ ಕೋಮುವಾದಿ ಪ್ರಕರಣಗಳನ್ನು

ಪುಟ 11 ಕ್ಕೆ



ನ.10-11: ದೆಹಲಿಯಲ್ಲಿ ಬಿಸಿಯೂಟ ನೌಕರರ ಪಡಾವ್



ನವದೆಹಲಿಯ ಪ್ರತಿಭಟನೆಗಳ ತಾಣವಾದ ಜಂತರ್ ಮಂತರ್‌ನಲ್ಲಿ 12ರ ಬೆಳಗಿನ ಜಾವ. ಎಣ್ಣೆ ಕಾಣದ ಕೂದಲಿನ, ಕಪ್ಪು ಬಿಳಿ ಬಣ್ಣದ ಮಾಸಿದ ಕೂದಲುಗಳ, ಕಪ್ಪು ಬಣ್ಣ ಚರ್ಮದ ಮುಖಗಳು, ಕಣ್ಣರಳಿಸಿ, ಚಳಿಯನ್ನು ಮರೆಯಲು ಮೈಯೆಲ್ಲ ಮುದುಡಿ ಕುಳಿತಿರುವ ದೃಶ್ಯಗಳು, ಬೀಡಿ ಹಚ್ಚಿಕೊಂಡು, ಅರೆಬರೆ ಕಂಬಳಿ ಅಥವಾ ಉಲ್ಲನ್ ಹೆಸರಿನ ಉಲ್ಲನ್ ಅಲ್ಲದ ಸ್ವೆಟರ್‌ಗಳನ್ನು ಹಾಕಿ ಕೊಂಡಿರುವವರು ಒಂದು ಗುಂಪು, ಬೆಳಗಿನ ಮಲಮೂತ್ರ ವಿಸರ್ಜನೆಗೆಂದು ಕುಡಿಯುವ ನೀರಿನ ಬಾಟಲಿಗಳಲ್ಲಿ ನೀರು ತುಂಬಿಸಿಕೊಂಡು ಮರಗಳು, ಕೆಟ್ಟು ನಿಂತಿರುವ ಲಾರಿ, ಬಸ್ಸು, ಕಾರುಗಳ ಸಂದಿಯನ್ನು ಹುಡುಕುವವರು, ಗುರುದ್ವಾರಗಳಲ್ಲಿ, ದೆಹಲಿಯ ರೈಲ್ವೆ ನಿಲ್ದಾಣಗಳಲ್ಲಿ ಗುಂಪು ಗುಂಪಾಗಿದ್ದವರು ಇನ್ನೊಂದು ಗುಂಪು. ಇನ್ನು ಕೆಲವರು ಬಣ್ಣ ಬಣ್ಣದ ಸೀರೆಗಳು, ಚೂಡಿದಾರಗಳನ್ನು ಹಾಕಿಕೊಂಡು, ತಲೆಯ ಮೇಲೆ ಬ್ಯಾಗುಗಳನ್ನು ಎತ್ತಿ-ಕೊಂಡು ಬರುತ್ತಿದ್ದರು. ಇವರು ಯಾರು? ಇವರೇ ಬಿಸಿಯೂಟ ಮಹಿಳೆಯರು.

ಈ ಮಹಿಳೆಯರಿಗೆ ಕೇಂದ್ರ ಸರ್ಕಾರ ಕೊಡುತ್ತಿರುವುದು ಕೇವಲ ರೂ.600 ಗಳು ಮಾತ್ರ. ದೇಶದ ಸಂವಿಧಾನ ಘನತೆಯ ಬದುಕನ್ನು ಪ್ರಭುತ್ವ ಒದಗಿಸಿಕೊಡಬೇಕೆಂದೂ ಬೋಧಿಸುತ್ತದೆ. "ದೇಶಕ್ಕಾಗಿ ಮನೆ, ಬದುಕನ್ನು ತೊರೆದಿದ್ದೇನೆ" ಎನ್ನುವ ನಮ್ಮ ಪ್ರಧಾನಿಗಳಿಗೆ 26 ಲಕ್ಷ ಮಹಿಳೆಯರನ್ನು ತಿಂಗಳಿಗೆ 600 ರೂ.ಗಳಿಗೆ ದುಡಿಸುತ್ತಿರುವುದು ಗೊತ್ತಾಗುತ್ತಲೇ ಇಲ್ಲ. ಭಾರತೀಯ ಕಾರ್ಮಿಕ ಸಮ್ಮೇಳನ 2012ರಲ್ಲಿ ಈ ಮಹಿಳೆಯರನ್ನು ಕಾರ್ಮಿಕರೆಂದೂ ಪರಿಗಣಿಸಬೇಕೆಂಬ ಶಿಫಾರಸ್ಸಿದೆ. ಸುಪ್ರೀಂ ಕೋರ್ಟ್ ಸಮಾನ ಕೆಲಸಕ್ಕೆ ಸಮಾನ ವೇತನವನ್ನು ಎತ್ತಿ ಹಿಡಿದಿದೆ. ಉದ್ಯೋಗ ಖಾತ್ರಿ ಯೋಜನೆಯಲ್ಲಿ ದುಡಿಯುವವರಿಗೆ ದಿನಕ್ಕೆ ರೂ.272 ಕೊಡುವುದಾದರೆ 6 ಗಂಟೆ ಕೆಲಸ ಮಾಡುವ ಇವರಿಗೆ ದಿನಕ್ಕೆ ರೂ.200ಗಳನ್ನು ಕೊಡದಿದ್ದರೆ ದುಡಿದು ಬದುಕುವುದಾದರೂ ಹೇಗೇ?

ಆದ್ದರಿಂದ ಸಿಐಟಿಯು ನೇತೃತ್ವದಲ್ಲಿ MDMFI (Miday Meal Workers Federation of India) ದೇಶದಾದ್ಯಂತ ಅತ್ಯಂತ ಕೆಳಸ್ಥರದಲ್ಲಿರುವ ಈ ಮಹಿಳೆಯರನ್ನು ನಿರಂತರವಾಗಿ ಎಲ್ಲಾ ರಾಜ್ಯಗಳಲ್ಲಿಯೂ ಹೋರಾಟ ನಡೆಸುತ್ತಿದೆ. ಎಲ್ಲರ ಪ್ರಗತಿಗಾಗಿ ಅಂತ ಹೇಳುವ ಸರ್ಕಾರ 2010ರಿಂದ ಈ ಮಹಿಳೆಯರಿಗೆ ಯಾವುದೇ ರೀತಿಯ ಸಂಭಾವನೆಯನ್ನು ಹೆಚ್ಚಿಸಿಲ್ಲ. ಮತ್ತು ಬೇರೆ ಯಾವ ಸವಲತ್ತುಗಳನ್ನು ಕೂಡಾ ಕೊಡಲಿಲ್ಲವಾದ್ದರಿಂದ ನವೆಂಬರ್ 10-11ರಂದು 2 ದಿನಗಳ ಕಾಲ ಜಂಥರ್ ಮಂತರ್‌ನಲ್ಲಿ ಪಡಾವ್‌ನ್ನು ಹಮ್ಮಿಕೊಳ್ಳಲಾಗಿತ್ತು.

ಈ ಪಡಾವ್‌ನ ಉದ್ಘಾಟನೆಯನ್ನು ಸಿಐಟಿಯು ಅಖಿಲ ಭಾರತ ಅಧ್ಯಕ್ಷರಾದ ಕಾಂ.ಎ.ಕೆ.ಪದ್ಮನಾಭನ್‌ರವರು ಮಾಡಿದರು. ಹೋರಾಟದ ಸ್ಥಳಕ್ಕೆ ಸಿಪಿಐ(ಎಂ) ಶಾಸಕಾಂಗ ಮುಖಂಡರಾದ ಕಾಂ.ಕರುಣಾಕರನ್ ಮತ್ತು ಕೇರಳ ಎಂ.ಪಿಯಾದ ಕಾಂ.ಪಿ.ಸಂಪತ್ತುರವರು ಬಂದು ಭಾಗವಹಿಸಿ ಮುಂದಿನ ಪಾರ್ಲಿಮೆಂಟ್ ಅಧಿವೇಶನದಲ್ಲಿ ಈ ಮಹಿಳೆಯರ ಪ್ರಶ್ನೆಯನ್ನು ಎತ್ತುವುದಾಗಿ ಆಶ್ವಾಸನೆ ಕೊಟ್ಟರು.

ಹೋರಾಟದ ಸ್ಥಳಕ್ಕೆ ಸರ್ಕಾರದ ಪ್ರತಿನಿಧಿಗಳು ಯಾರು ಬರದಿರುವುದನ್ನು ಖಂಡಿಸಿ ಪಾರ್ಲಿಮೆಂಟ್‌ಗೆ ನುಗ್ಗಲು ತೀರ್ಮಾನಿಸಿದಾಗ ಪೋಲೀಸ್‌ನವರು ಹೆಚ್.ಆರ್.ಡಿ.ಯ ಪ್ರಧಾನ ಕಾರ್ಯದರ್ಶಿಯೊಂದಿಗೆ ಸಂಘಟನೆಯ ನಿಯೋಗವನ್ನು ಬೇಟಿ ಮಾಡಿಸಿದರು.

ಈ ಹೋರಾಟದಲ್ಲಿ ಕರ್ನಾಟಕ, ಕೇರಳ, ಬಿಹಾರ, ಮಹಾರಾಷ್ಟ್ರ, ಛತ್ತೀಸ್‌ಘಡ, ಉತ್ತರಪ್ರದೇಶ, ಹಿಮಾಚಲ ಪ್ರದೇಶ, ತೆಲಂಗಾಣ, ಪಂಜಾಬ್, ಹರಿಯಾಣ, ಉತ್ತರಖಂಡ್, ತ್ರಿಪುರಾ, ಮಧ್ಯಪ್ರದೇಶಗಳಿಂದ ಸಾವಿರಾರು ಸಂಖ್ಯೆಯಲ್ಲಿ ಬಿಸಿಯೂಟ ನೌಕರರು ಪಾಲ್ಗೊಂಡಿದ್ದರು. ಹೋರಾಟದಲ್ಲಿ MDMFI ನ ಪ್ರಧಾನ ಕಾರ್ಯದರ್ಶಿ ಕಾಂ. ಜೈ ಭಗವಾನ್, ಅಧ್ಯಕ್ಷರಾದ ಕಾಂ.ಎಸ್.ವರಲಕ್ಷ್ಮಿ, ಸಿಐಟಿಯುವಿನ ಕಾಂ. ರಂಜನಾ ನಿರುಲ್ಲ, ಕಾಂ.ಎ.ಆರ್.ಸಿಂಧು ಮತ್ತು ಅಂಗನವಾಡಿ ನೌಕರರ ಸಂಘಟನೆಯ ಕಾಂ. ಉಷಾರಾಣಿ ಪಾಲ್ಗೊಂಡಿದ್ದರು. MDMFI ನ ಎಲ್ಲಾ ರಾಜ್ಯ ಮುಖಂಡರು ಮಾತನಾಡಿದರು.

ಯಾರಿವರು ಬಿಸಿಯೂಟದ ಮಹಿಳೆಯರು?

ಈ ಮಹಿಳೆಯರು ಸಾಮಾಜಿಕವಾಗಿ, ಆರ್ಥಿಕವಾಗಿ ತುಂಬಾ ಹಿಂದುಳಿದಿರುವವರು. ಇವರು ಸಾಮಾನ್ಯ ಅಪೌಷ್ಠಿಕತೆಯನ್ನು ಅನುಭವಿಸುತ್ತಿದ್ರೂ ಇವರನ್ನು ಕೆಲಸದಲ್ಲಿ ಸರಿಗಟ್ಟಲು ಯಾರಿಗೂ ಸಾಧ್ಯವಿಲ್ಲ. ಹೆಚ್ಚು ಕಡಿಮೆ ಮದುವೆಯಾಗಿ ಮಕ್ಕಳಿರುವವರು, ವಿಧವೆಯರು, ಪರಿತ್ಯಕ್ತೆಯರು, ಒಂಟಿ ಮಹಿಳೆಯರು, ಅತ್ಯಂತ ಹಿಂದುಳಿದ ವರ್ಗಗಳಿಗೆ ಸೇರಿದ ಮಹಿಳೆಯರು ಇಂದು ಭಾರತ ದೇಶದ 12 ಕೋಟಿ ಮಕ್ಕಳಿಗೆ ಪ್ರತಿ ನಿತ್ಯ ಸರ್ಕಾರಿ ಶಾಲೆಗಳಲ್ಲಿ ಬಿಸಿಯೂಟವನ್ನು ತಯಾರು ಮಾಡಿ ಬಡಿಸುವುದು, ಸ್ವಚ್ಛ ಮಾಡುವುದು, ಎಲ್ಲಾ ಜಾತಿಯ ಮತ್ತು ಎಲ್ಲಾ ಧರ್ಮದ ಮಕ್ಕಳನ್ನು ಒಂದೇ ಸಾಲಿನಲ್ಲಿ ಕುಳ್ಳರಿಸಿ ಸಮಾನತೆಯ ಬೋಧನೆಯನ್ನು ಮಾಡುವ ತಾಯಂದಿರು ಈ ಬಿಸಿಯೂಟ ನೌಕರರು.

ಇವರು ಪ್ರತಿನಿತ್ಯ ಬೆಳಿಗ್ಗೆ 5 ಗಂಟೆಗೆ ಎದ್ದು ಮನೆಯಲ್ಲಿ ಅಡುಗೆ ಮಾಡಿ, ಗಂಡ ಮಕ್ಕಳ, ಅತ್ತೆ ಮಾವ, ತಾಯಿ ತಂದೆಯ ಎಲ್ಲ ಅಗತ್ಯಗಳನ್ನು ಪೂರೈಸಿ 9 ಗಂಟೆಗೆ ಶಾಲೆಗಳಲ್ಲಿ ಹಾಜರಿ ಇರಬೇಕು. ಶಾಲೆಯಲ್ಲಿ ಮಕ್ಕಳು ಪ್ರಾರ್ಥನೆ ಮುಗಿಸಿ ಬರುವಷ್ಟರಲ್ಲಿ ಬಿಸಿ ಹಾಲನ್ನು ಕಾಯಿಸಿ ಮಕ್ಕಳಿಗೆ ಕೊಡಬೇಕು. ಮದ್ಯಾಹ್ನ 1.30 ಗಂಟೆಗೆ ಸರಿಯಾಗಿ ಊಟ ಬಡಿಸಬೇಕು. ಶಾಲಾ ಮಾಸ್ತರುಗಳಿಗೆ (School Development Monitoring Committee) ಎಸ್.ಡಿ.ಎಂ.ಸಿ ಸಭೆಗಳಿಗೆ, ಸರ್ಕಾರ ಆಚರಣೆ ಮಾಡುವ ಎಲ್ಲಾ ರಾಷ್ಟ್ರೀಯ ದಿನಾಚರಣೆಗಳು, ಜಯಂತಿಗಳು, ಚುನಾವಣೆಗಳು, ಗ್ರಾಮದಲ್ಲಿ ನಡೆಯುವ ಸರ್ಕಾರಿ ಕಾರ್ಯಕ್ರಮಗಳು, ಶಾಲೆಗಳಲ್ಲಿ ನಡೆಯುವ ಕ್ರೀಡಾ ಚಟುವಟಿಕೆಗಳು, ಅವರಿಗೂ ಅಡುಗೆಯನ್ನು ಮಾಡಬೇಕು. ಕೆಲವೆಡೆ ಶೌಚಾಲಯಗಳನ್ನು, ಶಾಲೆಯ ಆವರಣವನ್ನು, ಶಾಲೆಗಳಲ್ಲಿ ಡಿ ಗ್ರೂಪ್ ನೌಕರರು ಇಲ್ಲದ್ದರಿಂದ ಅವರ ಕೆಲಸಗಳನ್ನು ಇವರೇ ಮಾಡಬೇಕು.

ಶಾಲೆಗಳಲ್ಲಿ ಮೂಲಭೂತ ಸೌಕರ್ಯಗಳು ಕಡಿಮೆ ಇರುವ ಕಾರಣಕ್ಕಾಗಿ 1-2 ಕಿ.ಮೀ.ನಿಂದ ನೀರನ್ನು ಹೊತ್ತು ತರಬೇಕು. ಉದಾಹರಣೆಗೆ 25 ಮಕ್ಕಳಿಗೆ ಒಬ್ಬರು ಅಡುಗೆಯವರು, 26ರಿಂದ 60ರ ತನಕ ಇಬ್ಬರು, 60ರ ಮೇಲೆ, ಕೆಲವೆಡೆ 100ರ ಮೇಲೆ 3 ಜನ ಹೀಗೆ ಇರುತ್ತಾರೆ. ಬಹುತೇಕ ಗ್ರಾಮಾಂತರ ಮತ್ತು ಗುಡ್ಡಗಾಡು ಪ್ರದೇಶಗಳಲ್ಲಿ ಒಬ್ಬರೇ ಅಡುಗೆಯವರು ಇರುತ್ತಾರೆ. 25 ಮಕ್ಕಳಿಗೆ ಅಡುಗೆ ಬೇಯಿಸಲು, ಸ್ವಚ್ಛ ಮಾಡಲು ಕನಿಷ್ಟ 5-6 ಬಿಂದಿಗೆ ನೀರು ಬೇಕೇ ಬೇಕು. 6 ಬಿಂದಿಗೆ ನೀರು ಎಂದರೆ ಒಂದು ಬಾರಿ 2 ಬಿಂದಿಗೆ ಅಂದರೂ 3 ಬಾರಿ ನೀರು ತರಬೇಕು. ಅಂದರೆ ಕನಿಷ್ಠ 5-6 ಕಿ.ಮೀ ನೀರಿಗಾಗಿ ದಿನಕ್ಕೆ ನಡೆಯಬೇಕು. ನಂತರ ಶಾಲಾ ಮಾಸ್ತರು ಕೊಡುವ ಲೆಕ್ಕದ ಪ್ರಕಾರ ಅಕ್ಕಿ-ಬೇಳೆ, ಅರೆ-ಬರೆ ತರಕಾರಿಯಿಂದ ಅಡುಗೆ ಮಾಡಿ, ಮಕ್ಕಳಿಗೆ ಬಡಿಸಿ, ಸ್ವಚ್ಛ ಮಾಡುವ ಹೊತ್ತಿಗೆ 2.30 ಯಿಂದ 3 ಗಂಟೆ. ಅಂದರೆ ದಿನಕ್ಕೆ 6 ರಿಂದ 6.30 ಗಂಟೆ ಕೆಲಸ ಮಾಡಿದರೂ ಸರ್ಕಾರ ಹೇಳುವುದು ಕೇವಲ 4.30 ಗಂಟೆ ಮಾತ್ರ ಎಂದು. ಇನ್ನು ಶಾಲೆಗಳಲ್ಲಿ ಅನ್ನ ಹೆಚ್ಚು ಬೆಂದರೆ, ಸಾರು ರುಚಿ ಬರಲಿಲ್ಲವೆಂದರೇ, ಆಹಾರ ಸಾಮಗ್ರಿಗಳ ಗುಣಮಟ್ಟವನ್ನು ಪರಿಶೀಲಿಸುವ ಬದಲಿಗೆ ಅಡುಗೆಯವಳು ಸರಿಯಿಲ್ಲ ಎನ್ನುತ್ತಾರೆ. ಸ್ವಲ್ಪ ತಡವಾಗಿ ಹೋಗಬಾರದು. ಕುಟುಂಬದವರಿಗೆ ಏನಾದರೂ ಸಮಸ್ಯೆಯಾಗಿ ಬೇಗ ಹೋಗಬೇಕೆಂದರೂ ಬಿಡುವುದಿಲ್ಲ. ಪಂಚಾಯಿತಿ ಸದಸ್ಯರು, ಎಸ್‌ಡಿಎಂಸಿ ಸಮಿತಿಯವರು, ಶಾಲಾ ಮಾಸ್ತರುಗಳೇ ಇವರ ಮೊದಲ ಸರ್ಕಾರ. ಇವರು ಯಾರು ಬಂದು ಏನೂ ಪ್ರಶ್ನೆ ಕೇಳಿದರೂ ನಮ್ರತೆಯಿಂದ ಉತ್ತರ ಕೊಡಬೇಕು. ಧ್ವನಿಯೇರಿಸಿ ಏನಾದರೂ ಉತ್ತರ ಕೊಟ್ಟರೆ ಮಾರನೇ ದಿನ ಕೆಲಸವಿಲ್ಲ!

ಬಿಸಿಯೂಟ ನೌಕರರ ಪರಿಸ್ಥಿತಿ

25 ರಿಂದ 500 ಮಕ್ಕಳ ತನಕ ಅಡುಗೆಯನ್ನು ಮಾಡಬೇಕಾಗುತ್ತದೆ. ಇಂತಹ ಸಂದರ್ಭದಲ್ಲಿ ಗಂಜಿ ಬಸಿಯುವಾಗ, ಅನ್ನ ಸಾರಿನ ಪಾತ್ರೆಯನ್ನು ಒಲೆಯಿಂದ ಕೆಳಗಿಳಿಸುವಾಗ, ಕುಕ್ಕರ್ ಅಥವಾ ಗ್ಯಾಸ್ ಸ್ಟೌವ್ ಸಿಡಿದು ಸಾವಿರಾರು ಮಹಿಳೆಯರಿಗೆ ಮುಂಗೈ, ಕಾಲು, ತೊಡೆ, ಎದೆಯ ಭಾಗಗಳು ಸುಟ್ಟು ಹೋಗಿವೆ. ಕರ್ನಾಟಕದಲ್ಲಿ 150 ಜನರಿಗಿಂತ ಹೆಚ್ಚು ಜನರಿಗೆ ಈ ರೀತಿಯ ಗಾಯಗಳಾಗಿವೆ. 2-3 ಜನ ಸಾವನ್ನಪ್ಪಿದ್ದಾರೆ.

ಮದುವೆಯಾಗದ, ಯೌವನಾವಸ್ಥೆಯಲ್ಲಿರುವ ಮಹಿಳೆಯರ ಎದೆಯ ಭಾಗಗಳು, ಮುಂಗೈಗಳು ಸುಟ್ಟರೆ ಅವರ ದಿನನಿತ್ಯದ ದಾಂಪತ್ಯದ ಜೀವನದ ಮೇಲೂ ತೊಂದರೆಯಾಗುತ್ತದೆ.

ಕೇಂದ್ರ ಸರ್ಕಾರದಿಂದ ಈ ಮಹಿಳೆಯರಿಗೆ ಮೆಡಿಕಲ್ ಚೆಕ್‌ಅಪ್ ಮಾಡುತ್ತೇವೆಂದು ಪ್ರಾರಂಭ ಮಾಡಿದರು. ನಾವು ಕೂಡಾ ಇದನ್ನು ಬೆಂಬಲಿಸಿದೆವು. ಆದರೆ ಮೆಡಿಕಲ್ ಚೆಕ್ ಅಪ್‌ನ ಹೆಸರಿನಲ್ಲಿ ಕೆಲವರಿಗೆ ಏಡ್ಸ್ ಇರುವುದನ್ನು ಗುರುತಿಸಿ, ಏಡ್ಸ್ ಇದೆ ಎಂದು ಹೇಳಿ ಕರ್ನಾಟಕ ರಾಜ್ಯದ ಬೆಳಗಾಂ ಜಿಲ್ಲೆಯ ಬೈಲಹೊಂಗಲ ತಾಲೂಕಿನ ಒಕ್ಕಂದ ಶಾಲೆಯ ಬಿಸಿಯೂಟದವರ ಖಾಯಿಲೆಯನ್ನು ಬಹಿರಂಗ ಪಡಿಸಿದರು. ಇದರ ಪರಿಣಾಮ ಆಕೆಯ ಕುಟುಂಬದವರಿಗೆ, ಊರಿನವರಿಗೆ ಗೊತ್ತಾಗಿ ಅವರಿಂದ ಅಡುಗೆ ಕೆಲಸವನ್ನು ನಿಲ್ಲಿಸಿ ಶಾಲೆಯಿಂದ ಹೊರಗೆ ಕುಳ್ಳಿರಿಸಿದರು.

ಹಾವು ಕಚ್ಚಿ ಅಥವಾ ಇತರ ಸೋಂಕು ರೋಗಗಳಿದ್ದರೆ ಅಂತಹವರಿಂದಲೂ ಅಡುಗೆ ಮಾಡಿಸುವುದಿಲ್ಲವೆಂದೂ, ಕೆಲಸದಿಂದ ತೆಗೆಯುವ ಪ್ರಯತ್ನ. ಮೆಡಿಕಲ್ ಚೆಕ್‌ಅಪ್ ಅವರ ರೋಗಗಳನ್ನು ವಾಸಿ ಮಾಡುವ ಬದಲಿಗೆ ಕೆಲಸದಿಂದ ತೆಗೆಯಲು ಉಪಯೋಗಿಸಿದರು.

ದಲಿತರ ಜಾತಿಗೆ ಸೇರಿದ ಮುಖ್ಯ ಅಡುಗೆಯವರಿದ್ದರೆ ಅವರಿಂದ ಅಡುಗೆ ಮಾಡಿಸದೇ ಬೇರೆ ಕೆಲಸಗಳನ್ನು ಮಾಡಿಸುವುದು ಹಲವೆಡೆ ಇದೆ. ಮಕ್ಕಳ ಹಾಜರಾತಿ ಕಡಿಮೆಯಾದರೆ, ಅಡುಗೆ ಮಾಡುವಾಗ ಸ್ವಲ್ಪ ಸಮಸ್ಯೆಯಾದರೂ ಕೂಡಾ ಕೆಲಸದಿಂದ ತೆಗೆಯುವುದೇ ಪರಿಹಾರ.

ಬಿಸಿಯೂಟದ ಖಾಸಗೀಕರಣಕ್ಕೆ ಹುನ್ನಾರ

1920-25ರಲ್ಲಿ ಮಕ್ಕಳ ಶಿಕ್ಷಣಕ್ಕೆ ಒತ್ತು ಕೊಟ್ಟು ಮದ್ರಾಸ್ ಮುನಿಸಿಪಲ್ ಕಾರ್ಪೋರೇಷನ್ ತನ್ನ ವ್ಯಾಪ್ತಿಯೊಳಗೆ ಬರುವ ಮಕ್ಕಳಿಗೆ ಮಧ್ಯಾಹ್ನದ ಬಿಸಿಯೂಟ ಯೋಜನೆಯನ್ನು ಪ್ರಾರಂಭಿಸಿದರು. 1957ರಲ್ಲಿ ಕೇರಳದಲ್ಲಿ ಇಎಂಎಸ್ ನಂಬೂದರಿ ಸರ್ಕಾರವೂ ಉಪ್ಪಿಟ್ಟು, ಸಿಹಿ ಉಂಡೆ ಕೊಡಲು ಪ್ರಯತ್ನಿಸಿತ್ತು. 1980ರ ನಂತರ ಹಲವಾರು ಕೇರಳ, ಗುಜರಾತ್, ತಮಿಳುನಾಡು, ಪಾಂಡಿಚೆರಿಯಲ್ಲಿ ಪ್ರಾರಂಭವಾಗಿ 1990-91ರಲ್ಲಿ ಹಲವು ರಾಜ್ಯಗಳು ಬಿಸಿಯೂಟವನ್ನು ಬೇರೆ ಬೇರೆ ಸ್ವರೂಪಗಳಲ್ಲಿ ಕೊಡಲು ಪ್ರಾರಂಭಿಸಿದರು.

ಮಕ್ಕಳ ನೊಂದಣಿ ಮತ್ತು ನಿರಂತರ ಹಾಜರಾತಿ ವಿಷಯದಲ್ಲಿ ಅತ್ಯಂತ ಸಕಾರಾತ್ಮಕ ಪರಿಣಾಮ ಬೀರಿದ ಮಧ್ಯಾಹ್ನದ ಬಿಸಿಯೂಟ ಯೋಜನೆ ಕೂಡಿ ಬೆಳೆಯುವ, ಕಲಿಯುವ, ತಿನ್ನುವ ಸಮಾನತೆಯ ಅಂಶಗಳೊಟ್ಟಿಗೆ ಶಿಕ್ಷಣದಲ್ಲಿ ಲಿಂಗ ತಾರತಮ್ಯವನ್ನು ಕಡಿಮೆ ಮಾಡಲು ಕಾಣಿಕೆ ನೀಡಲು ಪ್ರಾರಂಭಿಸಿತು.

NP-NSPE (The National Programme for National Support to Primary Education) ಕೇಂದ್ರ ಸರ್ಕಾರ 1995, ಆಗಸ್ಟ್‌ರಲ್ಲಿ ಪ್ರಾರಂಭ ಮಾಡಿ ಭಾರತದ 2408 ಬ್ಲಾಕ್‌ಗಳಿಗೂ ಪ್ರಯೋಗ ಪ್ರಾರಂಭಿಸಲಾಯಿತು. ಆದರೆ ಇದಕ್ಕೆ ರಾಜ್ಯ ಸರ್ಕಾರಗಳೇ ಅನುದಾನಗಳನ್ನು ಭರಿಸಬೇಕಾಗಿತ್ತು. 2001ರಲ್ಲಿ ಮಾನ್ಯ ಸುಪ್ರೀಂ ಕೋರ್ಟ್ ತೀರ್ಪು ಕೊಟ್ಟ ನಂತರ ಈ ಯೋಜನೆಗೆ ಕೇಂದ್ರ ಸರ್ಕಾರವೇ ಕಡ್ಡಾಯವಾಗಿ ಅನುದಾನವನ್ನು ಕೊಡಲು ಪ್ರಾರಂಭಿಸಿತು.

2002-03ರ ನಂತರ ದೇಶದ ಎಲ್ಲಾ ರಾಜ್ಯಗಳಿಗೂ ಮಧ್ಯಾಹ್ನ ಬಿಸಿಯೂಟ ಯೋಜನೆಯನ್ನು ಜಾರಿ ಮಾಡಲಾಯಿತು. ಈ ಯೋಜನೆಯಲ್ಲಿ ಇಂದು 26 ಲಕ್ಷ ಮಹಿಳೆಯರು 12 ಕೋಟಿ ಮಕ್ಕಳಿಗೆ ಅಡುಗೆ ಮಾಡುತಿದ್ದಾರೆ. ಯೋಜನೆ ಪ್ರಾರಂಭದ ಎಲ್ಲಾ ರೀತಿಯ ಕಷ್ಟಗಳನ್ನು ಎದುರಿಸಿ ಮುಂದುವರಿಯುತ್ತಿದೆ. ಇಂದು ಸರ್ಕಾರ ಒಂದು ಮಗುವಿಗೆ 1 ನೇ ತರಗತಿಯಿಂದ 8ನೇ ತರಗತಿಯವರೆಗೆ 5.38 ಪೈಸೆ, ಪೌಢಶಾಲೆಗೆ 5.64 ಪೈಸೆಯಂತೆ ರೂ. 13,215 ಕೋಟಿಯನ್ನು ಕೇಂದ್ರ ಸರ್ಕಾರ ಖರ್ಚು ಮಾಡುತ್ತಿದೆ.

NCERT (National Council of Educational Research & Training) ನ ಅಧ್ಯಯನ ಮತ್ತು ಸರ್ವೆಗಳ ವರದಿ ಈ ಯೋಜನೆಯಿಂದ "ಮಕ್ಕಳ ಕಲಿಕಾ ಸಾಮಾರ್ಥ್ಯ, ಗ್ರಹಣಶಕ್ತಿ ವೃದ್ಧಿಯಾಗಿದ್ದು, ಶಾಲೆಯ ಆಟ-ಪಾಠಗಳಲ್ಲಿ ಲವಲವಿಕೆ ಮತ್ತು ಕ್ರಿಯಾ ಶೀಲತೆಯಿಂದ ಭಾಗವಹಿಸುವಿಕೆ ಹಿಂದೆಂದಿಗಿಂತ ಹೆಚ್ಚಿದೆ. ಅಷ್ಟೇ ಅಲ್ಲ ಶಾಲೆ ಬಿಡುವವರ ಪ್ರಮಾಣ ಕಡಿಮೆಯಾಗಿದೆ. ವಿಶೇಷವಾಗಿ ಹೆಣ್ಣು ಮಕ್ಕಳು ಮತ್ತು ಸಾಮಾಜಿಕವಾಗಿ ತುಳಿತಕ್ಕೊಳಗಾದ ವಿಭಾಗಗಳ ಮಕ್ಕಳ ಡ್ರಾಪ್‌ಔಟ್ ಕಡಿಮೆಯಾಗಿದೆ ಎಂಬ ವರದಿಯನ್ನು ಕೊಟ್ಟಿದೆ.

"ಶಿಕ್ಷಣ ನಮಗೊಂದು ಭವಿಷ್ಯ". "ಎಲ್ಲಾ ಸಮಾಜಗಳಲ್ಲಿ ವ್ಯಕ್ತಿ ಮತ್ತು ಆ ಮೂಲಕ ಸಮಾಜದ ಅಭಿವೃದ್ಧಿಯನ್ನು ಸಾಧ್ಯ ಮಾಡುವ ಸಂಘಟಿತ ಪ್ರಕ್ರಿಯೆ ಅಂದರೆ ಶಿಕ್ಷಣ ಮಾತ್ರ". ಇಂತಹ ವರದಿ ಸರ್ಕಾರದ ಮುಂದಿದೆ. ಆದರೆ ಸರ್ಕಾರ ಯೋಜನೆಯನ್ನು ಬಲಿಷ್ಟಗೊಳಿಸುವ ಬದಲಿಗೆ ಬಲಹೀನ ಮಾಡಲು 2015ರ ಬಜೆಟ್‌ನಲ್ಲಿ 33% ಅನುದಾನ ಕಡಿತ ಮಾಡಿದ್ದು ಮಾತ್ರವಲ್ಲದೆ NP-NSPE ಮಾರ್ಗದರ್ಶಿಯಲ್ಲಿ ಬಿಸಿಯೂಟವನ್ನು ಯಾವುದೇ ಧಾರ್ಮಿಕ ಮತ್ತು ಜಾತಿ ಸಂಘಟನೆಗಳಿಗೆ ಕೊಡಬಾರದೆಂಬ ಸ್ಪಷ್ಟ ಸಂದೇಶವಿದ್ದರೂ ಸರ್ಕಾರಗಳೇ ಅದನ್ನು ಉಲ್ಲಂಘಿಸಿ ಇಸ್ಕಾನ್, ಅದಮ್ಯ ಚೇತನ, ನಾಂದಿ ಫೌಂಡೇಶನ್, ಮಠಗಳಿಗೆ, ಸ್ತ್ರೀಶಕ್ತಿ, ... ನಂತಹ ಸ್ವ ಸಹಾಯ ಸಂಘಗಳಿಗೆ ಕೊಡುತ್ತಿದೆ.

ಕೇಂದ್ರೀಕೃತ ಅಡುಗೆ (ಸೆಂಟ್ರಲೈಸ್ಡ್ ಕಿಚನ್)ಗಳನ್ನು ಪ್ರಾರಂಭಿಸುತ್ತಿದೆ. ಇದರಿಂದ ಈಗಾಗಲೇ ಸರ್ಕಾರ ಅಡುಗೆ ಮನೆ ಮತ್ತು ಸಾಮಗ್ರಿಗಳ ಮೇಲೆ ಹೂಡಿರುವ ಕೋಟಿಗಟ್ಟಲೆ ಹಣ ಪೋಲಾಗಿದೆ. ಈ ಸಂಸ್ಥೆಗಳು ಕೂಡಾ ಸರ್ಕಾರದಿಂದ ಬರುವ ಹಣ ಪಡೆದು ಮಕ್ಕಳ ಹೆಸರಿನಲ್ಲಿ ಮತ್ತಷ್ಟು ಹಣ ಸಂಗ್ರಹ ಮಾಡಿ ರಾತ್ರಿಯೆಲ್ಲ ಅಡುಗೆ ಮಾಡಿ ಬೆಳಿಗ್ಗೆ 10 ಗಂಟೆಯಿಂದಲೇ ಶಾಲೆಗಳಿಗೆ ದೊಡ್ಡ ಡಬ್ಬಿಗಳಲ್ಲಿ ಕೊಡುತ್ತಾರೆ. ಮಕ್ಕಳು ಮಧ್ಯಾಹ್ನ ಊಟ ಮಾಡುವ ಹೊತ್ತಿಗೆ ಅದು ನೀರು ಬಿಟ್ಟು-ಕೊಂಡಿರುತ್ತದೆ ಅಥವಾ ಕೆಡುವ ಸ್ಥಿತಿಯಲ್ಲಿರುತ್ತದೆ.

ಸರ್ಕಾರದ ಎಲ್ಲಾ ನೀತಿಗಳಂತೆ ಸುಧಾರಣೆ-ಯ ಹೆಸರಿನ ಖಾಸಗೀಕರಣದ ಅಪಾಯ ಈ ಯೋಜನೆಯನ್ನೂ ಕಾಡುತ್ತಿದೆ. ●





ಸಮುದಾಯ 6ನೇ ರಾಜ್ಯ ಸಮ್ಮೇಳನ

70-80ರ ದಶಕ ಮರುಕಳಿಸುತ್ತಿದೆ : ಮಾಲಗತ್ತಿ

“70–80ರ ದಶಕ ಮರುಕಳಿಸುತ್ತಿದೆ. ದಲಿತರು ಮತ್ತು ಪ್ರಗತಿಪರರು ತಮ್ಮ ಒಗ್ಗಟ್ಟಿನ ಚಳುವಳಿಯಿಂದ ಸರಕಾರವನ್ನೇ ನಡುಗಿಸಿದ್ದರು. ಈಗ ಅಂತಹ ಕಾಲ ಮರಳಿ ಬರುತ್ತಿದೆ. ಎಲ್ಲಾ ಚಳುವಳಿಗಳು ಸಂಘಟನೆಗಳಲ್ಲಿ ಜೀವಂತಿಕೆಯ ವಿದ್ಯುತ್ ಸಂಚಾರವಾಗುತ್ತಿದೆ. ಆಗಿನ ಗಟ್ಟಿತನ ಮರುಕಳಿಸುತ್ತಿದೆ. ಸಂದೇಹಗಳು ಮೂಡಿಬಂದು ಛಿದ್ರವಾಗಿದ್ದ ಸಂಘಟನೆಗಳು ಮತ್ತೆ ಒಗ್ಗೂಡಿ ನಡೆಯುವ ಕಾಲ ಸನ್ನಿಹಿತವಾಗಿದೆ. ಅಂಬೇಡ್ಕರ್ ಅವರ ಹೋರಾಟದ ರಥವನ್ನು ಎಳೆಯುವುದಕ್ಕೆ ಎಲ್ಲಾ ಸಂಘಟನೆಗಳ ಸಂಯುಕ್ತ ನಡಿಗೆ ಅನಿವಾರ್ಯ” ಎಂದರು ಪ್ರೊ. ಅರವಿಂದ ಮಾಲಗತ್ತಿ. ಅವರು ಮೈಸೂರಿನಲ್ಲಿ ಸಮುದಾಯ ಕರ್ನಾಟಕದ 6ನೇ ರಾಜ್ಯ ಸಮ್ಮೇಳನವನ್ನು ನವೆಂಬರ್ 13ರಂದು ಉದ್ಘಾಟಿಸಿ ಮಾತನಾಡುತ್ತಿದ್ದರು. ಅವರು ಮೊದಲಿಗೆ ‘ಬೆಲ್ಚಿ’ ನಾಟಕದಲ್ಲಿ ಸಣ್ಣ ಪಾತ್ರದ ಮೂಲಕ ಸಮುದಾಯ ಜತೆ ಸಂಪರ್ಕಕ್ಕೆ ಬಂದ ಮತ್ತು ಆ ಮೇಲೆ ಮಂಗಳೂರಿನಲ್ಲಿ ಹಲವು ವರ್ಷಗಳ ಕಾಲ ಸಮುದಾಯದಲ್ಲಿ ಕೆಲಸ ಮಾಡಿದ ಹಳೆಯ ನೆನಪುಗಳನ್ನು ರೋಚಕವಾಗಿ ಹೇಳಿದರು.

70–80ರ ದಶಕದ ದಲಿತರು ಮತ್ತು ಪ್ರಗತಿಪರರ ಸ್ನೇಹ–ಒಗ್ಗಟ್ಟು ಹಾಗೂ ಸಂದೇಹಗಳನ್ನು ಆನೆ–ಹುಲಿಗಳ ಸ್ನೇಹದ ಪ್ರತಿಮೆಯೊಂದಿಗೆ ಅವರು ವಿವರಿಸಿದರು. ಚಳುವಳಿ–ಸಂಘಟನೆಗಳ ಒಳಗೆ ಮತ್ತು ನಡುವೆ ಮೂಡಿಬಂದ ಸಂದೇಹಗಳಿಂದಾಗಿ ಚಳುವಳಿಗಳಿಗೆ ದಕ್ಕಬೇಕಾದ ಪ್ರತಿಫಲ ಸಿಗಲಿಲ್ಲ ಎಂದರು. ಅಂಬೇಡ್ಕರ್ ಮತ್ತು ಮಾರ್ಕ್ಸ್ ಚಿಂತನೆಗಳು ಆರ್ಥಿಕ ವಿಷಯಕ್ಕೆ ಸಂಬಂಧಿಸಿದಂತೆ ತೀರಾ ಹತ್ತಿರವಾಗಿವೆ. ಆದ್ದರಿಂದ ಬಂದಿರುವ ಸಂದೇಹಗಳನ್ನು ಪರಿಷ್ಕರಿಸಿಕೊಂಡು ಮುಂದಕ್ಕೆ ಹೋಗುವ ಅಗತ್ಯವಿದೆ ಎಂದು ದಲಿತ, ಎಡ ಹಾಗೂ ಪ್ರಗತಿಪರ ಚಳುವಳಿಯ ಐಕ್ಯತೆಯ ಬಗ್ಗೆ ಮತ್ತೆ ಮತ್ತೆ ಒತ್ತಿ ಹೇಳಿದರು. ಚಲೋ ಉಡುಪಿ ಚಳುವಳಿ ಇಂತಹ ಒಂದು ಪ್ರಯತ್ನ ಎಂದು ಅವರು ಅಭಿಪ್ರಾಯ ಪಟ್ಟರು. ಮೌಢ್ಯಾಚರಣೆ ಪ್ರತಿಬಂಧಕ ಕಾನೂನು ಜಾರಿಗೆ ಚಳುವಳಿ ಒತ್ತಡ ಅಗತ್ಯ ಎಂದು ಅವರು ಆಗ್ರಹಿಸಿದರು. ಅದನ್ನು ಜಾರಿ ಮಾಡಲು ಒಂದು ಪ್ರಾಧಿಕಾರದ ರಚನೆಯಾಗದೆ ಅದಕ್ಕೆ ಅರ್ಥವಿಲ್ಲ ಎಂದೂ ಅವರು ಅಭಿಪ್ರಾಯಪಟ್ಟರು.

‘ಮಾಧ್ಯಮ ಪುರೋಹಿತಶಾಹಿ’

“ಇತ್ತೀಚಿನ ದಿನಗಳಲ್ಲಿ ಪುರೋಹಿತ ಪರಿಕಲ್ಪನೆ ಬಿದ್ದುಹೋಗಿದ್ದು, ಬದಲಿಗೆ ಮಾಧ್ಯಮ ಪುರೋಹಿತಶಾಹಿ ಬೆಳಕಿಗೆ ಬರುತ್ತಿದೆ. ಅದರಲ್ಲೂ ವಿದ್ಯುನ್ಮಾನದ ಕೆಲವು ವಾಹಿನಿಗಳು ಪೂರೋಹಿತ್ಯವನ್ನು ಅಧಿಕೃತವಾದ ಅಸ್ತ್ರವನ್ನಾಗಿಸಿಕೊಂಡಿವೆ” ಎಂದು ‘ಮಾಧ್ಯಮ ಪುರೋಹಿತಶಾಹಿ’ಯ ಹೊಸ ಪರಿಕಲ್ಪನೆಯನ್ನು ಮುಂದಿಟ್ಟರು. ರೊಹಿತ್ ವೆಮುಲಾ–ಜೆ.ಎನ್.ಯು. ಪ್ರಕರಣದಿಂದ ಇತ್ತೀಚಿನ ನೋಟು ರದ್ದತಿಯವರೆಗಿನ ಎಲ್ಲಾ ಪ್ರಮುಖ ಸರಕಾರದ ನಡೆಗಳಲ್ಲಿ ಜನರ ಮೇಲೆ ಸರಕಾರದ ಅಭಿಪ್ರಾಯವನ್ನು ಜನರ ಮೇಲೆ ಹೊರಿಸುತ್ತಿರುವ ಟಿ.ವಿ. ವಾಹಿನಿಗಳ ಪೌರೋಹಿತ್ಯ ಬರಿಯ ಜ್ಯೋತಿಷ–ಧಾರ್ಮಿಕ–ಮೌಢ್ಯಾಚರಣೆಗೆ ಸೀಮಿತವಾಗಿಲ್ಲ. ಎಲ್ಲಾ ಸಾಮಾಜಿಕ–ರಾಜಕೀಯ–ಸಾಂಸ್ಕೃತಿಕ ವಿಷಯಗಳನ್ನು ‘ಮಾಧ್ಯಮ ಪುರೋಹಿತಶಾಹಿ’ ಆವರಿಸುತ್ತಿದೆ ಎಂಬ ಹಿನ್ನೆಲೆಯಲ್ಲಿ ಇದೊಂದು ವಿಶಿಷ್ಟ ಪರಿಕಲ್ಪನೆಯ ಹಾಗೆ ಕಂಡಿತು.

ಮಾಲಗತ್ತಿ ಅವರ ಈ ಸ್ಫೂರ್ತಿದಾಯಕ ಉದ್ಘಾಟನಾ ಭಾಷಣದ ಮೊದಲು ಸ್ವಾಗತ ಸಮಿತಿಯ ಅಧ್ಯಕ್ಷ ಪ್ರೊ. ಎಸ್.ಆರ್.ರಮೇಶ್ ಅವರು “ಪ್ರಸ್ತುತ ಸಾಮಾಜಿಕ ತಲ್ಲಣಗಳನ್ನು ವಿಶ್ಲೇಷಿಸಲು ಹೊಸದಾದ ಭಾಷೆಯ ಅಗತ್ಯವಿದೆ. ಈ ಎಲ್ಲಾ ಸೃಜನಶೀಲ ಚಿಂತನೆಗಳೂ ಸಾಕಾರಗೊಳ್ಳಬೇಕಿದ್ದಲ್ಲಿ ಮನಸ್ಸುಗಳು ಒಂದಾಗಬೇಕು. ಈ ಚಿಂತನ ಮಂಥನದ ಶಿಬಿರದಲ್ಲಿ ಪರ್ಯಾಯ ಸಂಸ್ಕೃತಿಯ ಬಗ್ಗೆ ಹೆಚ್ಚಿನ ಚರ್ಚೆಯಾಗಲಿ. ಬಲಪಂಥೀಯ ಸಾಂಸ್ಕೃತಿಕ ನಿರೂಪಣೆಗಳಿಗೆ ವಿರುದ್ಧವಾದ ಸಾಂಸ್ಕೃತಿಕ ಪ್ರತಿರೋಧಗಳ ಬಗ್ಗೆ ಗಮನ ಹರಿಸುವಂತಾಗಲಿ” ಎಂದು ಹಾರೈಸಿದರು. “ಸಮುದಾಯ ನನ್ನ ತಾಯಿ. ನನ್ನ ಹುಟ್ಟು, ಬೆಳವಣಿಗೆ ಆಗಿದ್ದು ಇಲ್ಲೇ” ಎನ್ನುತ್ತಾ, ತಮ್ಮ ಮಾತುಗಳ ನಡುವೆ ಸಮುದಾಯದ ಹೋರಾಟದ ಹಾಡುಗಳನ್ನು ಭಾವಪೂರ್ಣವಾಗಿ ಹಾಡುವ ಮೂಲಕ, ರಂಗಾಯಣ ಮೈಸೂರಿನ ನಿಕಟಪೂರ್ವ ನಿರ್ದೇಶಕ ಜನ್ನಿ ‘ಕಳೆದ ಹಾಡುಗಳು’ ‘ಕಾಡುವಂತೆ’ ಮಾಡಿದರು. ಪ್ರಧಾನ ಕಾರ್ಯದರ್ಶಿ ಟಿ. ಸುರೇಂದ್ರ ರಾವ್ ಅವರು ಪ್ರಾಸ್ತಾವಿಕ ಮಾತುಗಳನ್ನಾಡಿದರು. ಪ್ರೊ. ಆರ್.ಕೆ. ಹುಡಗಿ ಅಧ್ಯಕ್ಷತೆ ವಹಿಸಿದ್ದರು. ಸಂಘಟನಾ ಕಾರ್ಯದರ್ಶಿ ದೇವೇಂದ್ರಗೌಡ ನಿರ್ವಹಣೆ ಮಾಡಿದರು. ಸ್ವಾಗತ ಸಮಿತಿ ಕಾರ್ಯದರ್ಶಿ ಎಲ್. ಜಗನ್ನಾಥ ಉಪಸ್ಥಿತರಿದ್ದರು.

“ಸಾಂಸ್ಕೃತಿಕ ಪ್ರತಿರೋಧದ ಮಾದರಿಗಳು”

ಸಮುದಾಯ 6ನೇ ರಾಜ್ಯ ಸಮ್ಮೇಳನದ ಬಹಿರಂಗ ಅಧಿವೇಶನದ ಮುಂದಿನ ಪ್ರಮುಖ ಭಾಗವಾಗಿ “ಸಾಂಸ್ಕೃತಿಕ ಪ್ರತಿರೋಧದ ಮಾದರಿಗಳು” ಎಂಬ ವಿಚಾರ ಸಂಕಿರಣ ನಡೆಯಿತು. ರಂಗಭೂಮಿಯಲ್ಲಿ ಇಂತಹ ಮಾದರಿಗಳ ಬಗ್ಗೆ ಪ್ರೊ. ಎಚ್.ಎಸ್. ಉಮೇಶ್ ಅವರು ಮಾತನಾಡಿದರೆ, ಸಂಗೀತದಲ್ಲಿ ಪ್ರೊ. ಶೈಲಜಾ, ಸಿನಿಮಾ–ಮಾಧ್ಯಮಗಳಲ್ಲಿ ಪ್ರೊ. ರಾಜಪ್ಪ ದಳವಾಯಿ ಮಾತನಾಡಿದರು. ಕನ್ನಡ ರಂಗಭೂಮಿಯಲ್ಲಿ ಇಂತಹ ಮಾದರಿಗಳ ಅನ್ವೇಷಣೆ ಮಾಡುತ್ತಾ ಪ್ರೊ. ಉಮೇಶ್, ಬ್ರೆಕ್ಟ್ ನಿಂದ ಪ್ರಭಾವಿತರಾಗಿ ಆರಂಭಿಸಿದ ಭಿನ್ನ ದಾರಿಗಳನ್ನು ಹಿಡಿದ/ಹಿಡಿಯುತ್ತಿರುವ ಮೂರು ನಾಟಕಕಾರರನ್ನು (ಎಚ್.ಎಮ್.ಚೆನ್ನಯ್ಯ, ಲಿಂಗದೇವರು ಹಳೆಮನೆ, ಪ್ರಸನ್ನ) ಪ್ರಾತಿನಿಧಿಕವಾಗಿ ತೆಗೆದುಕೊಂಡು, ಅವರ ಮಾದರಿಗಳನ್ನು ವಿಶ್ಲೇಷಿಸಿದರು. ಪ್ರೊ. ಶೈಲಜಾ ‘ಪ್ರತಿರೋಧ’ವನ್ನು ನಿಖರವಾಗಿ ನಿರ್ವಚಿಸಿಕೊಂಡು, ಅಭಿಜಾತ (ಕ್ಲಾಸಿಕಲ್) ಪರಂಪರೆಯ ಒಳಗೆ ಮತ್ತು ಹೊರಗಿನ “ಸಾಂಸ್ಕೃತಿಕ ಪ್ರತಿರೋಧದ ಮಾದರಿ”ಗಳ ಸ್ಥೂಲ ಸಮೀಕ್ಷೆಯನ್ನು ಉದಾಹರಣೆಗಳೊಂದಿಗೆ ಮುಂದಿಟ್ಟರು. ಕರ್ನಾಟಕ ಕ್ಲಾಸಿಕಲ್ ಸಂಗೀತದ ನಿಷೇಧ–ಕಟ್ಟುಪಾಡುಗಳನ್ನು ಒಡೆದ ಹಲವು ಉದಾಹರಣೆಗಳನ್ನು ಕೊಟ್ಟರು. ವಚನ, ಭಕ್ತಿಪಂಥ, ತತ್ವಪದ, ಇಪ್ಟಾ ಪ್ರಾದೇಶಿಕ ಜಾನಪದ (ಬಂಗಾಳದ ಬೌಲ್, ಕೇರಳದ ‘ದೋಣಿ ಹಾಡುಗಳು) ಸಂಗೀತ ಅಳವಡಿಸಿಕೊಂಡದ್ದು, ಭೂಪೇನ್ ಹಜಾರಿಕಾ, ಗದ್ದರ್, ಕಬೀರ್ ಮಂಚದ, ಇತ್ತೀಚಿನ ನಿರ್ಭಯಾ ಚಳುವಳಿಯ ಬಾಲಿವುಡ್ ರಿ–ಮಿಕ್ಸ್, ಅಮೆರಿಕದ ಬ್ಲೂಸ್, ಜಾಝ್, ಕರ್ನಾಟಕದ ಹೋರಾಟದ ಹಾಡುಗಳು – ಇತ್ಯಾದಿ ಅವರ ಸಮೀಕ್ಷೆಯಲ್ಲಿ ಸೇರಿದ್ದವು. ಪ್ರೊ. ರಾಜಪ್ಪ ದಳವಾಯಿ ಸಿನಿಮಾದಲ್ಲಿ ಅವರು ಹೊಸ ಅಲೆ ಸಿನಿಮಾ ಬಗ್ಗೆ ಮಾತನಾಡುತ್ತಾ, ‘ತಿಥಿ’ ಮುಂತಾದ ಹೊಸ ಸಿನಿಮಾಗಳು ಸಿನಿಮಾ ಲೋಕದಲ್ಲಿ ಮಾತ್ರ ಪರಿಣಾಮ ಬೀರದೆ, ‘ಗಡ್ಡಪ್ಪ’ನ “ಏನ್ ನಿನ್ನ ಪ್ರಾಬ್ಲಮು’ ಪೋಸ್ಟರುಗಳ ಮೂಲಕ ಸಾಮಾಜಿಕ ಮಾಧ್ಯಮಗಳಲ್ಲೂ ಹೊಸ ಪ್ರತಿರೋಧದ ಮಾದರಿಗಳನ್ನು ಹುಟ್ಟಿಸುತ್ತಿರುವಂತಹ ಆಸಕ್ತಿಕಾರಕ ವಿದ್ಯಮಾನಗಳ ಬಗ್ಗೆ ಮಾತನಾಡಿದರು. ಟಿವಿಯಲ್ಲೂ ಡ್ರಾಮಾ ಜೂನಿಯರ್ಸ್ ನಂತಹ ಪ್ರಯೋಗಗಳ, ಎಫ್.ಎಮ್. ‘ಭಾಷಾ ಶುದ್ಧೀಕರಣ’ದ ಹೆಸರಲ್ಲಿ ವೈವಿಧ್ಯತೆ ಕೊಲ್ಲುವ ಬಗೆಯೂ ಅವರ ನಿರೂಪಣೆಯಲ್ಲಿ ಹಾದು ಹೋದವು. ವಿಚಾರ ಸಂಕಿರಣವನ್ನು ಡಾ. ಶ್ರೀಪಾದ ಭಟ್ ನಡೆಸಿಕೊಟ್ಟರು.

ಪ್ರತಿನಿಧಿ ಅಧಿವೇಶನ

ನವೆಂಬರ್ 13ರ ಮಧ್ಯಾಹ್ನದಿಂದ 6 ನೇ ಸಮ್ಮೇಳನದ ಪ್ರತಿನಿಧಿ ಅಧಿವೇಶನ ಆರಂಭವಾಯಿತು. ಪ್ರತಿನಿಧಿ ಅಧಿವೇಶನ ನಡೆಸಿಕೊಳ್ಳಲು ಪ್ರೊ. ಆರ್. ಕೆ.ಹುಡಗಿ, ಅಚ್ಯುತ್ ಹಾಗೂ ಫ್ಲೋರಾ ಅವರುಗಳು ಇರುವ ಒಂದು ಅಧ್ಯಕ್ಷೀಯ ಮಂಡಳಿಯನ್ನು ಆರಿಸಲಾಯಿತು. ಪ್ರಧಾನ ಕಾರ್ಯದರ್ಶಿ ಟಿ. ಸು ರೇಂದ್ರ ರಾವ್ ಅವರು ವರದಿಯನ್ನು ಮಂಡಿಸಿದರು. ವರದಿಯಲ್ಲಿ ಎರಡು ಪ್ರಮುಖ ಬಾಗಗಳಿದ್ದವು. ಮೊದಲನೆಯದು ಕಳೆದ ಮೂರು ವರ್ಷಗಳ ಪ್ರಮುಖ ಸಾಂಸ್ಕೃತಿಕ ಬೆಳವಣಿಗೆಗಳು ಮತ್ತು ಈಗ ಎದುರಿಸುತ್ತಿರುವ ಸಾಂಸ್ಕೃತಿಕ ಪರಿಸ್ಥಿತಿಯ ನಿರೂಪಣೆ ಇತ್ತು. ಎರಡನೆಯ ಭಾಗದಲ್ಲಿ ಸಂಘಟನೆಯನ್ನು ಬಲಗೊಳ್ಳಿಸುವ ಮತ್ತು ವಿಸ್ತರಿಸುವ ನಾಲ್ಕು ಆಯಾಮಗಳಲ್ಲಿ ಆದ ಪ್ರಗತಿಯ ಬಗ್ಗೆ ವಸ್ತುನಿಷ್ಟ ವಿಶ್ಲೇಷಣೆ ಇತ್ತು. ವೈವಿಧ್ಯಮಯ ಕಾರ್ಯಕ್ರಮಗಳು ಮತ್ತು ಅವುಗಳ ನಿರಂತರತೆ, ಹೊಸ ವಿಭಾಗಗಳ ನಡುವೆ ಗುರುತಿಸಿಕೊಳ್ಳುವಿಕೆ, ಸಾಂಸ್ಕೃತಿಕ ಮಧ್ಯಪ್ರವೇಶ ಹಾಗೂ ಘಟಕಗಳು ಮತ್ತು ಸದಸ್ಯತ್ವದ ವಿಸ್ತರಣೆ – ಇವೇ ಆ ನಾಲ್ಕು ಆಯಾಮಗಳು. ಇವುಗಳ ಆಧಾರದ ಮೇಲೆ ಮುಂದಿನ ಕರ್ತವ್ಯಗಳನ್ನು ಗುರುತಿಸಲಾಗಿತ್ತು. ಈ ಅವಧಿಯ ಆಡಿಟ್ ಮಾಡಿದ ಲೆಕ್ಕಪತ್ರ ವರದಿಯನ್ನು ಖಜಾಂಚಿ ವಸಂತರಾಜ್ ಮಂಡಿಸಿದರು.

ಸುಮಾರು 20 ಶಾಖೆಗಳಿಂದ 80 ಪ್ರತಿನಿಧಿಗಳು ಸಮ್ಮೇಳನದಲ್ಲಿ ಭಾಗವಹಿಸಿದ್ದು, ವರದಿಯ ಮೇಲೆ ಗುಂಪು ಚರ್ಚೆಯ ನಂತರ, ಸುಮಾರು 25 ಪ್ರತಿನಿಧಿಗಳು ಪ್ರತಿನಿಧಿ ಅಧಿವೇಶನದಲ್ಲಿ ವರದಿಯ ಮೇಲೆ ಚರ್ಚೆಯಲ್ಲಿ ಭಾಗವಹಿಸಿದರು. ಸಮ್ಮೇಳನ ಆರು ನಿರ್ಣಯಗಳನ್ನು ಚರ್ಚಿಸಿ ಅಂಗೀಕರಿಸಿತು. ಆರು ನಿರ್ಣಯಗಳ ವಿಷಯವನ್ನು ಬೇರೆಡೆಗೆ ಕೊಡಲಾಗಿದೆ. ಸಮ್ಮೇಳನವು 29 ನೂತನ ರಾಜ್ಯ ಸಮಿತಿ ಸದಸ್ಯರನ್ನು ಮತ್ತು 9 ಪದಾಧಿಕಾರಿಗಳನ್ನು ಆಯ್ಕೆ ಮಾಡಿದೆ: ಪದಾಧಿಕಾರಿಗಳ ಹೆಸರುಗಳನ್ನೂ ಬೇರೆಡೆಗೆ ಕೊಡಲಾಗಿದೆ.

ಸಮಾರೋಪ ಮಾತುಗಳನ್ನು ಡಾ. ಹಿ.ಶಿ. ರಾಮಚಂದ್ರೇಗೌಡ ಆಡಿದರು. ಮುಖ್ಯ ಅತಿಥಿಗಳಾಗಿದ್ದ ಹಿರಿಯ ರಂಗಕರ್ಮಿ ಗಂಗಾಧರ ಸ್ವಾಮಿ, ಹೊಸದಾಗಿ ಚುನಾಯಿತ ಅಧ್ಯಕ್ಷ ಅಚ್ಯುತ್, ಪ್ರಧಾನ ಕಾರ್ಯದರ್ಶಿ ದೇವೇಂದ್ರಗೌಡ, ಪ್ರೊ. ಆರ್.ಕೆ.ಹುಡಗಿ, ಟಿ. ಸುರೇಂದ್ರ ರಾವ್ ಸಮಾರೋಪದಲ್ಲಿ ಭಾಗವಹಿಸಿದ್ದರು. ಡಾ. ವಿಠ್ಠಲ ಭಂಡಾರಿ ಸಮಾರೋಪದ ನಿರ್ವಹಣೆ ಮಾಡಿದರು. ಗುರುರಾಜ್ ಮತ್ತು ಸಂಗಡಿಗರು ‘ಮಂಟೇಸ್ವಾಮಿ ಮಹಾಕಾವ್ಯ’ದ ಒಂದು ಪ್ರಸಂಗವನ್ನು ಹಾಡಿದರು.

ಹೊಸ ಪದಾಧಿಕಾರಿಗಳು

ಅಧ್ಯಕ್ಷರು : ಆಚ್ಯುತ
ಉಪಾಧ್ಯಕ್ಷರು: ಟಿ.ಸುರೇಂದ್ರ ರಾವ್
ವಾಸುದೇವ ಉಚ್ಚಿಲ್
ಬಿ.ಐ.ಇಳಿಗೇರ್
ಪ್ರಧಾನ ಕಾರ್ಯದರ್ಶಿ: ಎಸ್.ದೇವೇಂದ್ರ ಗೌಡ
ಸಂಘಟನಾ ಕಾರ್ಯದರ್ಶಿ: ವಿಠ್ಠಲ ಭಂಡಾರಿ
ಸಹ ಕಾರ್ಯದರ್ಶಿಗಳು: ಕೆ.ಎಸ್.ವಿಮಲಾ
ಉದಯ್ ಗಾಂವ್ಕರ್
ಖಜಾಂಚಿ: ವಸಂತರಾಜ್ ಎನ್.ಕೆ. ●


ಅಧ್ಯಕ್ಷರು: ಆಚ್ಯುತ


ಪ್ರ. ಕಾರ್ಯದರ್ಶಿ: ಎಸ್.ದೇವೇಂದ್ರ ಗೌಡ

ಸಮ್ಮೇಳನದ ನಿರ್ಣಯಗಳು

1. ಮೌಢ್ಯಾಚರಣೆ ಪ್ರತಿಬಂಧಕ ಮಸೂದೆಯನ್ನು ಮುಂಬರುವ ಬೆಳಗಾವಿ ವಿಧಾನ ಮಂಡಲದ ಅಧಿವೇಶನದಲ್ಲೇ ಅಂಗೀಕರಿಸಬೇಕೆಂದು ಒತ್ತಾಯಿಸಿ
2. ಭಾರತೀಯ ಸಂಸ್ಕೃತಿಯ ಬಹುತ್ವ ಪರಂಪರೆಯನ್ನು ನಾಶಗೊಳಿಸುತ್ತಿರುವ ಶಕ್ತಿಗಳ ವಿರುದ್ಧ ಹೋರಾಡಲು ಪಣ ತೊಡುತ್ತಾ, ಅವುಗಳ ವಿರುದ್ಧ ಐಕ್ಯ ಹೋರಾಟಕ್ಕೆ ಎಲ್ಲಾ ಪ್ರಗತಿಪರ ಸಾಂಸ್ಕೃತಿಕ–ಸಾಮಾಜಿಕ ಚಳುವಳಿಗಳಿಗೆ ಕರೆ ನೀಡುವ
3. ಪಿಯುಸಿವರೆಗೆ ಕಡ್ಡಾಯ ಉಚಿತ ಶಿಕ್ಷಣ ಒದಗಿಸಲು ಪಿಯುಸಿಯವರೆಗೆ ಶಿಕ್ಷಣದ ರಾಷ್ಟ್ರೀಕರಣವಾಗಬೇಕೆಂದು ಒತ್ತಾಯಿಸಿ
4. ಡಾ.ಎಂ.ಎಂ.ಕಲಬುರ್ಗಿ ಹಂತಕರನ್ನು ಬಂಧಿಸಿ ಸೂಕ್ತ ಕಾನೂನು ಕ್ರಮ ತೆಗೆದುಕೊಳ್ಳಬೇಕೆಂದು ಒತ್ತಾಯಿಸಿ
5. ಮಾಧ್ಯಮ ಪುರೋಹಿತಶಾಹಿ ಪ್ರವೃತ್ತಿಗಳನ್ನು ಖಂಡಿಸಿ, ಮಾಧ್ಯಮ ಸ್ವಾತಂತ್ರ್ಯ ಎತ್ತಿಹಿಡಿಯುತ್ತಾ, ಬದಲಿ ಮಾಧ್ಯಮಗಳನ್ನು ರೂಪಿಸಲು ಕರೆ
6. ವೈವಿಧ್ಯಮಯ ಭಾಷೆ, ಆಹಾರ, ಉಡುಪು, ಆಚರಣೆಗಳ ಹಕ್ಕುಗಳ ಮೇಲೆ ದಾಳಿ ಮಾಡಿ ಏಕರೂಪತೆಯನ್ನು ಹೊರಿಸುತ್ತಿರುವ ಸಂಘಟನೆ–ಶಕ್ತಿಗಳನ್ನು ಖಂಡಿಸಿ, ಅವುಗಳ ವಿರುದ್ಧ ಕ್ರಮ ಕೈಗೊಳ್ಳುವಂತೆ ಒತ್ತಾಯಿಸಿ

ಕೋಮುವಾದದ ವಿರುದ್ಧ ಎಡಪಕ್ಷಗಳ ಸಮಾವೇಶ...ಪುಟ 09 ರಿಂದ

ವಜಾ ಮಾಡಲಾಗಿದೆ. ಬಂಡವಾಳ, ಸಂಘಪರಿವಾರ, ಮಠಾಧಿಪತಿಗಳು ಒಂದಾಗಿ ಕೆಲಸ ಮಾಡುತ್ತಿದ್ದಾರೆ. ಕಾರ್ಮಿಕ ಹೋರಾಟವನ್ನು ಸಂಘಟಿಸಬೇಕಿದೆ. ಅವರ ಒಂದೊಂದು ಅಂಶಗಳನ್ನು ತೆಗೆದುಕೊಳ್ಳಬೇಕಿದೆ. ಎಂದು ತಿಳಿಸಿದರು.

ಕಾರ್ಯಕ್ರಮದ ಮೊದಲಿಗೆ ಸಿಪಿಐ(ಎಂ) ರಾಜ್ಯ ಕಾರ್ಯದರ್ಶಿ ಮಂಡಳಿ ಸದಸ್ಯರಾದ ಕಾ. ಜಿ.ಎನ್.ನಾಗರಾಜ್‌ರವರು ಕೋಮುವಾದದ ಬೆಳವಣಿಗೆ, ಕೇಂದ್ರದಲ್ಲಿ ಬಿಜೆಪಿ ಸರ್ಕಾರ ಅಧಿಕಾರಕ್ಕೆ ಬಂದ ನಂತರದಲ್ಲಿ ಕೋಮುವಾದವು ವಿರಾಟ್ ಸ್ವರೂಪ ಪಡೆದ ಬಗ್ಗೆ, ಕೋಮುವಾದಿಗಳು ಪ್ರಮುಖವಾಗಿ ವೈಚಾರಿಕತೆ ಮೇಲೆ, ಅಲ್ಪಸಂಖ್ಯಾತ, ದಲಿತರ ಮೇಲೆ, ಎಡಪಂಥೀಯರ ಮೇಲೆ ಮಾಡುತ್ತಿರುವ ನಿರಂತರ ದಾಳಿಗಳ ಬಗ್ಗೆ ಪ್ರಸ್ತಾವನೆ ಮಂಡಿಸಿದರು.

ಪ್ರೊ. ಕುಮಾರ್ ಅವರು ಪ್ರಸ್ತಾವಿಸಿದ ಬಿಜೆಪಿಯೇತರ ಪಕ್ಷಗಳ ಐಕ್ಯತೆಯನ್ನು ಎಡಪಕ್ಷಗಳು ಒಪ್ಪುವುದಿಲ್ಲ. ಕೋಮುವಾದಿ–ವಿರೋಧಿ ಎಡ ಮತ್ತು ಪ್ರಜಾಸತ್ತಾತ್ಮಕ ಪಕ್ಷ, ಸಂಘಟನೆ, ಶಕ್ತಿ, ವ್ಯಕ್ತಿಗಳ ಐಕ್ಯತೆ ಅಗತ್ಯ. ಆದರೆ ಕಾಂಗ್ರೆಸ್ ಮತ್ತಿತರ ಬೂರ್ಜ್ವಾ–ಭೂಮಾಲಕ ಪಕ್ಷಗಳು ಧೃಢ ಕೋಮುವಾದಿ–ವಿರೋಧಿ ತಳೆಯುವುದಿಲ್ಲ. ಅವುಗಳನ್ನು ಕೋಮುವಾದಿ–ವಿರೋಧಿ ಹೋರಾಟದಲ್ಲಿ ನೆಚ್ಚಿಕೊಳ್ಳಲು ಸಾಧ್ಯವಿಲ್ಲ ಎಂದು ಕಾ. ವಿಜೆಕೆ ನಾಯರ್ ಅಧ್ಯಕ್ಷೀಯ ಭಾಷಣ ಮಾಡುತ್ತಾ ಹೇಳಿದರು.

ಕಾರ್ಯಕ್ರಮದಲ್ಲಿ ಅಧ್ಯಕ್ಷೀಯ ಮಂಡಳಿ ರಚಿಸಲಾಯಿತು. ಸಿಪಿಐ(ಎಂ) ರಾಜ್ಯ ಕಾರ್ಯದರ್ಶಿ ಮಂಡಳಿ ಸದಸ್ಯರಾದ ಕಾ. ವಿ.ಜೆ.ಕೆ.ನಾಯರ್, ಸಿಪಿಐ ಪಕ್ಷದ ರಾಜ್ಯ ಕಾರ್ಯದರ್ಶಿ ಮಂಡಳಿ ಸದಸ್ಯರಾದ ಕಾ. ಸಿದ್ಧನಗೌಡ ಪಾಟೀಲ್, ಎಸ್.ಯು.ಸಿ.ಐ.(ಸಿ)ನ ಕಾ. ಕೆ.ಉಮಾ, ಸಿಪಿಐ(ಎಂಎಲ್)ನ ಕಾ. ಅಪ್ಪಣ್ಣ ಅಧ್ಯಕ್ಷೀಯ ಮಂಡಳಿಯಲ್ಲಿ ಇದ್ದು ಸಮಾವೇಶವನ್ನು ನಡೆಸಿಕೊಟ್ಟರು. ●

ಸುಸ್ತಿ ಸಾಲಗಳ ವಸೂಲಿಗೆ 'ಮಿಂಚಿನ ಪ್ರಹಾರ'ದ ಬದಲು ಬರೀ ಕೈಚಳಕ : ಕೋಟ್ಯಂತರ ರೂ.ಗಳ 'ರೈಟ್-ಆಫ್'!



ದೇಶದ ಅತಿ ದೊಡ್ಡ ಸಾರ್ವಜನಿಕ ವಲಯದ ಬ್ಯಾಂಕ್ ಆಗಿರುವ ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾ 63 ಉದ್ದೇಶಪೂರ್ವಕ ಸಾಲ ತೀರಿಸದ ಸಾಲಗಾರರ ಸಾಲಗಳನ್ನು ರೈಟ್-ಆಫ್ ಮಾಡಿದೆ, ಅಂದರೆ ತನ್ನ ಕೆಟ್ಟ ಸಾಲಗಳ ಪಟ್ಟಿಯಿಂದ ತೆಗೆದಿದೆ. ಅಂದರೆ ಅವು ಸುಸ್ತಿ ಸಾಲಗಳೇ ಆಗಿದ್ದರೂ ಇನ್ನು ಮುಂದೆ ಅದರ ಸುಸ್ತಿ ಸಾಲಗಳ ಪಟ್ಟಿಯಲ್ಲಿ ಇರುವುದಿಲ್ಲ, ಹೀಗೆ ರೈಟ್‌ಆಫ್ ಆದ ಸಾಲಗಳ ಮೊತ್ತ 7016 ಕೋಟಿ ರೂ.ಗಳು, ಇವುಗಳಲ್ಲಿ 80% 100 'ಉನ್ನತ' ಸಾಲಗಾರರದ್ದು ಎಂದು ಡಿಎನ್‌ಎ ವರದಿ ಮಾಡಿದೆ(ನ.16).

ಈ ಸಾಲಗಳ ವಸೂಲಿ ಇನ್ನು ಮುಂದೆ ಅಸಾಧ್ಯ ಎಂದು ಅವನ್ನು ಕೈಬಿಟ್ಟು ಎಸ್‌ಬಿಐ ತನ್ನ ಲೆಕ್ಕವನ್ನು 'ಶುದ್ಧ'ಗೊಳಿಸಿಕೊಂಡಿದೆ. 63 ಸಾಲ ಖಾತೆಗಳನ್ನು ಸಂಪೂರ್ಣವಾಗಿ ಮುಚ್ಚಲಾಗಿದೆ, ಉಳಿದ 31ನ್ನು ಭಾಗಶಃ ಮುಚ್ಚಲಾಗಿದೆ. ಜೂನ್30, 2016ರ ವೇಳೆಗೆ ಎಸ್‌ಬಿಐ ನಲ್ಲಿ ಒಟ್ಟು 48,000 ಕೋಟಿ ರೂ.ಗಳಷ್ಟು 'ಕೆಟ್ಟ' ಸಾಲಗಳನ್ನು ರೈಟ್-ಆಫ್ ಮಾಡಲಾಗಿದೆ ಎಂದು ಈ ಪತ್ರಿಕೆಗೆ ದೊರೆತ ದಸ್ತಾವೇಜುಗಳಿಂದ ತಿಳಿದು ಬಂದಿದೆಯಂತೆ.

ಈ 63ರಲ್ಲಿ ಮೊದಲ ಸ್ಥಾನದಲ್ಲಿರುವಂತದ್ದು ದೇಶ ಬಿಟ್ಟೋಡಿದ ವಿಜಯ ಮಲ್ಯರ ಕಿಂಗ್‌ಫಿಶರ್ ಕಂಪನಿಯ 1201 ಕೋಟಿ ರೂ.ಗಳ ಸಾಲ ಬಾಕಿ. ಈ ಕಂಪನಿಯೂ ಸೇರಿದಂತೆ ಅತಿ ದೊಡ್ಡ ಹತ್ತು ಸಾಲಗಾರರ ಒಟ್ಟು ಸಾಲದ ಮೊತ್ತವೇ 4629 ಕೋಟಿ ರೂ.ಗಳು. ಈ ಮೂಲಕ ಕಿಂಗ್‌ಫಿಶರ್‌ನ 1201 ಕೋಟಿರೂ. ಸಾಲ ಬಾಕಿ ಸೇರಿದಂತೆ ಈ 7016 ಕೋಟಿರೂ. ಎಸ್‌ಬಿಐನ ಬ್ಯಾಲಂಸ್ ಶೀಟ್‌ನಲ್ಲಿ ಇರುವುದಿಲ್ಲ.

ಮಲ್ಯನ ಕಿಂಗ್‌ಫಿಶರ್ ಒಟ್ಟು 17 ಬ್ಯಾಂಕುಗಳಲ್ಲಿ 6963 ಕೋಟಿ ರೂ. ಸಾಲ ಬಾಕಿಯಿಟ್ಟುಕೊಂಡಿದೆಯಂತೆ. **ಕಪ್ಪು ಹಣದ ಮೇಲೆ ಮೋದಿಯವರ 'ಮಿಂಚಿನ ಪ್ರಹಾರ' ನಡೆದ 8 ದಿನಗಳ ನಂತರವೂ ಅತ್ತ ಲಕ್ಷಾಂತರ ಜನ ಬೀದಿಗಳಲ್ಲಿ ಎಸ್‌ಬಿಐ ಸೇರಿದಂತೆ ಎಲ್ಲ ಬ್ಯಾಂಕುಗಳ ಮುಂದೆ ತಮ್ಮದೇ ಹಣದಲಲಿ 2000 ರೂ.ಗಳನ್ನು ಪಡೆಯಲು ಮೈಲುದ್ದ ಸಾಲುಗಳಲ್ಲಿ ನಿಂತಿರುವಾಗಲೇ, ಮಲ್ಯನಿಂದ ಬರಬೇಕಾಗಿದ್ದ 1201 ಕೋಟಿ ರೂ.ಗಳನ್ನು ಎಸ್‌ಬಿಐ ಕೈಬಿಟ್ಟಿದೆ.**

ರಾಜ್ಯಸಭೆಯಲ್ಲಿ ಸೀತಾರಾಮ್ ಯೆಚೂರಿಯವರು ನೋಟುಗಳ ರದ್ದತಿಯ ಕ್ರಮವನ್ನು ಪ್ರಶ್ನಿಸಿ ಮಾತಾಡುವಾಗ ಈ ರೈಟ್-ಆಫ್‌ನ ಪ್ರಶ್ನೆಯನ್ನು ಎತ್ತಿದರು. ಅದೇ ರೀತಿ ವಿದೇಶಿ ವಂತಿಗೆ ನಿಯಂತ್ರಣ ಕಾಯ್ದೆ(ಎಫ್‌ಸಿಆರ್‌ಎ)ಯನ್ನು ಹಿಂದಿನಿಂದಲೇ ಲಾಗೂ ಆಗುವಂತೆ ತಿದ್ದುಪಡಿ ಮಾಡಿ ಬಿಜೆಪಿ ಈ ಕಾಯ್ದೆಯ ಉಲ್ಲಂಘನೆಯಿಂದ ತಪ್ಪಿಸಿಕೊಳುವಂತೆ ಮಾಡಿದ್ದನ್ನೂ ಪ್ರಸ್ತಾಪಿಸಿದರು. ಆಗ ಮಧ್ಯಪ್ರವೇಶಿಸಿ ಮಾತನಾಡಿದ ಹಣಕಾಸು ಮತ್ರಿಗಳು ಸಾಲ ರೈಟ್‌ಆಫ್ ಅಂದರೆ ಸಾಲ ಮನ್ನಾ ಅಲ್ಲ, ಅದು ಕೇವಲ ಒಂದು ತಾಂತ್ರಿಕ ಕ್ರಿಯೆ, ಬಾಬ್ತಿನಲ್ಲಿ ಮಾಡುವ ಬದಲಾವಣೆ ಅಷ್ಟೇ, ಅದನ್ನು ಇನ್ನು ಕೂಡ ವಸೂಲಿ ಮಾಡಬಹುದು ಎಂದರು. ಅದೇ ರೀತಿ ಎಫ್‌ಸಿಆರ್‌ಎ ತಿದ್ದುಪಡಿ ಕೂಡ ಕೇವಲ 'ತಾಂತ್ರಿಕ' ಕ್ರಮ ಎಂದು ಸಮರ್ಥಿಸಿಕೊಂಡರು.

ಆದರೆ ಇವು ತಾಂತ್ರಿಕ ಕ್ರಮಗಳಲ್ಲ, ಪ್ರಧಾನಿಗಳು ಯಾವುದರ ವಿರುದ್ಧ 'ಮಿಂಚಿನ ದಾಳಿ'ಯ ಬೆದರಿಕೆ ಹಾಕಿದ್ದಾರೋ ಅದನ್ನು ಮುಚ್ಚಿ ಹಾಕುವ 'ಕೈಚಳಕಗಳು ಎಂದು ಪರಿಣಿತರು ಹೇಳುತ್ತಾರೆ. ಇದು ಹಣಕಾಸು ಮಂತ್ರಿಗಳ ದಾರಿ ತಪ್ಪಿಸುವ ಹೇಳಿಕೆ ಎಂದಿರುವ ಸೀತಾರಾಮ್ ಯೆಚೂರಿಯವರು ಈ ಬಗ್ಗೆ ಒಂದು ವಿವರವಾದ ಸ್ಪಷ್ಟೀಕರಣ ನೀಡಿದ್ದಾರೆ.

ರೈಟ್ -ಆಫ್ ಎಂದರೆ ಹಣಕಾಸು ಮಂತ್ರಿಗಳು ಹೇಳಿರುವಂತೆ 'ಕಾರ್ಯ ನಿರ್ವಹಿಸುತ್ತಿರುವ ಆಸ್ತಿ' 'ಕಾರ್ಯ ನಿರ್ವಹಿಸದ ' ಅಂದರೆ ಸುಸ್ತಿ ಆಸ್ತಿ' ಎಂಬ ಬಾಬ್ತಿಗೆ ಬರುತ್ತದೆಯಷ್ಟೇ ಎಂದಿರುವುದು ಸರಿಯಲ್ಲ, ರೈಟ್-ಆಫ್ ಅಂದರೆ ಅದಾಗಲೇ ಸುಸ್ತಿಯಾಗಿರುವ ಸಾಲವನ್ನು ಲೆಕ್ಕ ಪುಸ್ತಕದಿಂದ ತೆಗೆಯುವುದು ಎಂದೇ ಅರ್ಥ ಎಂದು ಯೆಚೂರಿಯವರು ಹೇಳುತ್ತಾರೆ. ಈ ಬಗ್ಗೆ ಅವರು ರಿಝರ್ವ್ ಬ್ಯಾಂಕಿ(ಆರ್‌ಬಿಐ)ನ ಸುತ್ತೋಲೆಯನ್ನು ನೋಡುವುದು ಒಳ್ಳೆಯದು ಎಂದಿದ್ದಾರೆ.

ಅಲ್ಲದೆ ನಿವೃತ್ತ ಆರ್‌ಬಿಐ ಉಪಗವರ್ನರ್ ಕೆ ಸಿ ಚಕ್ರವರ್ತಿಯವರ ಪ್ರಕಾರ ಒಮ್ಮೆ ರೈಟ್-ಆಫ್ ಆದ ಸಾಲಗಳ ಬಗ್ಗೆ ನಂತರ ಬ್ಯಾಂಕುಗಳು ಮುತುವರ್ಜಿ ವಹಿಸುವುದಿಲ್ಲ, ಏಕೆಂದರೆ ಅವು ಅವರ ಬ್ಯಾಲೆಂಸ್ ಶೀಟನ್ನು ತಟ್ಟುವುದಿಲ್ಲ. ಇದು ಅಂಕಿ-ಅಂಶಗಳಿಂದಲೂ ಸಿದ್ಧವಾಗುತ್ತದೆ ಎನ್ನುತ್ತಾರೆ ಯೆಚೂರಿ. ಉದ್ದೇಶಪೂರ್ವಕ ಸಾಲ ಸುಸ್ತಿ ಮಾಡಿಕೊಂಡವರಲ್ಲಿ ಶಿಕ್ಷೆಗೊಳಗಾದವರು 2014-15 ರಲ್ಲಿ ಕೇವಲ 1.45ಶೇ. ಮೋದಿ ಸರಕಾರದ ಅಡಿಯಲ್ಲಿ 2015-16ರಲ್ಲಿ ಇದು ಇನ್ನೂ ಕೆಳಗೆ 1.14ಶೇ.ಕ್ಕೆ ಇಳಿದಿದೆ. **ಅಂದರೆ ರೈಟ್ ಆಫ್‌ಗೂ ಸಾಲ ಮನ್ನಾಕ್ಕೂ ವ್ಯತ್ಯಾಸವೇನಿಲ್ಲ- ಜನಗಳ ದುಡ್ಡನ್ನು ಚಮಚಾ ಬಂಡವಾಳಶಾಹಿಗಳಿಗೆ ಕೊಡಮಾಡುವ ಕ್ರಮವಲ್ಲದೆ ಬೇರೇನೂ ಅಲ್ಲ ಎನ್ನುತ್ತಾರೆ ಸೀತಾರಾಮ್ ಯೆಚೂರಿ.**

ಇನ್ನು ಎಫ್‌ಸಿಆರ್‌ಎ 'ತಾಂತ್ರಿಕ ಅಂಶ'ದ ಬಗ್ಗೆ ನೋಡೋಣ. ಬಿಜೆಪಿಯ ಮೇಲೆ ಅದು ಜನತಾ ಪ್ರಾತಿನಿಧ್ಯ ಕಾಯ್ದೆಗೆ ವಿರುದ್ಧವಾಗಿ ಬ್ರಿಟನ್ನಿನ ವೇದಾಂತ ಗುಂಪಿನಿಂದ 2014-12ರ ಅವಧಿಯಲ್ಲಿ ಕಾನೂನುಬಾಹಿರವಾಗಿ ನಿಧಿ ಪಡೆದಿದೆ ಎಂಬ ಆಪಾದನೆ ಬಂದಿತ್ತು. ಈ ಕೇಸು ಈಗಲೂ ಸುಪ್ರಿಂ ಕೋರ್ಟ್ ಮುಂದಿದೆ. ಈ ಹಿನೆಲೆಯಲ್ಲಿ ಮೋದಿ ಸರಕಾರ ಎಫ್‌ಸಿಆರ್‌ಎ ಗೆ ತಿದ್ದುಪಡಿ ತಂದು ವಿದೇಶಿ ಕಂಪನಿಗಳು ತಮ್ಮ ದೇಶೀ ಅಂಗಗಳ ಮೂಲಕ ಹಣ ನೀಡಬಹುದು ಎಂದು ಹಿಂದಿನಿಂದಲೇ ಅನ್ವಯವಾಗುವಂತೆ ತಿದ್ದುಪಡಿ ತರಲಾಯಿತು, ಅದು ಕೂಡ ಅದನ್ನು 'ಹಣಕಾಸು ಮಸೂದೆ' ಎಂದು ಹೆಸರಿಸಿ ರಾಜ್ಯಸಭೆಯ ಮಂಜೂರಾತಿ ಇಲ್ಲದಂತೆ ಮಾಡುವ ಕಸರತ್ತಿನ ಮೂಲಕ.

ಇಂತಹ ಮಂದಿ ಈಗ ಕಪ್ಪು ಹಣದ ಮೇಲೆ 'ಮಿಂಚಿನ ಪ್ರಹಾರ'ದ ಹೆಸರಲ್ಲಿ ಜನಗಳ ಮೇಲೆ ಸಮರ ಸಾರಿದ್ದಾರೆ.

ಈ ನಡುವೆ ಈ ಹಣಕಾಸು ವರ್ಷದ ಎರಡನೇ ತ್ರೈಮಾಸಿಕದಲ್ಲಿಯೂ ಕೆಟ್ಟ ಸಾಲಗಳು ರಾಶಿ ಬೀಳುತ್ತಿವೆ ಎಂದು ವರದಿಯಾಗಿದೆ. ಒಟ್ಟು 37 ಪಟ್ಟಿ ಮಾಡಿರುವ ಬ್ಯಾಂಕುಗಳ ಪೈಕಿ ಸಾರ್ವಜನಿಕ ವಲಯದ ಬ್ಯಾಂಕುಗಳಲ್ಲಿ ಸುಸ್ತಿಸಾಲಗಳ ಪ್ರಮಾಣದಲ್ಲಿ 4.98ಶೇ. ಹೆಚ್ಚಳವಾಗಿ 5.83 ಲಕ್ಷ ಕೋಟಿ ರೂ.ಗಳನ್ನು ತಲುಪಿದೆ. ಈ ಬಾರಿ ಖಾಸಗಿ ಬ್ಯಾಂಕುಗಳಲ್ಲಿ ಇದು 23.69ಶೇ.ದಷ್ಟು ಏರಿಕೆ ಕಂಡಿದೆ, ಅವುಗಳ ಸುಸ್ತಿ ಸಾಲಗಳ ಮೊತ್ತ 66,314 ಕೋಟಿ ರೂ. ಆಗಿದೆ.

ನೋಟಿನ ಸಂಕಟಗಳನ್ನು ಮತ್ತಷ್ಟು ಹೆಚ್ಚಿಸುವ ಕ್ರಮಗಳು

ಈ ಸಂಚಿಕೆ ಮುದ್ರಣಕ್ಕೆ ಹೋಗುವ ವೇಳೆಗೆ 500/1000ದ ನೋಟುಗಳನ್ನು ಕಾನೂನುಬಾಹಿರಗೊಳಿಸಿರುವ ಸರಕಾರ ಜನಗಳ ಮೇಲೆ ಮತ್ತಷ್ಟು ಪ್ರಹಾರಗಳನ್ನು ಮಾಡಿದೆ. ನೋಟುಗಳ ವಿನಿಮಯ ಮೊತ್ತವನ್ನು ಪ್ರತಿವ್ಯಕ್ತಿಗೆ 4500ರೂ.ನಿಂದ 2000ರೂ.ಗೆ ಇಳಿಸಿದೆ. ಅಂ-ದರೆ ತಮ್ಮ ಬೆವರಿನ ಹಣವನ್ನು ಪಡೆಯಲು ಇನ್ನೂ ಹೆಚ್ಚು ಸಮಯ ಕ್ಯೂನಲ್ಲಿ ಕಳೆಯಬೇಕು.

ಬ್ಯಾಂಕ್ ಖಾತೆ ತೆರೆಯಲು ಪಾನ್‌ಕಾರ್ಡ್‌ನ್ನು ಕಡ್ಡಾಯಗೊಳಿಸಿ ನಗರ ಮತ್ತು ಗ್ರಾಮೀಣ ಪ್ರದೇಶಗಳ ಬಡವರು ಬ್ಯಾಂಕ್ ಖಾತೆ ತೆರೆಯುವುದನ್ನು ಮತ್ತಷ್ಟು ಕಷ್ಟಕರಗೊಳಿಸಲಾಗಿದೆ. ಬಹುಪಾಲು ಅನೌಪಚಾರಿಕ ವಲಯದಲ್ಲೇ ಕೆಲಸ ಮಾಡುವ ನಗದು ರೂಪದಲ್ಲಿ ಕೂಲಿ ಪಡೆಯಲಾರದ ಬಡ ಕಾರ್ಮಿಕರು ಈಗ ಬ್ಯಾಂಕು ಖಾತೆಗಳನ್ನು ತೆರೆಯಲು ಮತ್ತಷ್ಟು ಪರದಾಡಬೇಕು.

ಸಹಕಾರಿ ಬ್ಯಾಂಕುಗಳು ನೋಟುಗಳನ್ನು ಸ್ವೀಕರಿಸಬಾರದು ಮತ್ತು ವಿನಿಮಯ ಮಾಡಬಾರದು ಎಂದು ವಿಧಿಸಿ ಸಹಕಾರಿ ವಲಯವನ್ನು ಹಾಳುಗೆಡಹುವ ಪ್ರಯತ್ನ ನಡೆಲಾಗಿದೆ.

ಇವೆಲ್ಲ ಜನಗಳ ಬಗ್ಗೆ ಸ್ವಲ್ಪವೂ ಕಾಲಜಿಯಿಲ್ಲದ ಕ್ರಮಗಳು ಎಂದು ಬಲವಾಗಿ ಖಂಡಿಸಿರುವ ಸಿಪಿಐ(ಎಂ) ಪೊಲಿಟ್‌ಬ್ಯುರೊ ಈ ನಿರ್ಧಾರಗಳನ್ನು ಕೈಬಿಡಬೇಕು ಎಂದು ಆಗ್ರಹಿಸಿದೆ. ಈ ಪ್ರಹಾರಗಳ ವಿರುದ್ಧ ಪ್ರತುಭಟನೆಗಳನ್ನು ತೀವ್ರಗೊಳಿಸಬೇಕು ಮತ್ತು ಒಂದು ಐಕ್ಯ ಆಂದೋಲನವನ್ನು ಕಟ್ಟಬೇಕು ಎಂದು ಕರೆ ನೀಡಿದೆ.

ಕಪ್ಪು ಹಣದ ವಿರುದ್ಧ 'ಮಿಂಚಿನ ಪ್ರಹಾರ'ದಲ್ಲಿ 8 ದಿನಗಳಲ್ಲಿ 47 ಬಲಿ

'ಹಫ್ಫಿಂಗ್‌ಟನ್ ಪೋಸ್ಟ್ ಎಂಬ ವೆಬ್ ಪತ್ರಿಕೆ ದೇಶದಲ್ಲಿ ಪ್ರಕಟವಾಗುವ ವಿವಿಧ ಪತ್ರಿಕೆಗಳಿಂದ ಕಲೆ ಹಾಕಿದ ಮಾಹಿತಿಗಳ ಪ್ರಕಾರ ನವಂಬರ್ 8ರಿಂದ 16ನೇ ತಾರೀಕಿನ ವರೆಗೆ ದೇಶದ ವಿವಿಧ ಭಾಗಗಳಲ್ಲಿ ನಡೆದ 47 ಸಾವುಗಳಿಗೆ ಮೋದಿಯವರ 'ದಿಟ್ಟ ಮಿ<ಚಿನ ಪ್ರಹಾರ' ನೇರ ಕಾರಣವಾಗಿದೆ. ಇವುಗಳಲ್ಲಿ ಹೆಚ್ಚಿನವರು ವಯಸ್ಸಾದವರು, ಅನಿವಾರ್ಯವಾಗಿ ಗಂಟೆಗಳ ಕಾಲ ಸರತಿಯ ಸಾಲಿನಲ್ಲಿ ನಿಲ್ಲಬೇಕಾಗಿ ಬಂದು ನಗದು ಕೈಸೇರುವ ಮೊದಲೇ ಪ್ರಾಣ ಬಿಟ್ಟವರು. ಇನ್ನು ಕೆಲವರು ಕೈಯಲ್ಲಿ ನಗದು ಸಿಗದೆ ಹತಾಶೆಯಿಂದ ಆತ್ಮಹತ್ಯೆ ಮಾಡಿಕೊಂಡವರು. ಕೆಲವರು, ಅದರಲ್ಲೂ ಮಕ್ಕಳು ನಗದು ಇಲ್ಲದೆ ಆಸ್ಪತ್ರೆ ಸೌಲಭ್ಯದಿಂದ ವಂಚಿತರಾಗಿ ಪ್ರಾಣ ಬಿಟ್ಟವರು, ಕೆಲವು ಪುಟ್ಟ ಮಕ್ಕಳು ಕೂಡ.


ಒಡಿಶಾದ ಸಂಬಲ್ಪುರದಲ್ಲಿ 2ವರ್ಷದ ಮಗು ಆಸ್ಪತ್ರೆಗೆ ಸೇರಿಸಲಾಗದೆ ಅಸು ನೀಗಿತು. ಅದರ ತಂದೆಯ ಬಳಿ 500ರೂ. ನೋಟು ಮಾತ್ರ ಇತ್ತು. ಆಟೋದವನು ಅವರನ್ನು ಆಸ್ಪತ್ರೆಗೆ ಒಯ್ಯಲು ನಿರಾಕರಿಸಿದ್ದ.

ಉತ್ತರಪ್ರದೇಶದ ಬುಲಂದ್‌ಶಹರ್‌ನಲ್ಲಿ ಕೈಲಾಶ್ ಹಾಸ್ಪಿಟಲ್‌ನ ಶಾಖೆಯಲ್ಲಿ ಒಂದು ಮಗು ಚಿಕಿತ್ಸೆ ದೊರೆಯದೆ ಸಾವಪ್ಪಿತು. ಅದರ ತಂದೆ-ತಾಯಿ ಬಳಿ ಹಳೆಯ ನೋಟುಗಳು ಮಾತ್ರ ಇದ್ದವು, 10,000ರೂ. ಅಡ್ವಾನ್ಸ್ ಮಾಡುವಂತೆ ಆಸ್ಪತ್ರೆಯವರು ಹೇಳಿದರು, ಅವರಿಗೆ ಸಾಧ್ಯವಾಗಲಿಲ್ಲ. ಈ ಕೈಲಾಶ್ ಹಾಸ್ಪಿಟಲ್ ಕೇಂದ್ರ ಸಂಸ್ಕೃತಿ ಮತ್ತು ಪ್ರವಾಸೋದ್ಯಮ ಮಂತ್ರಿ ಮಹೇಶ ಶರ್ಮಾರವರ ಒಡೆತನದ್ದು ಎಂದು ಹೇಳಲಾಗಿದೆ. ಆಸ್ಪತ್ರೆ ಅಡ್ವಾನ್ಸ್ ತೆರಲಾಗದ್ದರಿಂದ ಮಗು ಸತ್ತಿತು ಎಂಬುದನ್ನು ನಿರಾಕರಿಸಿದೆ ಎಂದು 'ಒನ್ ಇಂಡಿಯ' ವರದಿ ಮಾಡಿದೆಯಂತೆ.

ಇಬ್ಬರು ಬ್ಯಾಂಕ್ ನೌಕರರು, ಒಬ್ಬರು ಜವಾನ, ಇನ್ನೊಬ್ಬರು ಕ್ಯಾಷಿಯರ್ ಕೆಲಸದ ಒತ್ತಡದಿಂದಾಗಿ ಸಾವಪ್ಪಿದ್ದಾರೆ.

ಈ 47ರ ಪಟ್ಟಿಯಲ್ಲಿ ಕರ್ನಾಟಕದ ಇಬ್ಬರ ಹೆಸರುಗಳಿವೆ. ಚಿಕ್ಕಬಳ್ಳಾಪುರ ಜಿಲ್ಲೆಯ 43 ವರ್ಷದ ಜಂಗಾಲಪಲ್ಲಿ ಈಶ್ವರಮ್ಮ 15,000 ರೂ.ಗಳನ್ನು ಬ್ಯಾಂಕ್ ಖಾತೆಗೆ ಜಮಾ ಮಾಡಲು ಹೋಗಿದ್ದಾಗ ಅದು ಕಳವಾದ್ದರಿಂದ ಆತ್ಮಹತ್ಯೆ ಮಾಡಿಕೊಂಡರು ಎಂದು ವರದಿಯಾಗಿದೆ. ಕುಡುಕ ಗಂಡನ ಕಣ್ತಪ್ಪಿಸಿ ಆಕೆ ಈ ಹಣ ಇಟ್ಟುಕೊಂಡಿದ್ದರಂತೆ.

ಉಡುಪಿಯ 96 ವರ್ಷದ ಗೋಪಾಲ ಶೆಟ್ಟಿ ಕ್ಯೂನಲ್ಲಿ ನಿಂತಲ್ಲೇ ಕುಸಿದು ಪ್ರಾಣ ಬಿಟ್ಟಿದ್ದಾರೆ, ಬ್ಯಾಂಕ್ ತೆರೆಯುವ ಮೊದಲೇ ಸಾವು ಸಂಭವಿಸಿತು ಎಂದು ವರದಿಯಾಗಿದೆ. ಇವರು ಯಾರೂ ಕಪ್ಪು ಹಣದ ಭಯದಿಂದ ಪ್ರಾಣ ಬಿಟ್ಟವರಲ್ಲ ಎಂಬುದು ಗಮನಾರ್ಹ.



ವ್ಯಂಗ್ಯಚಿತ್ರ: ಅಧ್ವರ್ಯು, ಟೈಂಸ್ ಆಫ್ ಇಂಡಿಯಾ

ಚಿಕಲ್ತಾನಾದಲ್ಲಿ ನಗದುರಹಿತ ಆರ್ಥಿಕದ ಕನಸು ನನಸಾದ ಬಗೆ!

ಮಹಾರಾಷ್ಟ್ರದ ಔರಂಗಾಬಾದ್ ಪಟ್ಟಣಕ್ಕೆ ಹೊಂದಿಕೊಂಡಿರುವ ಚಿಕಲ್ತಾನಾ ಪ್ರಧಾನ ಮಂತ್ರಿಗಳ ನಗದುರಹಿತ ಕನಸನ್ನು ಸಾಕಾರಗೊಳಿಸಿದಂತೆ ಕಾಣುತ್ತದೆ ಎನ್ನುತ್ತಾರೆ ಪ್ರಖ್ಯಾತ ಪತ್ರಕರ್ತ ಪಿ. ಸಾಯಿನಾಥ್. ಹೌದು, ಇಲ್ಲಿ ಯಾರ ಬಳಿಯೂ ನಗದು ಇಲ್ಲ, ಬ್ಯಾಂಕುಗಳಲ್ಲೂ ಇಲ್ಲ, ಎಟಿಎಂಗಳಲ್ಲೂ ಇಲ್ಲ, ಸಾಲುಗಟ್ಟಿ ನಿಂತಿರುವ ಜನರ ಬಳಿಯಂತೂ ಖಂಡಿತಾ ಇಲ್ಲ. ಬ್ಯಾಂಕ್ ಶಾಖೆಗಳ ಹೊರಗೆ ವ್ಯಾನುಗಳಲ್ಲಿ ಕೂತಿರುವ ಪೋಲೀಸರ ಬಳಿಯೂ ಇಲ್ಲ.

ಆದರೆ ಖಿನ್ನರಾಗಬೇಡಿ, ಬೇಗನೇ ಅವರ ಬೆರಳುಗಳಲ್ಲಿ ಶಾಯಿಯ ಗುರುತು ಇರುತ್ತದೆ ಎನ್ನುತ್ತಾರೆ ಸಾಯಿನಾಥ್.

ಔರಂಗಾಬಾದ್‌ನ ಸ್ಟೇಟ್ ಬ್ಯಾಂಕ್ ಆಫ್ ಹೈದರಾಬಾದಿನ ಶಾಖೆಯಲ್ಲಿ ನೌಕರರು ತಮ್ಮ ಬಡ ಗಿರಾಕಿಗಳಿಗೆ ನಗದು ಹೊಂದಿಸಲು ಶ್ರಮ ಪಡುತ್ತಿದ್ದಾರೆ. ಆ ಪಟ್ಟಣದ ಸುಮಾರಾಗಿ ಎಲ್ಲ ಶಾಖೆಗಳಲ್ಲಿ ರಿಝರ್ವ್ ಬ್ಯಾಂಕಿಗೆ ಹಿಂದಕ್ಕೆ ಕಳಿಸಲು ಸಂಗ್ರಹಿಸಿಟ್ಟ ಹಳೆಯ 50ರೂ., 100ರೂ. ನೋಟುಗಳನ್ನು ಕೊಡಲಾಗುತ್ತಿದೆಯಂತೆ, ಇದು ಕಾನೂನಿಗೆ ವಿರುದ್ಧವಾದರೂ ಬಡಜನರಿಗೆ ನೆರವಾಗಲು ಉಳಿದ ಒಂದೇ ದಾ-ರಿಯಂತೆ!

ಕಪ್ಪು ಹಣದ ಮೇಲೆ 'ಮಿಂಚಿನ ಪ್ರಹಾರ' ನಡೆಸಿದ ದಿನದಿಂದ ಈ ಸರಕಾರ ಪ್ರತಿದಿನ ಎಂಬಂತೆ ಹೊಸ-ಹೊಸ ಮಿತಿಗಳನ್ನು ಹಾಕುತ್ತ ತನ್ನ 'ಉತ್ತಮ ಆಳ್ವಿಕೆ'ಯ ನಿಜ ಸ್ವರೂಪವನ್ನು ತೋರಿಸುವುದರೊಂದಿಗೆ, ಜನಗಳನ್ನು ಬಾಧಿಸುವ ಇಂತಹಕ್ರಮಕ್ಕೆ ಸರಿಯಾದ ತಯಾರಿಯನ್ನು ನಡೆಸಿಯೇ ಇಲ್ಲ ಎಂಬುದನ್ನು ಮತ್ತೆ-ಮತ್ತೆ ಸಾಬೀತು ಮಾಡುತ್ತಿದೆ ಎಂದು ಪರಿಣಿತರು ಮಾತ್ರವಲ್ಲ, ಜನಸಾಮಾನ್ಯರೂ ಹೇಳುವಂತಾಗಿದೆ.



ವ್ಯಂಗ್ಯಚಿತ್ರ:: ಗೋಕುಲ್, ಡೆಕ್ಕನ್ ಕ್ರಾನಿಕಲ್



ಕೆ.ಎಂ.ನಾಗರಾಜ್

500, 1000 ರೂ ನೋಟುಗಳ ರದ್ದತಿ – ಹುತ್ತವ ಬಡಿದರೆ ಹಾವು ಸಾಯುವುದೇ?

ನೋಟುಗಳ ರದ್ದತಿಯಾಗಿರುವುದು ಸಮಸ್ಯೆಯಲ್ಲ. ಸಮಸ್ಯೆ ಸೃಷ್ಟಿಯಾಗಿರುವುದು ರದ್ದತಿ ಕಾರ್ಯಕ್ರಮವನ್ನು ನಿರ್ವಹಿಸಲಾಗದ ಅಸಮರ್ಥತೆಯಿಂದ.
ಹದ್ದುಗಳ ತಂಟೆಗೆ ಹೋಗದೆ ಗುಬ್ಬಿಗಳ ಮೇಲೆ ಎರಗಿದ ಪರಿಣಾಮಗಳು ಭೀಕರವಾಗಿ ಅನಾವರಣಗೊಳ್ಳುತ್ತಿವೆ. ಅವು ಹದ್ದುಗಳ ತಂಟೆಗೆ ಏಕೆ ಹೋಗುತ್ತಿಲ್ಲ ಎಂಬ ಪ್ರಶ್ನೆಯತ್ತವೂ ಗಮನ ಹರಿಸುವಂತೆ ಮಾಡಬೇಕಾಗಿದೆ.

ನವೆಂಬರ್ ಎಂಟರ ಮಧ್ಯರಾತ್ರಿಯಿಂದ ಜಾರಿಯಾಗುವಂತೆ 500 ಮತ್ತು 1000 ರೂಪಾಯಿ ನೋಟುಗಳ ಚಲಾವಣೆಯನ್ನು ರದ್ದುಪಡಿಸಿರುವುದಾಗಿ ಪ್ರಧಾನ ಮಂತ್ರಿಯವರು ಘೋಷಣೆಮಾಡಿದ್ದರು. ”ಕಪ್ಪು ಹಣಹೊಂದಿರುವವರ ಬಳಿ 500 ಮತ್ತು 1000 ರೂಪಾಯಿ ನೋಟುಗಳಿವೆ, 500 ಮತ್ತು 1000ರ ಮುಖ ಬೆಲೆಯ ಖೋಟಾ ನೋಟುಗಳು ಪಾಕೀಸ್ತಾನದಿಂದ ಬರುತ್ತಿವೆ, ಭಯೋತ್ಪಾದನೆಗೆ ಹೆಚ್ಚು ಮುಖ ಬೆಲೆಯ ನೋಟುಗಳು ಬಳಕೆಯಾಗುತ್ತಿವೆ ಮತ್ತು ಅವು ಲಂಚಕೋರರಿಗೆ ವ್ಯವಹರಿಸಲು ಸುಲಭವಾಗಿವೆ. ಈ ಎಲ್ಲ ಅಂಶಗಳೂ ಜನ ಸಾಮಾನ್ಯರನ್ನು, ಅದರಲ್ಲೂ ಕಡು ಬಡವರನ್ನು ಬಹಳವಾಗಿ ತಟ್ಟುತ್ತಿವೆ. ಆದ್ದರಿಂದ, 500 ಮತ್ತು 1000 ರೂಪಾಯಿ ನೋಟುಗಳ ಚಲಾವಣೆಯನ್ನು ರದ್ದುಪಡಿಸಿದರೆ ಏಕ ಕಾಲದಲ್ಲಿ ಈ ಎಲ್ಲವನ್ನೂ ನಿಗ್ರಹಿದಂತಾಗುತ್ತದೆ” ಎಂದಿದ್ದರು ಮೋದಿ. ಮೇಲ್ನೋಟದಲ್ಲಿ, ಇವೆಲ್ಲವೂ ಘನವಾದ ಉದ್ದೇಶಗಳೇ. ಕಾಳ ಧನಿಕರ ಮೇಲೆ ಕ್ರಮ ಜರುಗಿಸುವುದು ಸರಿಯಾದ ಕ್ರಮವೇ.ಆದರೆ, ಮೋದಿಯವರ ಮಾತಿನಲ್ಲಿ ಹುರುಳಿಲ್ಲ. ನೋಟುಗಳ ರದ್ದತಿ ಇಡೀ ಜನಜೀವನವನ್ನೇ ಅಸ್ತವ್ಯಸ್ತಗೊಳಿಸಿದೆ, ಆದರೆ ಕಾಳ ಧನಿಕರನ್ನು ಬಗ್ಗುಬಡಿಯುವ ಘೋಷಿತ ಕೆಲಸವನ್ನು ಮಾಡಿಲ್ಲ.

ಬಹುಶಃ ಅದು ಅವರ ನಿಜುದ್ದೇಶವೂ ಆಗಿಲ್ಲವೇನೋ. ಏಕೆಂದರೆ ಕಾಳಧನ ಮೂಲ ಮತ್ತು ಪ್ರಸಾರದ ಬಗ್ಗೆ ಈಗ ಸಾಕಷ್ಟು ಅಧ್ಯಯನಗಳಾಗಿದ್ದು, ಅವುಗಳತ್ತ ಸರಕಾರ ಏನೇನೂ ಗಮನ ಹರಿಸದಿರುವುದನ್ನು ಅನೇಕ ರಾಜಕೀಯ ವಿಶ್ಲೇಷಕರು ಗಮನಿಸಿದ್ದಾರೆ.

ಮುಂದಿನ ಕೆಲವು ತಿಂಗಳುಗಳಲ್ಲಿ ಉತ್ತರ ಪ್ರದೇಶ, ಪಂಜಾಬ್ ಮತ್ತಿತರ ರಾಜ್ಯಗಳಲ್ಲಿ ನಡೆಯಲಿರುವ ವಿಧಾನ ಸಭಾ ಚುನಾವಣೆಗಳಲ್ಲಿ ಬಿಜೆಪಿಗೆ ಹಿನ್ನಡೆಯಾಗುವ ಸಂಭವದಿಂದ ತಪ್ಪಿಸಿಕೊಳ್ಳಲು ತಮಗೆ ಮಾತ್ರ ಅನುಕೂಲವಾಗುವಂತೆ ಎಲ್ಲಾ ಬಂದೋಬಸ್ತ್ ಮಾಡಿಕೊಂಡು, ತಮ್ಮ ಎದುರಾಳಿ ಪಕ್ಷಗಳು ಮಾಮೂಲಿನಂತೆ ಹಣದ ಹೊಳೆ ಹರಿಸಿ ಚುನಾವಣೆ ಗೆಲ್ಲಲು ಸಾಧ್ಯವಾಗದಂತೆ ತಡೆಯುವ ಗುಪ್ತ ಅಜೆಂಡಾದೊಂದಿಗೆ ಮೋದಿ ಸರ್ಕಾರವು 500 ಮತ್ತು 1000 ರೂಪಾಯಿ ನೋಟುಗಳ ಚಲಾವಣೆಯನ್ನು ರದ್ದುಪಡಿಸಿದೆ ಎಂಬ ಅನುಮಾನಗಳಿವೆ.

ನೋಟುಗಳ ರದ್ದತಿಯಿಂದ ಉಂಟಾಗಿರುವ ಹಲವಾರು ಸಮಸ್ಯೆಗಳು, ಆರ್ಥಿಕ ಅರಾಜಕತೆ, ಹಳೆಯ ನೋಟುಗಳನ್ನು ಬದಲಾಯಿಸಿಕೊಳ್ಳಲು ಜನ ಪರದಾಟ, ಈ ಕ್ರಮದ ಸಾಧಕ–ಬಾಧಕಗಳ ಬಗ್ಗೆ ನಿಜವಾಗಿಯೂ ಈ ಸರ್ಕಾರಕ್ಕೆ ಅರಿವಿತ್ತೇ ಎಂಬ ಪ್ರಶ್ನೆಯನ್ನೂ ಎತ್ತಿದೆ.

ಮೂಲಭೂತವಾಗಿ ಇದು ಕಪ್ಪು ಹಣ ಎಂದರೇನು ಎಂಬ ಮೂಲಭೂತ ಪ್ರಶ್ನೆ ಕೇಳುವಂತೆ ಮಾಡಿದೆ.

ಕಪ್ಪು ಹಣ ಎಂದರೇನು?

ಸಂಪಾದನೆಯಾದ ಹಣದ ಮೇಲೆ ತೆರಿಗೆ ಕೊಡದೆ ಅದನ್ನು ಬಂಗಾರ, ಭೂಮಿ, ಮನೆ, ಇತರೆ ಬೆಲೆಬಾಳುವ ಆಸ್ತಿಗಳು, ಬೇನಾಮಿ ಆಸ್ತಿಗಳು, ವಿದೇಶಿ ಬ್ಯಾಂಕ್ ಡಿಪಾಸಿಟ್‌ಗಳಲ್ಲಿ ಹೂಡಿಕೆಯಾದ ಮತ್ತು ಹೊರ ದೇಶಗಳ ತೆರಿಗೆ ತಾಣಗಳಲ್ಲಿ ಅಡಗಿಸಿಟ್ಟ ಎಲ್ಲ ಹಣವೂ ಕಪ್ಪು ಹಣವೇ.

ಈ ಕ್ರಮದಿಂದ ಕಪ್ಪು ಹಣ ಹೊರಬರಬಹುದೇ?

ಬರಬಹುದು. ಆದರೆ ಅದರ ಪ್ರಮಾಣ ಬಹಳ ಕಡಿಮೆ ಏಕೆಂದರೆ, ನಗದು ರೂಪದಲ್ಲಿರುವ ಕಪ್ಪು ಹಣದ ಪ್ರಮಾಣ ಸಣ್ಣದು. ಕಪ್ಪು ಹಣ ಉಳ್ಳವರಲ್ಲಿ ಎಲ್ಲೋ ಕೆಲವರು ತೆರಿಗೆ ಬಲೆಯೊಳಗೆ ಬೀಳುತ್ತಾರೆ. ಒಟ್ಟು ತೆರಿಗೆ ಸಂಗ್ರಹ ಹೆಚ್ಚಾಗುತ್ತದೆ. ಅಷ್ಟೇ.ಈ ಸರ್ಜಿಕಲ್ ಸ್ಟ್ರೈಕ್‌ನಿಂದ ಸಂಭವಿಸುವ ನಷ್ಟಕ್ಕೆ ಹೋಲಿಸಿದರೆ, ಲಾಭ ಏಷ್ಟು ಎಂಬುದು ಅಳಿಯನ ಕುರುಡು ಬೆಳಗಾದರೆ ಬಯಲಾಗುವ ಹಾಗೆ, ನಂತರ ತಿಳಿಯುತ್ತದೆ.

ವಾಸ್ತವವಾಗಿ ಕಪ್ಪು ಹಣದ ಪ್ರಧಾನ ಮೂಲಗಳು ಅಡಗಿಸಿಟ್ಟ ನೋಟುಗಳಲ್ಲ, ಅದು ಇನ್ನೂ ಹಲವು ಹೆಚ್ಚು ವ್ಯಾಪಕವಾದ ಸ್ವರೂಪಗಳಲ್ಲಿ ಇದೆ ಎಂಬುದು ಈಗ ಸಾಮಾನ್ಯ ಜ್ಞಾನ. ಕೆಲವನ್ನು ನೋಡೋಣ.

ಪನಾಮಾ ಕಾಳ ಧನಿಕರು:

ಲ್ಯಾಟಿನ್‌ಅಮೆರಿಕಾದ ಪನಾಮ ದೇಶದ ಮೊಸ್ಯಾಕ್ ಫೋನ್ಸೇಕಾ ಎಂಬ ಸಂಸ್ಥೆಯು ಸೃಷ್ಟಿಸಿದ ಬೋಗಸ್ ಕಂಪೆನಿಗಳಲ್ಲಿ ರಹಸ್ಯವಾಗಿ ಹೂಡಿಕೆ ಮಾಡಿರುವ ಅಮಿತಾಬ್ ಬಚ್ಚನ್, ಐಶ್ವರ್ಯ ರೈ, ಡಿಎಲ್‌ಎಫ್‌ನ ಕೆ.ಪಿ. ಸಿಂಗ್, ಪ್ರಧಾನ ಮಂತ್ರಿ ಮೋದಿಯವರ ಪರಮಾಪ್ತ ಗೌತಮ್ ಅದಾನಿಯವರ ಅಣ್ಣ ವಿನೋದ್ ಅದಾನಿ ಮುಂತಾದ ಸುಮಾರು 500 ಮಂದಿ ಭಾರತೀಯರ ಸಾವಿರಾರು ಕೋಟಿಹಣ ತೊಡಗಿಸಿದ್ದಾರೆ ಎಂಬ ವರದಿ ಇತ್ತೀಚೆಗೆ ಪ್ರಕಟವಾಯಿತು. ವಿಶ್ವದ ಶ್ರೀಮಂತರು ತಾವು ಗಳಿಸಿರುವ ಕಪ್ಪು ಹಣವನ್ನು ರಹಸ್ಯವಾಗಿ ಹೂಡಿಕೆ ಮಾಡಲು ಅನುವಾಗುವಂತೆ ಮೊಸ್ಯಾಕ್ ಫೋನ್ಸೇಕಾ ಸಂಸ್ಥೆಯು 2,14,000 ಬೋಗಸ್ ಕಂಪೆನಿಗಳನ್ನು ಸೃಷ್ಟಿಸಿ, ಆ ಕಂಪೆನಿಗಳಲ್ಲಿ ಹೂಡಿಕೆ ಮಾಡುವ ಮತ್ತು ಅದನ್ನು ಗುಟ್ಟಾಗಿಡುವ ಒಂದು ಸರಳ ವ್ಯವಸ್ಥೆ ಕಲ್ಪಿಸಿಕೊಟ್ಟಿದೆ. ಇವುಗಳಲ್ಲಿ ತೊಡಗಿಸುವ ಹಣ ಅಚ್ಚ ಕಪ್ಪು ಹಣವೇ. ಹೀಗೆ ಹಣ ತೊಡಗಿಸಿದ ಐಶ್ವರ್ಯ ರೈ ಮುಂತಾದವರು ಈಗ ಮೋದಿ ಸರಕಾರ 500/1000ರೂ.ಗಳ ಚಲಾವಣೆ ನಿಲ್ಲಿಸಿರುವುದನ್ನು ‘ಸ್ವಾಗತಿಸಿ’ರುವುದು ಗಮನಾರ್ಹ.

ನೋಟುಗಳನ್ನು ಬದಲಾಯಿಸಿಕೊಳ್ಳಲು ಬ್ಯಾಂಕ್‌ಗಳ ಮುಂದೆ ಕ್ಯೂ ನಿಂತಿರುವ ಎಲ್ಲರನ್ನೂ ಕಾಳ ಧನಿಕರೆಂದು ಹೀಯಾಳಿಸುವವರು ಪನಾಮಾ ಕಾಳ ಧನಿಕರ ಬಗ್ಗೆ ಬಾಯಿ ಬಿಡುತ್ತಿಲ್ಲ. ಇದು ಕಾಳಧನದ ವಿರುದ್ಧ ಹೋರಾಡುವವರ ಲಕ್ಷಣವೆ?

ಪಿ ನೋಟ್ ಹೂಡಿಕೆದಾರರು:

ಪಿ ನೋಟ್‌ಗಳು ಅಥವ ಪಾರ್ಟಿಸಿಪೇಟರಿ ನೋಟ್‌ಗಳು ಎಂದರೆ ಭಾರತೀಯ ಶೇರು ಮಾರುಕಟ್ಟೆಗಳಲ್ಲಿ ನೋಂದಣಿ ಮಾಡಿಕೊಳ್ಳದೆ, ಅಂದರೆ ಹೂಡಿಕೆದಾರರ ವಿವರಗಳನ್ನು ಕೊಡದೆ ವಿದೇಶಗಳಿಂದ ಶೇರುಗಳನ್ನು ಕೊಳ್ಳಲು ಇರುವ ಒಂದು ವ್ಯವಸ್ಥೆ. ಇದನ್ನು ವಿದೇಶಿ ನೇರ ಹೂಡಿಕೆಯ ಹೆಸರಿನಲ್ಲಿ ಮಾರಿಷಸ್ ತೆರಿಗೆದಾಣದಿಂದ ಭಾರತದಲ್ಲಿ ತೆರಿಗೆಯಿಂದ ತಪ್ಪಿಸಿಕೊಳ್ಳುವ ಕಪ್ಪು ಹಣವನ್ನು ಬಿಳಿಯಾಗಿಸಲು ಬಳಸಲಾಗುತ್ತಿದೆ. ಈ ಪಿ ನೋಟ್‌ಗಳ ಮೂಲಕ ಭಾರತಕ್ಕೆ ಸಾವಿರಾರು ಕೋಟಿ ರೂಪಾಯಿಗಳ ಕಪ್ಪು ಹಣ ಹರಿದು ಬಂದಿದೆ. ಕಪ್ಪು ಹಣವನ್ನು ತಡೆಯುವ ವಿಷಯದಲ್ಲಿ ಪ್ರಾಮಾಣಿಕವಾಗಿರುವ ಯಾವುದೇ ಸರಕಾರ ಈ ಕಳ್ಳ ದಾರಿಯತ್ತ ಗಮನ ಹರಿಸಲೇ ಬೇಕು. ಪಿ–ನೋಟ್‌ಗಳನ್ನು ಈ ಹಿಂದೆ 2007ರಲ್ಲಿ ಯುಪಿಎ–1 ಸರಕಾರ ನಿಷೇಧಿಸಿತ್ತು. ಜಾಗತಿಕ ಹಣಕಾಸು ಬಿಕ್ಕಟ್ಟಿನ ಹಿನ್ನೆಲೆಯಲ್ಲಿ ಆ ನಿಷೇಧವನ್ನು ತೆಗೆಯಲಾಗಿತ್ತು. ಈಗ ಮತ್ತೆ ಅದನ್ನು ಮತ್ತೆ ಹಾಕಬೇಕೆನ್ನುವ ಬೇಡಿಕೆಯ ಬಗ್ಗೆ ಮೋದಿ ಸರಕಾರ ಜಾಣ ಕಿವುಡು ಪ್ರದರ್ಶಿಸುತ್ತಿರುವುದು ಕಪ್ಪು ಹಣದ ವಿರುದ್ಧ ಅದರ ಘೋಷಿತ ಸಮರ ಎಷ್ಟು ಪ್ರಾಮಾಣಿಕವಾದದ್ದು ಎಂಬ ಪ್ರಶ್ನೆಯನ್ನು ಸಹಜವಾಗಿಯೇ ಎಬ್ಬಿಸುತ್ತದೆ.



ವ್ಯಂಗ್ಯಚಿತ್ರ: ಉನ್ನಿ, ಇಂಡಿಯನ್ ಎಕ್ಸ್‌ಪ್ರೆಸ್

ತೆರಿಗೆದಾಣಗಳಲ್ಲಿ ಹಣವಿಟ್ಟವರು:

ಸ್ವಿಜರ್ಲ್ಯಾಂಡ್ ಮತ್ತು ಇತರ ನಲವತ್ತಕ್ಕೂ ಹೆಚ್ಚಿನ ಸಂಖ್ಯೆಯ ತೆರಿಗೆದಾಣಗಳಲ್ಲಿ ಸಾವಿರಾರು ಮಂದಿ ಭಾರತೀಯರು ಲಕ್ಷಾಂತರ ಕೋಟಿ ರೂಪಾಯಿಗಳನ್ನು ಅಡಗಿಸಿಟ್ಟಿದ್ದಾರೆ, ವಾಸ್ತವವಾಗಿ ಕಪ್ಪು ಹಣದಲ್ಲಿ ಇದರದ್ದೇ ಸಿಂಹಪಾಲು.ಇದನ್ನೇ ತಾನೇ ಅಧಿಕಾರಕ್ಕೆ ಬಂದ ನಂತರ ವಾಪಸ್ ತಂದು ಪ್ರತಿಯೊಬ್ಬ ಭಾರತೀಯ ಪ್ರಜೆಯ ಖಾತೆಗೆ ಹದಿನೈದು ಲಕ್ಷ ರೂ ಜಮಾ ಮಾಡುವುದಾಗಿ ಮೋದಿಯವರು ವಚನ ನೀಡಿದ್ದು. ಆ ನಿಟ್ಟಿನಲ್ಲಿ ಈ ಸರಕಾರ ಕೈಗೊಂಡ ಕ್ರಮಗಳೇನು? ದೊಡ್ಡ ಸೊನ್ನೆ.

ಕಪ್ಪು ಹಣದ ಹಾವಳಿ ತಗ್ಗುವುದೆ?

ನಮ್ಮ ಅರ್ಥವ್ಯವಸ್ಥೆಯಲ್ಲಿ ಸೇರಿಕೊಂಡಿರುವ ಕಪ್ಪು ಹಣದಲ್ಲಿ ಸುಮಾರು ಶೇ.10 ಭಾಗ ನಗದು ರೂಪದಲ್ಲಿದೆ ಮತ್ತು ಉಳಿದ ಶೇ.90 ಭಾಗ ಮೇಲೆ ಹೇಳಿದ ಬೇರೆ ಬೇರೆ ರೂಪಗಳಲ್ಲಿ ದೇಶದ ಒಳಗೂ ಮತ್ತು ವಿದೇಶಗಳಲ್ಲಿಯೂ ಹೂಡಿಕೆಯಾಗಿದೆ. ನಗದು ರೂಪದಲ್ಲಿರುವ ಕಪ್ಪು ಹಣದ ಮೇಲೆ ನೋಟುಗಳ ರದ್ದತಿಯ ಪರಿಣಾಮ ಸ್ವಲ್ಪ ಮಟ್ಟಿಗೆ ಬೀಳುತ್ತದೆ. ಉಳಿದ ಶೇ.90 ಭಾಗದ ಮೇಲೆ – ಬಂಗಾರ, ವಿದೇಶಿ ಕರೆನ್ಸಿ, ಭೂಮಿ, ಮನೆ, ಮತ್ತು ಬೇನಾಮಿ ಆಸ್ತಿಗಳಲ್ಲಿ ಹೂಡಿಕೆ ಮಾಡಿರುವವರು, ತೆರಿಗೆದಾಣಗಳಲ್ಲಿ ಲಕ್ಷಾಂತರ ಕೋಟಿ ರೂಪಾಯಿ ಅಡಗಿಸಿಟ್ಟಿರುವ ಪನಾಮ ಕಾಳ ಧನಿಕರ ಮೇಲೆ ಯಾವ ಪರಿಣಾಮವೂ ಆಗುವುದಿಲ್ಲ.

ಕಪ್ಪು ಹಣ ಸಾಚಾ ಆಗುವುದು ಸುಲಭ

ಕಪ್ಪು ಹಣದ ವಿರುದ್ಧ ಸಾರಿರುವ ಸಮಯದಲ್ಲೇ ಅಡ್ಡದಾರಿಯ ಮೂಲಕ ಕಪ್ಪು ಹಣ ಸಾಚಾಗೊಳಿಸುವ ಕಾರ್ಯಭರದಿಂದ ಸಾಗುತ್ತಿದೆ ಎಂಬುದನ್ನು ಕುಟುಕು ಕಾರ್ಯಾಚರಣೆ ನಡೆಸಿದ ‘ಇಂಡಿಯಾ ಟುಡೆ’ ಟಿ.ವಿಚಾನೆಲ್ ಬಯಲು ಮಾಡಿದೆ. ಅದರ ಸಾರಾಂಶ ಹೀಗಿದೆ: ಐದು ಕೋಟಿ ಮೊತ್ತದ 500 ಮತ್ತು 1000 ರೂಪಾಯಿ ನೋಟುಗಳನ್ನು 50% ಕಮಿಷನ್ ಮೇಲೆ ತಕ್ಷಣ ಬದಲಿಸಿ ಹೊಸ ನೋಟುಗಳನ್ನು ಪಡೆಯಬಹುದು. 30%ಕಮಿಷನ್ ಮೇಲೆ ಬಂಗಾರ ಕೊಳ್ಳಬಹುದು. ರಿಯಲ್ ಎಸ್ಟೇಟ್(ಮನೆ ಕೊಳ್ಳುವ) ವ್ಯವಹಾರಗಳ ಮೂಲಕ 1–2 ವರ್ಷಗಳ ಕಾಲಾವಕಾಶದಲ್ಲಿ 1–2 ಕೋಟಿ ಕಪ್ಪು ಹಣವನ್ನು ಸಾಚಾ ಹಣವನ್ನಾಗಿಸಿಕೊಳ್ಳಬಹುದು. ಹೊಸ ಕಂಪೆನಿಗಳನ್ನು ಸೃಷ್ಟಿಸುವ ಮೂಲಕ ಚಾರ್ಟರ್ಡ್ ಅಕೌಂಟೆಂಟ್‌ಗಳು 30% ಕಮಿಷನ್ ಮೇಲೆ ಕಪ್ಪು ಹಣವನ್ನು ಸಾಚಾ ಹಣವನ್ನಾಗಿ ಬದಲಾಯಿಸಿಕೊಡುತ್ತಾರೆ.

ಭೀಕರ ಪರಿಣಾಮಗಳು

ನೋಟುಗಳ ರದ್ದತಿಯಾಗಿರುವುದು ಸಮಸ್ಯೆಯಲ್ಲ. ಸಮಸ್ಯೆ ಸೃಷ್ಟಿಯಾಗಿರುವುದು ರದ್ದತಿ ಕಾರ್ಯಕ್ರಮವನ್ನು ಸರಿಯಾಗಿ ನಿರ್ವಹಿಸದಿರುವುದರಿಂದ. ಹದ್ದುಗಳ ತಂಟೆಗೆ ಹೋಗದೆ ಗುಬ್ಬಿಗಳ ಮೇಲೆ ಎರಗಿದ ಪರಿಣಾಮಗಳು ಭೀಕರವಾಗಿ ಅನಾವರಣಗೊಳ್ಳುತ್ತಿವೆ. ಬ್ಯಾಂಕಿನಿಂದ ತಮ್ಮ ಹಣ ಪಡೆಯುವ ಪ್ರಯಾಸದಲ್ಲಿ ಈಗಾಗಲೇ 47 ಮಂದಿ ಸಾವಿಗೀಡಾಗಿದ್ದಾರೆ ಎಂದು ವರದಿಯಾಗಿದೆ. ●

ಸರಕಾರದ ಕೆಲಸ ಪ್ರಾಮಾಣಿಕ ತೆರಿಗೆ ಆಡಳಿತವನ್ನು ಕೊಡುವುದು, ಸಾಮಾನ್ಯ ಜನರನ್ನು ಕ್ರಿಮಿನಲ್‌ಗಳಂತೆ ಕಂಡು ತಮ್ಮದೇ ಹಣ ಪಡೆಯಲು ಸರತಿಯ ಸಾಲಿನಲ್ಲಿ ನಿಂತು ಅರ್ಜಿಗಳನ್ನು ತುಂಬಿಸುವಂತೆ ಮಾಡುವುದಲ್ಲ – ಪ್ರತಿಷ್ಠಿತ ನಾಗರಿಕರ ಟೀಕೆ

ಜನಗಳ ದೈನಂದಿನ ಅಗತ್ಯಗಳಿಗೆ ಬೇಕಾದಷ್ಟು ಹಣ ಒದಗುವಂತೆ ಮಾಡಿ, ಇಲ್ಲವೇ ಈ ಅನಾಣ್ಯೀಕರಣದ ಕ್ರಮವನ್ನು ಸದ್ಯಕ್ಕೆ ನಿಲ್ಲಿಸಿ ಅಥವ ಹಿಂತೆಗೆದುಕೊಳ್ಳಿ ಎಂದು ದೇಶದ ಐವತ್ತಕ್ಕೂ ಹೆಚ್ಚು ಪ್ರತಿಷ್ಠಿತ ನಾಗರಿಕರು ಒಂದು ಜಂಟಿ ಹೇಳಿಕೆಯ ಮೂಲಕ ಸರಕಾರವನ್ನು ಒತ್ತಾಯಿಸಿದ್ದಾರೆ. ಆರ್ಥಿಕ ತಜ್ಞರಾದ ಪ್ರೊ. ಪ್ರಭಾತ್ ಪಟ್ನಾಯಕ್, ಡಾ. ಸಿ.ಪಿ.ಚಂದ್ರಶೇಖರ್, ಪ್ರೊ. ಜಯತಿ ಘೋಷ್, ಪ್ರೊ.ಉತ್ಸಾ ಪಟ್ನಾಯಕ್, ಪ್ರಖ್ಯಾತ ವಿಶ್ಲೇಷಕ ಹರೀಶ್ ಮಂದರ್, ಲೇಖಕಿ ನಯನತಾರಾ ಸೆಹಗಲ್, ಈ ವರ್ಷದ ಮ್ಯಾಗ್ಸೆಸೆ ಪಾರಿತೋಷಕ ಪಡೆದಿರುವ ಜೆಜವಾಡ ವಿಲ್ಸನ್ ಮತ್ತು ಟಿ.ಎಂ.ಕೃಷ್ಣ ಮುಂತಾದವರು ಇದಕ್ಕೆ ಸಹಿ ಹಾಕಿದ್ದಾರೆ.

ಭ್ರಷ್ಟಾಚಾರ, ಕಪ್ಪುಹಣ ಭಯೋತ್ಪಾದನೆಗೆ ನೆರವಾಗುವ ಖೋಟಾ ನೋಟುಗಳು ಇವೆಲ್ಲವುಗಳ ವಿರುದ್ಧ ಕಠಿಣ ಕ್ರಮಗಳಿಗೆ ತಮ್ಮ ಸಂಪೂರ್ಣ ಬೆಂಬಲವಿದೆ, ಆದರೆ 500/1000ರೂ.ಗಳ ನೋಟುಗಳ ಅನಾಣ್ಯೀಕರಣ ಸರಿಯಾಗಿ ಯೋಚಿಸದೆ ಕೈಗೊಂಡಿರುವ ಕ್ರಮ ಎಂದು ಅಭಿಪ್ರಾಯ ಪಟ್ಟಿರುವ ಈ ಪ್ರತಿಷ್ಠಿತರು ಇದು ಹೇಗೆ ಕಪ್ಪು ಹಣದ ಸಮಸ್ಯೆಯನ್ನು ಎದುರಿಸಲಾರದು ಎಂಬುದಕ್ಕೆ ಒಂಭತ್ತು ಕಾರಣಗಳನ್ನು ಪಟ್ಟಿ ಮಾಡಿದ್ದಾರೆ.

ಕಳೆದ ಮೂರು ವರ್ಷಗಳಲ್ಲಿ 1.14ಲಕ್ಷ ಕೋಟಿ ರೂ.ಗಳ ದೊಡ್ಡ ವ್ಯವಹಾರಸ್ಥರ ಬ್ಯಾಂಕ್ ಸಾಲಗಳನ್ನು ಮನ್ನಾ ಮಾಡಿರುವುದು, ಅವರ ಹೆಸರುಗಳನ್ನು ಮತ್ತು ವಿದೇಶಿ ಬ್ಯಾಂಕುಗಳಲ್ಲಿ ಹಣ ಇಟ್ಟಿರುವವರ ಹೆಸರುಗಳನ್ನು ಸಾರ್ವಜನಿಕಗೊಳಿಸಲು ನಿರಾಕರಿಸುತ್ತಿರುವುದು ಕಪ್ಪು ಹಣದ ವಿರುದ್ಧ ಸಮರದ ನಡಸಬೇಕಾಗಿದೆ ಎನ್ನುವವರ ಪ್ರಾಮಾಣಿಕತೆಯನ್ನು ಪ್ರಶ್ನಾರ್ಹಗೊಳಿಸಿದೆ ಎಂಬ ಇಂಗಿತವನ್ನು ವ್ಯಕ್ತಗೊಳಿಸಿರುವ ಈ ಜಂಟಿ ಹೇಳಿಕೆ ಪಶ್ಚಿಮ ಬಂಗಾಲದ ಬಿಜೆಪಿ ಘಟಕ ಈ ಕ್ರಮದ ಪ್ರಕಟಣೆಯ ಸ್ವಲ್ಪವೇ ಮೊದಲು 3 ಕೋಟಿ ರೂ.ಗಳನ್ನು ಜಮಾ ಮಾಡಿರುವ ಬಗ್ಗೆ, 2.5ಲಕ್ಷ ರೂ.ಗಳಿಗಿಂತ ಹೆಚ್ಚಿನ ಪ್ರಮಾಣದಲ್ಲಿ ನೋಟುಗಳ ವಿನಿಮಯ ಮಾಡಿದರೆ ತೆರಿಗೆ ತಪ್ಪಿಸಿದ ದಂಡ ತೆರಬೇಕು ಎಂದು ಹೇಳಿರುವುದೇಕೆ ಎಂಬುದನ್ನು ಪ್ರಶ್ನಿಸಿದೆ. ಚುನಾವಣೆಗಳಲ್ಲಿ ಹಣದ ಪ್ರಾಬಲ್ಯದ ಬಗ್ಗೆ ಆತಂಕ ಸಹಜವೇ. ಆದರೆ ಅದನ್ನು ಬಗ್ಗು ಬಡಿಯಲು ಚುನಾವಣಾ ಪ್ರಚಾರಕ್ಕೆ ಸರಕಾರವೇ ಹಣ ಕೊಡುವ ಪ್ರಸ್ತಾವವನ್ನು ಈ ಸರಕಾರ ಏಕೆ ಗಂಬೀರವಾಗಿ ಪರಿಶೀಲಿಸುತ್ತಿಲ್ಲ ಎಂದೂ ಕೇಳಿದೆ.

ಈ ಅನಾಣ್ಯೀಕರಣ ಕ್ರಮಕ್ಕೆ ಆಗಿರುವ ಸುಮಾರು 20,000 ಕೋಟಿ ರೂ. ಖರ್ಚು, ಜತೆಗೆ ಆರ್ಥಿಕ ಚಟುವಟಿಕೆಗಳ ಮೇಲೆ ಆಗಿರುವ ದುಷ್ಪರಿಣಾಮಗಳಿಂದ ಆರ್ಥಿಕ ವ್ಯವಸ್ಥೆಗೆ ಆಗಿರುವ ಅಪಾರ ನಷ್ಟದ ಪ್ರಶ್ನೆಯನ್ನೂ ಈ ಹೇಳಿಕೆ ಎತ್ತಿದೆ.

ಈ ಅನಾಣ್ಯೀಕರಣವನ್ನು ಮಾಡಿದ ಒಟ್ಟು ರೀತಿ ದೇಶದಲ್ಲಿ ಒಂದು ಗಲಭೆಯಂತಹ ಪರಿಸ್ಥಿತಿಯನ್ನು ನಿರ್ಮಿಸಿದೆ. **ಸರಕಾರದ ಪಾತ್ರವಿರುವುದು ಒಂದು ಪ್ರಾಮಾಣಿಕ ತೆರಿಗೆ ಆಡಳಿತವನ್ನು ಏರ್ಪಡಿಸುವುದು, ಸಾಮಾನ್ಯ ಜನರನ್ನು ಕ್ರಿಮಿನಲ್‌ಗಳಂತೆ ಕಂಡು ಅವರು ತಮ್ಮದೇ ನ್ಯಾಯಬದ್ಧ ಹಣವನ್ನು ಪಡೆಯಲು ಸರತಿಯ ಸಾಲಿನಲ್ಲಿ ನಿಂತು ಅರ್ಜಿಗಳನ್ನು ತುಂಬಿಸುವಂತೆ ಮಾಡುವುದಲ್ಲ** ಎಂಬ ಕಟುವಾದ ಮಾತಿನೊಂದಿಗೆ ಈ ಹೇಳಿಕೆ ಮುಕ್ತಾಯಗೊಳ್ಳುತ್ತದೆ.

"ಸಹಕಾರಿ ಬ್ಯಾಂಕುಗಳಿಗೆ ನೋಟ್ ವಿನಿಮಯ ಅನುಮತಿ ನೀಡಿ" ರಿಝರ್ವ್ ಬ್ಯಾಂಕ್ ಎದುರು ಎಲ್‌ಡಿಎಫ್ ಸಂಪುಟದ ಧರಣಿ

ಕೇರಳ ರಾಜಧಾನಿ ತಿರುವನಂತಪುರದಲ್ಲಿ ರಿಝರ್ವ್ ಬ್ಯಾಂಕಿನ ಪ್ರಾದೇಶಿಕ ಕಚೇರಿಯೆದುರು ಸ್ವತಃ ಮುಖ್ಯಮಂತ್ರಿಗಳ ನೇತೃತ್ವದಲ್ಲಿ ಎಲ್‌ಡಿಎಫ್ ಸರಕಾರದ ಇಡೀ ಸಚಿವ ಸಂಪುಟ ನವಂಬರ್17ರಂದು ಧರಣಿ ಸತ್ಯಾಹ್ರಹ ನಡೆಸಿದೆ. ಸಹಕಾರಿ ವಲಯಕ್ಕೆ ಮತ್ತು ಒಟ್ಟಾರೆಯಾಗಿ ಜನಗೆ ಕೇಂದ್ರ ಸರಕಾರದ ಕಿರುಕುಳ ನಿಲ್ಲಬೇಕೆಂದು ಆಗ್ರಹಿಸಿ ಈ ಸತ್ಯಾಗ್ರಹ ನಡೆದಿದೆ. ಇದರಲ್ಲಿ ಸಿಪಿಐ(ಎಂ) ಪ್ರಧಾನ ಕಾರ್ಯದರ್ಶಿ ಸೀತಾರಾವ್ ಯೆಚೂರಿ, ರಾಜ್ಯ ಸಿಪಿಐ(ಎಂ) ಕಾರ್ಯದರ್ಶಿ ಕೊಡಿಯೇರಿ ಬಾಲಕೃಷ್ಣನ್ ಮತ್ತು ಹಿರಿಯು ಸಿಪಿಐ(ಎಂ) ಮುಖಂಡ, ಮಾಜಿ ಮುಖ್ಯಮಂತ್ರಿ ವೆವಿ.ಎಸ್.ಅಚ್ಯುತಾನಂದನ್ ಕೂ ಭಾಗವಹಿಸಿದ್ದರು.

ಎಲ್‌ಡಿಎಫ್ ಸರಕಾರ 500/1000 ದ ನೋಟುಗಳ ವಿನಿಮಯದ ಸೌಲಭ್ಯ ಸಹಕಾರಿ ಬ್ಯಾಂಕುಗಳಲ್ಲಿಯೂ ಲಭ್ಯವಾಗಬೇಕು ಎಂದು ಆಗ್ರಹಿಸುತ್ತಿದೆ.

ನಮ್ಮ ಸಂವಿಧಾನದಲ್ಲಿ ಜನತೆಯದ್ದೇ ಪಾರಮ್ಯ. 'ನಾವು, ಜನತೆ' ಎಂದೇ ಅದರ ಆರಮಭ ವಾಕ್ಯ. ಜನಗಳು ಹೇಗೆ ಬದುಕು ಸಾಗಿಸಬೇಕು ಎಂದು ಪ್ರಧಾನ ಮಂತ್ರಿಗಳು ನಿರ್ಧರಿಸುವುದನ್ನು ಒಪ್ಪಲು ಸಆಧ್ಯವಿಲ್ಲ. ಈ ಕ್ರಮದ ವಿರುದ್ಧ ವ್ಯಾಪಕ ಪ್ರತಿಭಟನೆಗಳು ಬರುತ್ತವೆ ಎಂದು ಯೆಚೂರಿ ಎಚ್ಚರಿಸಿದರು.

ಕೇಂದ್ರ ಸರಕಾರದ ಈ ಕ್ರಮದಿಂದ ಎಲ್ಲ ರಾಜ್ಯ ಸರಕಾರಗಳಿಗೂ ನಷ್ಟವಾಗಿದೆ. ಕೇಂದ್ರ ಸರಕಾರ ಇದನ್ನು ಭರ್ತಿ ಮಾಡಬೇಕು ಎಮದು ಎಲ್ಲ ಬಿಜೆಪಿಯೇತರ ಸರಕಾರಗಳನ್ನು ಅಣಿನೆರೆಸುವಲ್ಲಿ ಸಿಪಿಐ(ಎಂ) ನೇತೃತ್ವದ ಸರಕಾರಗಳು ಮುತುವರ್ಜಿ ವಹಿಸಿತ್ತವೆ ಎಂದು ಅವರು ಹೇಳಿದರು.

ಸಹಕಾರಿಗಳು ಕೇರಳದ ಕರ್ಷಕ ಆರ್ಥಿಕದ ಬೆನ್ನೆಲುಬು. ಅವು ನೋಟು ವಿನಿಮಯ ಮಾಡಬಾರದೆಂದು ರಿಝರ್ವ ಬ್ಯಾಂಕ್ ನಿರ್ಬಂಧಿಸಿರುವುದನ್ನು ವಿರೋಧಿಸಿ, ರಾಜ್ಯದಲ್ಲಿ ನಿರ್ಬಂಧಿಸಇದನ್ನು ದುರ್ಬಲಗೊಳಿಸುವ ಯಾವ ಹುನ್ನಾರವನ್ನೂ ಸಹಿಸುವುದಿಲ್ಲ ಎಂಬುದರ ಸಂಕೇತವಾಗಿ ಈ ಧರಣಿ ಸತ್ಯಾಗ್ರಹ ನಡೆಸಿದೆ. ●





ಸೂರ್ಯಕಾಂತ್ ಮಿಶ್ರ ರವರ ಮೇಲೆ ಟಿಎಂಸಿ ಹಲ್ಲೆ



ನವಂಬರ್ 17ರಂದು ಸಿಪಿಐ(ಎಂ) ಪೊಲಿಟ್‌ಬ್ಯುರೊ ಸದಸ್ಯರೂ, ಪಶ್ಚಿಮ ಬಂಗಾಲ ರಾಜ್ಯ ಕಾರ್ಯದರ್ಶಿಗಳೂ ಆಗಿರುವ ಸೂರ್ಯಕಾಂತ್ ಮಿಶ್ರ ರವರ ಮೇಲೆ ತಾಮಲೂಕ್ ಲೋಕಸಭಾ ಉಪಚುನಾವಣೆಗಳ ಪ್ರಚಾರದಲ್ಲಿ ಒಂದು ಮೆರವಣಿಗೆಯ ನೇತೃತ್ವ ವಹಿಸಿದ್ದಾಗ ಟಿಎಂಸಿ ಕಾರ್ಯಕರ್ತರು ಹಲ್ಲೆ ಮಾಡಿದ್ದಾರೆ. ಇದನ್ನು ಸಿಪಿಐ(ಎಂ) ಪೊಲಿಟ್‌ಬ್ಯುರೊ ಬಲವಾಗಿ ಖಂಡಿಸಿದೆ.

ಈ ಹಲ್ಲೆ ಹಿರಿಯ ಪೋಲೀಸ್ ಅಧಿಕಾರಿಗಳ ಸಮ್ಮುಖವೇ ನಡೆದಿದೆ. ಇದು ಸಿಪಿಐ(ಎಂ) ಮತ್ತು ಎಡರಂಗದ ವಿರುದ್ಧ ತೃಣಮೂಲ ಕಾಂಗ್ರೆಸಿನ ಹಿಂಸಾಚಾರದ ಇತ್ತೀಚಿನ ಘಟನೆ. ಸಿಪಿಐ(ಎಂ) ಪಶ್ಚಿಮಬಂಗಾಲ ರಾಜ್ಯ ಸಮಿತಿ ಈ ಹೀನ ಹಲ್ಲೆಯನ್ನು ಪ್ರತಿಭಟಿಸುವಂತೆ ತನ್ನ ಎಲ್ಲ ಘಟಕಗಳಿಗೆ ಕರೆ ನೀಡಿದೆ.

ದೀಪೇನ್‌ಘೋಷ್ ನಿಧನ

ಪಶ್ಚಿಮ ಬಂಗಾಲದಿಂದ ಎರಡು ಬಾರಿ ರಾಜ್ಯಸಭೆಗೆ ಆಯ್ಕೆಯಾಗಿದ್ದ, ಸಿಪಿಐ(ಎಂ) ಸಂಸದೀಯ ಘಟಕದ ಪ್ರಮುಖ ಮುಖಂಡರಾಗಿದ್ದ, ಮುಖ್ಯ ವಿಪ್ ' ಆಗಿದ್ದ ದಿಪೇನ್ ಘೋಷ್ ನಿಧನರಾಗಿದ್ದಾರೆ. ಅವರು ಅದಕ್ಕೆ ಮೊದಲು 1966ರಿಂದ ಪಶ್ಚಿಮ ಬಂಗಾಳದ ಕೇಂದ್ರ ಸರಕಾರೀ ನೌಕರರ ಸಮನ್ವಯ ಸಮಿತಿಯ ಕಾರ್ಯದರ್ಶಿಗಳಾಗಿ 1982–93ರ ಅವಧಿಯಲ್ಲಿ ಅಧ್ಯಕ್ಷರಾಗಿ ಸೇವೆ ಸಲ್ಲಿಸಿದ್ದರು.

ಇಂದಿನ ಬಾಗ್ಲಾದೇಶದಲ್ಲಿರುವ ಜೆಸ್ಸರ್‌ನಲ್ಲಿ 1934 ಫೆಬ್ರುವರಿ 1ರಂದು ಅವರು ಜನಿಸಿದ್ದರು. ತಮ್ಮ ಕಾಲೇಜು ದಿನಗಳಲ್ಲಿ ವಿಧ್ಯಾರ್ಥಿ ಚಳುವಳಿ ಚಟುವಟಿಕೆಗಳಲ್ಲಿ ತೊಡಗಿಕೊಂಡಿದ್ದ ಅವರು ಕಾಲಾನಂತರ, ಕಾರ್ಮಿಕ ಸಂಘಟನೆ ಮತ್ತು ಪ್ರಗತಿಪರ ಸಾಂಸ್ಕೃತಿಕ ವಳುವಳಿಯಲ್ಲೂ ಸಹ ತಮ್ಮನ್ನು ತೊಡಗಿಸಿಕೊಂಡಿದ್ದರು.

ಕೇವಲ ರಾಜ್ಯ ಮಟ್ಟದಲ್ಲಿ ಮಾತ್ರವಲ್ಲದೇ ಸಂಘಟನೆಯ ನೇತೃತ್ವವನ್ನು ರಾಷ್ಟ್ರೀಯ ಮಟ್ಟದಲ್ಲೂ ವಹಿಸಿದವರು. 2 ಬಾರಿ ಅವರನ್ನು 23 ತಿಂಗಳುಗಳ ಕಾಲ ಜೈಲಿನಲ್ಲಿಇಡಲಾಗಿತ್ತು. 1974ರ ಐತಿಹಾಸಿಕ ರೈಲು ಪ್ರತಿಭಟನೆಯ ಸಂಧರ್ಭದಲ್ಲಿ ಅವರ ಸಕ್ರೀಯ ಪಾಲ್ಗೊಳ್ಳುವಿಕೆಗಾಗಿ ವಿಚಾರಣೆ ನಡೆಸದೇ 19 ತಿಂಗಳುಗಳ ಕಾಲ ನಿರಂತರಜೇಲುವಾಸ ಅನುಭವಿಸಿದ್ದರು. ತುರ್ತು ಪರಿಸ್ಥಿತೆಯ ಸಂಧರ್ಭದಲ್ಲೂ ಸಹ 19 ತಿಂಗಳುಗಳ ಕಾಲ ನಿರಂತರ ಜೇಲುವಾಸ ಅನುಭವಿಸಿದ್ದರು. ಮತ್ತು ಅವರನ್ನು ಕೆಲಸದಿಂದ ವಜಾಗೊಳಿಸಲಾಯಿತು.

ಪರ್ಯಾಯ ವ್ಯವಸ್ಥೆಯಾಗುವ ವರೆಗೆ ಹಳೆ ನೋಟುಗಳ ಬಳಕೆ ಅವಕಾಶ–ಸಿಪಿಐ(ಎಂ) ಆಗ್ರಹ.....ಪುಟ 2ರಿಂದ

ನೀಡಬೇಕೆಂದು ಮುಂದಿಟ್ಟಿರುವ ವಿನಂತಿಯನ್ನು ಒಪ್ಪಬೇಕು

ಎಂದು ಆಗ್ರಹಿಸಿದೆ. ಇತರ ಬಿಜೆಪಿಯೇತರ ರಾಜ್ಯಸರಕಾರಗಳೂ ಕೂಡ ಈ ನೋಟು ಹಿಂಪಡಿಕೆಯಿಂದ ತಂತಮ್ಮ ರಾಜ್ಯಗಳಲ್ಲಿ ಕಷ್ಟಪಡುತ್ತಿರುವ ಜನರಿಗೆ ಪರಿಹಾರ ಒದಗಿಸಲು ಇಂತಹ ಕ್ರಮಗಳನ್ನು ಕೈಗೊಳ್ಳುತ್ತವೆ ಎಂದು ಅದು ನಿರೀಕ್ಷೆ ವ್ಯಕ್ತಪಡಿಸಿದೆ.

(3) ಪರ್ಯಾಯ ವ್ಯವಸ್ಥೆಗಳನ್ನು ಮಾಡುವ ವರೆಗೆ ಅಥವ ಡಿಸೆಂಬರ್ 30, 2016ರ ವರೆಗಾದರೂ ಈ ನೋಟುಗಳ ಬಳಕೆಗೆ ಅವಕಾಶ ಕೊಡಬೇಕು ಎಂದು ಕೇಂದ್ರ ಸರಕಾರವನ್ನು ಆಗ್ರಹಿಸಿ ದೇಶಾದ್ಯಂತ ಪಕ್ಷದ ಘಟಕಗಳು ಪ್ರತಿಭಟನಾ ಕಾರ್ಯಾಚರಣೆಗಳನ್ನು ನಡೆಸಬೇಕು ಎಂದು ಪೊಲಿಟ್‌ಬ್ಯುರೊ ಕರೆ ನೀಡಿದೆ.

ತಮ್ಮ ಕಾನೂನುಬದ್ಧ ಹಣವನ್ನು ಪರಿವರ್ತಿಸಿಕೊಳ್ಳಲು ಬ್ಯಾಂಕುಗಳು ಮತ್ತು ಅಂಚೆ ಕಚೇರಿಗಳ ಮುಂದೆ ದೀರ್ಘವಾದ ಸಾಲುಗಳಲ್ಲಿ ನಿಂತಿರುವ ಜನಗಳಿಗೆ ಸಕ್ರಿಯವಾಗಿ ಸಹಾಯ ಮಾಡಬೇಕು, ನೆರವಾಗಬೇಕು ಎಂದೂ ತನ್ನ ಎಲ್ಲ ಸದಸ್ಯರಿಗೆ ಸಿಪಿಐ(ಎಂ) ಪೊಲಿಟ್‌ಬ್ಯುರೊ ಕರೆ ನೀಡಿದೆ.

ಸರ್ವಾಧಿಕಾರಶಾಹಿ ಪ್ರವೃತ್ತಿ ಹೆಚ್ಚುತ್ತಿದೆ

ದೇಶದಲ್ಲಿನ ಇತರ ಆಗು ಹೋಗುಗಳ ಬಗ್ಗೆಯೂ ಚರ್ಚೆ ನಡೆಸಿದ ಸಿಪಿಐ(ಎಂ) ಪೊಲಿಟ್‌ಬ್ಯುರೊ ಮೋದಿ ಸರಕಾರದ ಸರ್ವಾಧಿಕಾರಶಾಹಿ ಪ್ರವೃತ್ತಿ ಹೆಚ್ಚುತ್ತಿರುವ ಬಗ್ಗೆ ಸಿಪಿಐ(ಎಂ) ಪೊಲಿಟ್‌ಬ್ಯುರೊ ಗಂಭೀರ ಆತಂಕವನ್ನು ವ್ಯಕ್ತಪಡಿಸಿದೆ.

ವಿರೋಧಾಭಾಸ ಎಂದರೆ ಪ್ರಧಾನ ಮಂತ್ರಿಗಳು ತುರ್ತು ಪರಿಸ್ಥಿತಿ ಒಂದು 'ಪಾಪ', ಭವಿಷ್ಯದ ಯಾವ ರಾಜಕೀಯ ಮುಕಂಡನೂ ಈ ಬಗ್ಗೆ ಯೋಚಿಸಲೇ ಬಾರದು ಎಂದು ಹೇಳುತ್ತ ಭವಿಷ್ಯದಲ್ಲಿ ತುರ್ತುಪರಿಸ್ಥಿತಿಯ ಸಾಧ್ಯತೆಯನ್ನು ತಳ್ಳಿ ಹಾಕುತ್ತಿದ್ದಂತೆಯೇ, ಬೇರಡೆಗಳಲ್ಲಿ ತದ್ವಿರುದ್ಧ ಸಂಕೇತಗಳು ಕಾಣಬರುತ್ತಿವೆ ಎಂದು ಪೊಲಿಟ್‌ಬ್ಯುರೊ ಹೇಳಿದೆ. ಪ್ರಧಾನ ಮಂತ್ರಿಗಳ ಈ ಹೇಳಿಕೆಯ ಎರಡು ದಿನಗಳ ನಂತರ ಹಿಂದು ವಾಹಿನಿ ಎನ್‌ಡಿಟಿವಿ ಇಂಡಿಯಾದ ಮೇಲೆ ಒಂದು ದಿನದ ನಿಷೇಧ ಹೇರಲಾಯಿತು(ವ್ಯಾಪಕ ಪ್ರತಿಭಟನೆಗಳ ನಂತರ ಇದನ್ನೀಗ ತಡೆ ಹಿಡಿಯಲಾಗಿದೆ).

ಪ್ರಧಾನ ಮಂತ್ರಿಗಳು ಈಭಾಷಣ ಕೊಡುತ್ತಿದ್ದ ದಿನವೇ ದಿಲ್ಲಿ ಮುಖ್ಯಮಂತ್ರಿ ಅರವಿಂದ ಕೇಜ್ರಿವಾಲ್, ಅವರ ಸಹಾಯಕ ಮಾನಿಷ್ ಸಿಸೋಡಿಯ ಮತ್ತು ಕಾಂಗ್ರೆಸ್ ಉಪಾಧ್ಯಕ್ಷ ರಾಹುಲ್ ಗಾಂಧಿಯವರು ಆತ್ಮಹತ್ಯೆ ಮಾಡಿಕೊಮಡ ನಿವೃತ್ತ ಸೈನಿಕರ ಕುಟುಂಬದ ಸದಸ್ಯರನ್ನು ಭೇಟಿಯಾಗಲು ಹೋಗುತ್ತಿದ್ದಂತೆ ದಿಲ್ಲಿ ಪೋಲೀಸ್ ತಡೆದು ಬಂಧಿಸಿದರು. ದಿಲ್ಲಿ ಪೋಲಿಸರನ್ನು ಮತ್ತೆ ಜೆಎನ್‌ಯು ವಿದ್ಯಾರ್ಥಿ ನಜೀಬ್ ಅಹ್ಮದ್ ಕಾಣೆಯಾದ ಘಟನೆಯಲ್ಲಿ ನಿಷ್ಕ್ರಿಯತೆಯನ್ನು ಪ್ರತಿಭಟಿಸುತ್ತಿದ್ದ ವಿದ್ಯಾರ್ಥಿಗಳನ್ನು ಬಂಧಿಸಲು ಬಳಸಲಾಯಿತು.

ವಿವಿಧ ರಾಜ್ಯಗಳಲ್ಲಿ ಬಿಜೆಪಿ ಸರಕಾರಗಳು ಭಿನ್ನಮತವನ್ನು ನಿರ್ದಯವಾಗಿ ಹತ್ತಿಕ್ಕುತ್ತಿದ್ದಾರೆ ಎಂಬುದನ್ನೂ ಸಿಪಿಐ(ಎಂ) ಪೊಲಿಟ್‌ಬ್ಯುರೊ ಗಮನಿಸಿತು.

ಇತ್ತೀಚೆಗೆ ಝಾರ್ಖಂಡ್‌ನಲ್ಲಿ ಬುಡಕಟ್ಟು ಜನಗಳ ಮೇಲೆ ಅಮಾನವೀಯ ಕ್ರಮದಲ್ಲಿ ಇದು ಕಂಡು ಬಂದಿದೆ. ಅಲ್ಲಿನ ಖುಂಟಿ ಜಿಲ್ಲೆಯ ಸೆಕೋ ಗ್ರಾಮದಲ್ಲಿ ರಾಂಚಿಯಲ್ಲಿ ನಡೆಯಲಿದ್ದ ಆದಿವಾಸಿಗಳ ಬೂಹಕ್ಕುಗಳ ನ್ನು ಮೊಟಕು ಮಾಡುವ ತಿದ್ದುಪಡಿಗಳ ವಿರುದ್ಧ ರ‍್ಯಾಲಿಗೆ ಹೋಗಲು ದೊಡ್ಡ ಸಮಖ್ಯೆಯಲ್ಲಿ ನೆರೆದಿದ್ದವರ ಮೇಲೆ ಗೋಲೀಬಾರ್ ನಡೆಸಿ ಒಬ್ಬ ಆದಿವಾಸಿ ಮುಖಂಡರು ಕೊಲ್ಲಲ್ಪಟ್ಟರು, ಇನ್ನೊಬ್ಬರಿಗೆ ಗಂಭೀರ ಗಾಯಗಳಾಗಿವೆ. ಝಾರ್ಖಂಡ್‌ನ ಬಿಜೆಪಿ ಸರಕಾರ ಕಳೆದ ಒಂದು ತಿಂಗಳಲ್ಲಿ ಮತ್ತೆ–ಮತ್ತೆ ಗೋಲೀಬಾರಿಗೆ ಇಳಿದಿದೆ, ಈ ಅವಧಿಯಲ್ಲಿ ಎರಡು ಸಾವುಗಳು ಪೋಲೀಸ್ ಕಸ್ಟಡಿಯಲ್ಲಿ ನಡೆದಿದೆ.

ಛತ್ತೀಸ್‌ಗಡ ಬಿಜೆಪಿ ಸರಕಾರ ಇಬ್ಬರು ಪ್ರಖ್ಯಾತ ಅಧ್ಯಯನಕಾರರು ಮತ್ತು ಸಿಪಿಐ(ಎಂ)ನ ರಾಜ್ಯ ಕಾರ್ಯದರ್ಶಿ ಸಝುಯ್ ಪರಾಟೆಯವರಮೇಲೆ ಕೊಲೆ ಮತ್ತು ಅದರ ಪಿತೂರಿಯ ಸುಳ್ಳು ಎಫ್‌ಐಆರ್ ಹಾಕಿದೆ.

ಎಂಟು ಪರಾರಿಯಾಗಿದ್ದಾರೆನ್ನಲಾದ ವಿಚಾರಣಾಧೀನ ಕೈದಿಗಳನ್ನು ಗುಂಡಿಟ್ಟು ಕೊಂದ ಘಟನೆಯ ಬಗ್ಗೆ ಮಧ್ಯಪ್ರದೇಶದ ಬಿಜೆಪಿ ಸರಕಾರದ ಆರಂಭದ ದಾವೆಗಳ ಬಗ್ಗೆ ಗಂಭೀರ ಸಂದೇಹ ಮೂಡಿಸುವ ಪರಸ್ಪರ ವಿರೋಧಿ ವರದಿಗಳು ಮತ್ತು ಹೆಚ್ಚಿನ ಸಾಕ್ಷ್ಯಗಳು ಬೆಳಕಿಗೆ ಬರುತ್ತಿವೆ.

ರಾಜ್ಯ ಸರಕಾರ ಕೊನೆಗೂ ಪ್ರಕಟಿಸಿರುವ ನ್ಯಾಯಾಂಗ ತನಿಖೆ ಕೈದಿಗಳ 'ಪರಾರಿ'ಗೆ ಕಾರಣವಾದ ಮತ್ತು ಅವರ ಕೊಲೆಗೆ ಕಾರಣವಾದ ಸಂದರ್ಭಗಳ ಬಗ್ಗೆಯೂ, ವಿವಿಧ ವರದಿಗಳ ಬಗ್ಗೆಯೂ ವಿಚಾರಣೆ ನಡೆಸಬೇಕು ಎಂದು ಪೊಲಿಟ್‌ಬ್ಯುರೊ ಆಗ್ರಹಿಸಿದೆ.

ತೀಕ್ಷ್ಣಗೊಳ್ಳುತ್ತಿರುವ ಕೋಮು ಧ್ರುವೀಕರಣ

ಉತ್ತರ ಪ್ರದೇಶ ವಿಧಾನಸಭಾ ಚುನಾವಣೆಗಳು ಸನ್ನಿಹಿತವಾಗುತ್ತಿರುವಂತೆ ಕೋಮು ಉದ್ವೇಗ ಮತ್ತು ಅದರಿಂದಾಗಿ ಧ್ರುವೀಕರಣ ಹೆಚ್ಚುತ್ತಿರುವ ಬಗ್ಗೆ ಗಂಬೀರ ಆತಂಕವನ್ನು ಸಿಪಿಐ(ಎಂ) ಪೊಲಿಟ್‌ಬ್ಯರೊ ವ್ಯಕ್ತಪಡಿಸಿದೆ. ಬಿಜೆಪಿ /ಆರೆಸ್ಸೆಸ್ ತಮ್ಮ ವಿವಿಧ ಪಡೆಗಳ ಮೂಲಕ ಗೋರಕ್ಷ ಇತ್ಯಾದಿಗಳ ಹೆಸರಲ್ಲಿ ವಿವಧ ವಿಭಜನಕಾರಿ ಪ್ರಶ್ನೆಗಳನ್ನು ಎತ್ತಿ ಗಲಭೆಗಳನ್ನು ನಡೆಸುತ್ತಿವೆ. ಬಿಜೆಪಿ ಪಾಕಿಸ್ತಾನ ಜೊತೆ ಗಡಿ ನಿಯಂತ್ರಣ ರೇಖೆಯಲ್ಲಿ ಸೇನಾ ಕಾರ್ಯಾಚರಣೆಯನ್ನು ರಾಜಕೀಯವಾಗಿ ದುರುಪಯೋಗ ಪಡಿಸಿಕೊಂಡು ಹುಸಿ ರಾಷ್ಟ್ರವಾದದ ಗುಲ್ಲೆಬ್ಬಿಸಿ ಅದನ್ನು ತಮ್ಮ ಕೋಮುವಾದಿ ಅಜೆಂಡಾದೊಂದಿಗೆ ಬೆರೆಸುತ್ತಿದ್ದಾರೆ ಎಂದು ಪೊಲಿಟ್‌ಬ್ಯುರೊ ಆಭಿಪ್ರಾಯ ಪಟ್ಟಿದೆ.

ಈ ಆತಂಕಕಾರಿ ಬೆಳವಣಿಗೆಗಳನ್ನು ಗಮನಿಸಿ ಅದು ಭಾರತದ ಜಾತ್ಯಾತೀತ, ಪ್ರಜಾಸತ್ತಾತ್ಮಕ, ಸಂವಿಧಾನಿಕ ಗಣತಂತ್ರದ ರಕ್ಷಣೆಗೆ ಎಲ್ಲ ಪ್ರಜಾಪ್ರಭುತ್ವವಾದಿ ಮತ್ತು ಜಾತ್ಯಾತೀತ ಶಕ್ತಿಗಲು ಒಟ್ಟುಗೂಡಬೇಕು ಎಂದು ಕರೆ ನೀಡಿದೆ.

ನ್ಯಾಯಾಂಗ ಹುದ್ದೆಗಳನ್ನು ಭರ್ತಿ ಮಾಡಿ

ಸಾಕಷ್ಟು ಸಂಖ್ಯೆಯಲ್ಲಿ ನ್ಯಾಯಾಧೀಶರಿಲ್ಲದ್ದರಿಂದ ಬಡ ಕಕ್ಷಿದಾರರು ದೇಶದ ವಿವಿಧ ಕೋರ್ಟುಗಳಲ್ಲಿ ಎದುರಿಸುತ್ತಿರುವ ಅಪಾರ ಕಷ್ಟಗಳ ಬಗ್ಗೆ ಪೊಲಿಟ್‌ಬ್ಯುರೊ ಗಂಬೀರ ಆತಂಕವನ್ನು ವ್ಯಕ್ತಪಡಿಸಿದೆ. ಈಗ ತೆರವಾಗಿರುವ ಹುದ್ದೆಗಳನ್ನು ತಕ್ಷಣವೇ ತುಂಬಬೇಕು ಎಂದು ಅದು ಆಗ್ರಹಿಸಿದೆ.

ಕಾರ್ಮಿಕರ ಅಂತರರಾಷ್ಟ್ರೀಯ ಐಕ್ಯತೆಗೆ 17ನೇ WFTU ಸಮ್ಮೇಳನ

ಎಸ್. ವರಲಕ್ಷ್ಮಿ



ವಿಮೋಚನಾ ಚಳುವಳಿಗಳಲ್ಲಿ ಯಶಸ್ವಿ ಪಡೆದಿರುವ ದಕ್ಷಿಣ ಆಫ್ರಿಕಾದ ದರ್ಬಾನ್‌ನಲ್ಲಿ ಅಂತರರಾಷ್ಟ್ರೀಯ ಕಾರ್ಮಿಕ ಸಂಘಟನೆಗಳ ಒಕ್ಕೂಟ (World Federation of Trade Union) ದ 17ನೇ ಸಮ್ಮೇಳನ ಅಕ್ಟೋಬರ್ 5 ರಿಂದ 8ರ ತನಕ ನಡೆಯಿತು. ಈ ಸಮ್ಮೇಳನಕ್ಕೆ 5 ಖಂಡಗಳ, 111 ದೇಶಗಳಲ್ಲಿರುವ 244 ಕೇಂದ್ರ ಕಾರ್ಮಿಕ ಸಂಘಟನೆಗಳ 1500 ಜನಪ್ರತಿನಿಧಿಗಳು ಮತ್ತು ವೀಕ್ಷಕರು ಪಾಲ್ಗೊಂಡಿದ್ದರು. ಅಕ್ಟೋಬರ್ 5ರಂದು ಬೆಳಿಗ್ಗೆ 9.00 ಗಂಟೆಗೆ ಉದ್ಘಾಟನಾ ಸಮಾರಂಭ ಪ್ರಾರಂಭವಾಯಿತು. ದಕ್ಷಿಣ ಆಫ್ರಿಕಾದ ಕಾರ್ಮಿಕ ಸಂಘಟನೆಯ ಅಧ್ಯಕ್ಷರಾದ ಸಿದ್ದುಂ ದಾಲ್ಮಿನ್ ಸ್ವಾಗತಿಸಿದರು. "ಬಂಡವಾಳಶಾಹಿ ಸೃಷ್ಟಿಸಿದ ಬಡತನ ಮತ್ತು ಯುದ್ಧಗಳ ವಿರುದ್ಧ ಮತ್ತು ಪ್ರಸ್ತುತ ಕಾರ್ಮಿಕ ವರ್ಗದ ಅಗತ್ಯಗಳನ್ನು ಪಡೆದುಕೊಳ್ಳಲು ಕಾರ್ಮಿಕರ ಅಂತರರಾಷ್ಟ್ರೀಯ ಐಕ್ಯತೆ" ಈ ಘೋಷಣೆಯಡಿ 17ನೇ WFTU ಸಮ್ಮೇಳನ ಸಂಘಟಿಸಲಾಗಿತ್ತು.

ದಕ್ಷಿಣ ಆಫ್ರಿಕಾ ಸರ್ಕಾರದ ಅಧ್ಯಕ್ಷರಾದ ಜಾಕೋಬ್ ಜುಮಾರವರು ಉದ್ಘಾಟನೆ ಮಾಡಿದರು. ಬಂಡವಾಳಶಾಹಿ ವ್ಯವಸ್ಥೆ ಒಂದು ಹಂತದಿಂದ ಇನ್ನೊಂದು ಹಂತಕ್ಕೆ ಬಿಗಡಾಯಿಸುತ್ತಾ ಹೋಗುತ್ತದೆ. ಉದ್ಯೋಗಗಳು ಅಭದ್ರತೆಯಲ್ಲಿವೆ. ಹೊಸ ಹೊಸ ತಂತ್ರಜ್ಞಾನಗಳಿಂದ ಉದ್ಯೋಗಗಳ ಸೃಷ್ಟಿಯ ಬದಲಿಗೆ ಉದ್ಯೋಗಗಳ ಕಡಿತ ಹೆಚ್ಚಾಗುತ್ತಿದೆ. ಆದ್ದರಿಂದ ತಂತ್ರಜ್ಞಾನಗಳಿಂದ ಯಾವ ಬದಲಾವಣೆಯೂ ಆಗದು ಎಂದು ವಿವರಿಸಿದರು.

"ಕಾರ್ಮಿಕರು ಹೋರಾಟಕ್ಕಿಳಿದರೆ ಅವರ ಕೈಗಳಲ್ಲಿನ ಸಂಕೋಲೆಗಳ ಹೊರತು ಕಳೆದುಕೊಳ್ಳಲು ಬೇರೇನೂ ಇಲ್ಲ" ಎಂಬ ಪ್ರಸಿದ್ದ ತತ್ವಜ್ಞಾನಿ ಕಾರ್ಲ್‌ಮಾರ್ಕ್ಸ್‌ರ ಮಾತುಗಳನ್ನು ನೆನಪಿಸಿದರು. ನಂತರ ಪ್ರಾರಂಭವಾದ ಅಧಿವೇಶನದಲ್ಲಿ WFTUವಿನ ಪ್ರಧಾನ ಕಾರ್ಯದರ್ಶಿಗಳಾದ ಕಾಂ. ಮಾವ್ರಿಕೋಸ್‌ರವರು ವರದಿ ಮಂಡನೆ ಮಾಡಿದರು. ಪ್ರತಿ 5 ವರ್ಷಕ್ಕೊಮ್ಮೆ ನಡೆಯುವ ಈ ಸಮ್ಮೇಳನದಲ್ಲಿ ಎಲ್ಲಾ ದೇಶಗಳಲ್ಲಿರುವ ಕಾರ್ಮಿಕರ ಸಮಸ್ಯೆಗಳು, ಸರ್ಕಾರಗಳ ನೀತಿಗಳು ದಿನೇ ದಿನೇ ಹೆಚ್ಚಾಗುತ್ತಿರುವ ಹಿನ್ನೆಲೆಯಲ್ಲಿ ಕಾರ್ಮಿಕ ಸಂಘಟನೆಗಳ ಚಳುವಳಿಯ ಅಗತ್ಯತೆಗಳ ಬಗ್ಗೆ ಒತ್ತಿ ವಿವರಿಸಿದರು. ಅವರ ವರದಿಯ ಕೆಲವು ಪ್ರಮುಖ ಅಂಶಗಳು ಕೆಳಗಿವೆ:

ಜಾಗತಿಕ ಕಾರ್ಮಿಕ ವರ್ಗದ ಪರಿಸ್ಥಿತಿ

ಯುರೋಪ್ :

ಗ್ರೀಸ್, ಪೋರ್ಚುಗಲ್, ಇಟಲಿ, ಸ್ಪೈನ್‌ಗಳ ಬಿಕ್ಕಟ್ಟಿನ ಹಿನ್ನೆಲೆಯಲ್ಲಿ ಯುರೋಪಿಯನ್ ಒಕ್ಕೂಟದ ದೇಶಗಳ ನಡುವೆಯೇ ಸ್ಪರ್ಧೆ ಹೆಚ್ಚುತ್ತಿದೆ. ಐಎಂಎಫ್, ಯುರೋಪಿಯನ್ ಒಕ್ಕೂಟ, ಯುರೋಪಿಯನ್ ಸೆಂಟ್ರಲ್ ಬ್ಯಾಂಕ್‌ಗಳ ಪ್ರೇರಿತ ನೀತಿಗಳು ಕಾರ್ಮಿಕರ ಗಳಿಕೆ ಮೇಲೆ ದಾಳಿ ಮಾಡಿವೆ. ಅಧಿಕ ತೆರಿಗೆ, ವೇತನ ಕಡಿತ, ನಿರುದ್ಯೋಗ ದರದಲ್ಲಿ ಹೆಚ್ಚಳ, ಪಿಂಚಣಿ ಕಡಿತ, ಸಾರ್ವಜನಿಕ ಸೇವೆಗಳ ಖಾಸಗೀಕರಣ ಮುಂತಾದ ವಿದ್ಯಮಾನಗಳು ಕಂಡು ಬರುತ್ತಿವೆ. ಇತ್ತೀಚೆಗಿನ ಯುರೋಪಿಯನ್ ಒಕ್ಕೂಟದಿಂದ ಬ್ರಿಟನ್ ಹೊರ ನಡೆಯಬೇಕೆಂಬ ಜನಾಭಿಪ್ರಾಯ ತೀರ್ಪು ಕೂಡ ಯುರೋಪಿಯನ್ ಒಕ್ಕೂಟದ ಕಾರ್ಮಿಕ ವಿರೋಧಿ ನೀತಿಗಳಿಗೆ ತಡೆ ಒಡ್ಡಿಲ್ಲ.

ಆಫ್ರಿಕಾ :

ಆರ್ಥಿಕ ಬೆಳವಣಿಗೆ ಹೆಚ್ಚಳವನ್ನು ತೋರಿಸುತ್ತಿದೆ. ಆದರೆ ಕಾರ್ಮಿಕರ ಬದುಕಿನ ಬವಣೆಗಳು ಹೆಚ್ಚುತ್ತಿವೆ. ಒಂದೆಡೆ ಏಕಸ್ವಾಮ್ಯ ಬಂಡವಾಳಗಾರರಿಂದ ನಿಸರ್ಗ ಸಂಪತ್ತಿನ ಹಾಗೂ ಆರ್ಥಿಕ ಸಂಪತ್ತಿನ ಲೂಟಿ ನಿರಂತರವಾಗಿ ನಡೆದಿದೆ. ಮತ್ತೊಂದೆಡೆ ಕಾರ್ಮಿಕರು ಆಹಾರ, ಸುರಕ್ಷಿತ ವಸತಿ, ಆರೋಗ್ಯ, ಶಿಕ್ಷಣ ಮುಂತಾದ ವಿಚಾರಗಳಲ್ಲಿ ದೊಡ್ಡ ಬವಣೆ ಅನುಭವಿಸುತ್ತಿದ್ದಾರೆ. ಮನುಷ್ಯನ ಜೀವಿತಾವಧಿ ಆಫ್ರಿಕ ದೇಶಗಳಲ್ಲಿ ಕಡಿಮೆ ಇದೆ.

ಏಷ್ಯಾ :

ಕಾರ್ಮಿಕರ ಜೀವನಮಟ್ಟ ಅಧೋಗತಿಯಲ್ಲಿದೆ. ಮಿಲಿಯಾಂತರ ಜನ ಕಾರ್ಮಿಕರು ದಿನಕ್ಕೆ 2 ಅಮೆರಿಕನ್ ಡಾಲರ್ ಆದಾಯದಲ್ಲಿ ಬದುಕು ದೂಡುತ್ತಿದ್ದಾರೆ. ಜೀವನಾವಶ್ಯಕ ಅಗತ್ಯಗಳು ದಿನೇ ದಿನೇ ದುಬಾರಿಯಾಗುತ್ತಿವೆ. ಭಾರತದಲ್ಲಿ ಮಿಲಿಯಾಂತರ ಜನತೆ ವಸತಿ ಸೌಕರ್ಯವಿಲ್ಲದೆ ನಿಕೃಷ್ಟ ಜೀವನ ನಡೆಸುತ್ತಿದ್ದಾರೆ. ಬಾಲ ಕಾರ್ಮಿಕ ಪದ್ಧತಿ, ಮಹಿಳೆಯರಿಗೆ ತಾರತಮ್ಯ ವ್ಯಾಪಕವಾಗಿದೆ. ಮತ್ತೊಂದೆಡೆ ಕಾರ್ಪೋರೇಟ್ ಕಂಪನಿಗಳ ಬಹುರಾಷ್ಟ್ರೀಯ ಕಂಪನಿಗಳ ಆದಾಯ ತೀವ್ರವಾಗಿ ಏರುತ್ತಿದೆ.

ಲ್ಯಾಟಿನ್ ಅಮೆರಿಕಾ ಮತ್ತು ಕೆರೆಬಿಯನ್ ದೇಶಗಳು:

ಸಂಪದ್ಭರಿತವಾದ ಮಣ್ಣು, ಹೇರಳ ಕೃಷಿ ಉತ್ಪಾದನೆಯಿದ್ದರೂ ದುಡಿಯುವ ಜನರ ಬದುಕು ಉತ್ತಮವಾಗಿಲ್ಲ. ಬಡವರು ಮತ್ತು ಶ್ರೀಮಂತರ ನಡುವಿನ ಅಗಾಧ ಅಂತರ ಇನ್ನೂ ಮುಂದುವರಿದೇ ಇದೆ. ಕಡು ಬಡತನ ನಿವಾರಣೆ ನಿಟ್ಟಿನಲ್ಲಿ ಕೈಗೊಂಡ ಕ್ರಮಗಳಿಂದಾಗಿ ಹಲವು ದೇಶಗಳಲ್ಲಿ ಕಾರ್ಮಿಕರ ವೇತನದಲ್ಲಿ ಹೆಚ್ಚಳವಾಗಿದೆ. ಆದರೂ ಈ ಏರಿಕೆ ಸಾಲದಾಗಿದೆ. ವಸತಿ ಸಮಸ್ಯೆ ಅಲ್ಲದೆ ವಿದ್ಯುತ್ ಸೌಕರ್ಯ ಇಲ್ಲದ ಪರಿಸ್ಥಿತಿ ಮುಂದುವರಿದಿದೆ.

ಕೋಲಂಬಿಯಾ, ಮಧ್ಯ ಅಮೆರಿಕ ದೇಶಗಳು ಮತ್ತು ಮೆಕ್ಸಿಕೋ:

ಕಾರ್ಮಿಕ ಚಳುವಳಿ ಹಾಗೂ ಸಾಮಾಜಿಕ ಕಾರ್ಯಕರ್ತರ ವಿರುದ್ಧ ಭಯೋತ್ಪಾದಕ ದಾಳಿಗಳು ನಡೆಯುತ್ತಿವೆ. 9000ಕ್ಕೂ ಜನರು ರಾಜಕೀಯ ಖೈದಿಗಳಾಗಿ ಜೈಲುಗಳಲ್ಲಿದ್ದಾರೆ. ಅದರಲ್ಲಿ WFTU ಮುಖಂಡರು ಸೇರಿದ್ದಾರೆ. ಪ್ರತಿವರ್ಷವೂ ಹತ್ತಾರು ಕಾರ್ಮಿಕ ಮುಖಂಡರನ್ನು ಕೊಲೆಗೈಯುತ್ತಾ ಬರಲಾಗಿದೆ.

ಕ್ಯೂಬಾ :

ಒಂದೆಡೆ ಅಮೆರಿಕದ ಒತ್ತಡ, ಮತ್ತೊಂದೆಡೆ ದೀರ್ಘ ಕಾಲದ ದಿಗ್ಬಂದನದ ಪರಿಣಾಮ ಇನ್ನೂ ಇದೆ. ಅಮೆರಿಕದ ಬಂಧನದಲ್ಲಿಟ್ಟಿದ್ದ '5 ಜನ ಕ್ಯೂಬನ್ ವೀರ'ರನ್ನು ಬಿಡುಗಡೆ ಮಾಡಬೇಕೆಂಬ ಚಳುವಳಿ ಕೊನೆಗೂ ಯಶಸ್ಸು ಕಂಡಿತು.

ಉತ್ತರ ಅಮೆರಿಕ :

ನಿರುದ್ಯೋಗ ಪ್ರಮಾಣ ಅತ್ಯಧಿಕವಿದೆ. ಜೀವನ ವೆಚ್ಚಕ್ಕೆ ಹೋಲಿಸಿದರೆ ವೇತನ ಕಡಿಮೆ ಇದೆ. ಅಮೆರಿಕದಲ್ಲಿ ಶಿಕ್ಷಣ, ಆರೋಗ್ಯ ಸೌಕರ್ಯಗಳು, ಆಯಕಟ್ಟಿನ ಉದ್ದಿಮೆಗಳ ಖಾಸಗೀಕರಣವು ಜನಜೀವನವನ್ನು ದುರ್ಬರಗೊಳಿಸಿವೆ. ಸಾಮಾಜಿಕ ಅಸಮಾನತೆ, ಆಫ್ರೋ ಅಮೆರಿಕನ್ನರಿಗೆ ತಾರತಮ್ಯದ ಜನಾಂಗೀಯ ನೀತಿಗಳು ಮುಂದುವರೆದಿವೆ.

ವರದಿಯ ಮೇಲೆ ಚರ್ಚೆ

ಈ ವರದಿಯ ಮೇಲೆ ಎಲ್ಲಾ ಪ್ರಮುಖ ರಾಷ್ಟ್ರಗಳಾದ ಚೈನಾ, ಡೆನ್ಮಾರ್ಕ್, ಗ್ಯಾಬ್ರಿಯಾ, ಕೊರಿಯಾ, ಇರಾನ್, ಪ್ಯಾಲೇಸ್ಟಿನ್, ಕ್ಯಾಮರೂನ್, ಅಮೆರಿಕಾ, ಗ್ರೀಸ್, ವಿಯೆಟ್ನಾಂ, ಪನಾಮ, ಜಿಂಬಾಬ್ವೆ, ಪೋರ್ಚ್‌ಗಲ್, ಆಸ್ಟ್ರೇಲಿಯಾ, ಬೊಲಿವಿಯಾ, ಈಜಿಪ್ಟ್, ಟುನಿಷಿಯಾ ಇನ್ನೂ ಮುಂತಾದ ದೇಶಗಳಿಂದ ತಲಾ 7 ನಿಮಿಷಗಳ ಕಾಲ 112 ಪ್ರತಿನಿಧಿಗಳು ಮಾತನಾಡಿದರು. ಭಾರತದಿಂದ AITUC, CITU, TUCC, AIUTUC ಯ ಪ್ರತಿನಿಧಿಗಳು ಪಾಲ್ಗೊಂಡಿದ್ದರು. ಎಐಟಿಯುಸಿವಿನಿಂದ ಕಾಂ.ಅಮರ್‌ಜಿತ್ ಕೌರ್ ಮತ್ತು ಸಿಐಟಿಯುವಿನಿಂದ ಕಾಂ.ಕೆ.ಹೇಮಲತಾರವರು ಪಾಲ್ಗೊಂಡಿದ್ದರು. ಮೊದಲನೆ ದಿನದ ಅಧ್ಯಕ್ಷೀಯ ಮಂಡಳಿಯಲ್ಲಿ ಭಾರತದ ಸಿಐಟಿಯುವಿನ ಪ್ರತಿನಿಧಿಯಾಗಿ ಕಾಂ. ಕೆ.ಹೇಮಲತಾರವರಿದ್ದರು. ಒಟ್ಟು ವರದಿಯ ಮೇಲೆ ಮಾತನಾಡಿದರು.

ಸಮ್ಮೇಳನದ ಕಾರ್ಯಕಲಾಪಗಳಲ್ಲಿ ಬಂದು ಮಾತನಾಡಿ ಇನ್ನೊಬ್ಬ ಪ್ರತಿನಿಧಿ ವೇದಿಕೆಯ ಮೇಲೆ ಬರುವ ವೇಳೆಗೆ ಅಂತರರಾಷ್ಟ್ರೀಯ ಕ್ರಾಂತಿಗೀತೆಗಳು, ಸಮೂಹ ನೃತ್ಯಗಳು ನಡೆಯುತ್ತಿದ್ದವು. ಸಮೂಹ ನೃತ್ಯಗಳಲ್ಲಿ ವೇದಿಕೆ ಮೇಲಿರುವ, ವೇದಿಕೆ ಕೆಳಗಿರುವ ಎಲ್ಲಾ ಪ್ರತಿನಿಧಿಗಳು ನೃತ್ಯಕ್ಕೆ ಹೆಜ್ಜೆ ಹಾಕುತ್ತಿದ್ದರು. ಹಾಗಾಗಿ ದಿನಕ್ಕೆ 18 1/2 ಗಂಟೆ ಪ್ರತಿನಿಧಿ ಅಧಿವೇಶನ ನಡೆಯುತ್ತಿದ್ದರೂ ಪ್ರತಿನಿಧಿಗಳ ಪಾಲ್ಗೊಳ್ಳುವಿಕೆಗೆ ಹೆಚ್ಚೇನು ಕಷ್ಟವಾಗುತ್ತಿರಲಿಲ್ಲ.

ಸಿಐಟಿಯುವಿನಿಂದ ಕಾಂ.ಸ್ವದೇಶ್ ದೇವರಾಯ್, ಕಾಂ.ಕೆ.ಹೇಮಲತಾ, ಕಾಂ.ಅಮಿತಾವ್ ಗುಪ್ತಾ, ಕಾಂ. ಎಸ್.ವರಲಕ್ಷ್ಮಿ, ಕಾಂ.ಕರೀಂ ಮತ್ತು ಮುತ್ತು ಸುಂದರಂ ಪಾಲ್ಗೊಂಡಿದ್ದರು. ಅಂಗನವಾಡಿ ಫೆಡರೇಷನ್‌ನಿಂದ ಕಾಂ.ಎ.ಆರ್.ಸಿಂಧು, ಬಿಇಎಫ್‌ಐನಿಂದ ಕಾಂ.ಪ್ರದೀಪ್ ಬಿಸ್ವಾಸ್, ತೈಲ ಸಂಘಟನೆಗಳಿಂದ ಕಾಂ.ನೊಗೇನ್, ಕೇಂದ್ರ ಸೇವೆಯಿಂದ ಕಾಂ. ಗಿರಿರಾಜ್‌ಸಿಂಗ್ ಮತ್ತು ಕಾಂ.ಎಂ.ಎಸ್.ರಾಜ, ವಿದ್ಯುತ್ ಕ್ಷೇತ್ರದಿಂದ ಕಾಂ.ಪ್ರಶಾಂತ್ ಚೌದುರಿ, ಸ್ಟೀಲ್ ವರ್ಕರ್ಸ್ ಸಂಘಟನೆಯಿಂದ ಕಾಂ.ಪ್ರದೀಪ್ ಕುಮಾರ್ ದಾಸ್ ಮತ್ತು ಕಾಂ.ರೆಡ್ಡಿ, ಗ್ರಾಮೀಣ ಬ್ಯಾಂಕ್‌ನಿಂದ ಇಬ್ಬರು ಸಂಗಾತಿಗಳು, ಬಂದರು ಕಾರ್ಮಿಕರ ಸಂಘಟನೆಯಿಂದ ಕಾಂ.ಭೂಷಣ್ ಪಾಟೀಲ, ಸಾರಿಗೆಯಿಂದ ಕಾಂ.ದಿವಾಕರ್ ಮುಂತಾದ 23 ಸಂಗಾತಿಗಳು ಪಾಲ್ಗೊಂಡಿದ್ದರು.

ಅಕ್ಟೋಬರ್ 6 ಮತ್ತು 7ರಂದು ಪ್ರಧಾನ ಕಾರ್ಯದರ್ಶಿ ಹುದ್ದೆಗೆ ಮತ್ತು ಸಮಿತಿಗೆ ಚುನಾವಣೆ ನಡೆಯಿತು. ಪ್ರತಿನಿಧಿ ಅಧಿವೇಶನ ನಡೆಯುವಾಗಲೇ 20 ಜನರು ಹೋಗಿ ಮತ ಚಲಾಯಿಸಲು ಸಮಯ ಕೊಡುತ್ತಿದ್ದರು. ಚುನಾವಣೆಯ ಅಂತಿಮ ಫಲಿತಾಂಶದಲ್ಲಿ ಪ್ರಧಾನ ಕಾರ್ಯದರ್ಶಿಯಾಗಿ ಕಾಂ.ಮಾವ್ರಿಕೋಸ್‌ರವರು ಬಹುಮತದಿಂದ ಆಯ್ಕೆಯಾದರು. ಅಧ್ಯಕ್ಷರಾಗಿ ದಕ್ಷಿಣ ಆಫ್ರಿಕಾದ ಕೊಸೇಟೋ ಸಂಘಟನೆಯ ನಾಯಕರಾದ ಕಾಂ. ಮೈಕ್‌ರವರನ್ನು ಆಯ್ಕೆ ಮಾಡಲಾಯಿತು.

WFTU ನ ಕಿರುನೋಟ :

1945 ಅಕ್ಟೋಬರ್ 3ರಂದು ಪ್ಯಾರೀಸ್‌ನಲ್ಲಿ ಜಗತ್ತಿನ ವಿವಿಧ ದೇಶಗಳ ಕಾರ್ಮಿಕ ಸಂಘಗಳು ಸೇರಿ ವಿಶ್ವ ಕಾರ್ಮಿಕ ಸಂಘಟನೆಗಳ ಫೆಡರೇಷನ್‌ನ್ನು ಸ್ಥಾಪಿಸಲಾಯಿತು. ದಮನಿತ ಶ್ರಮಿಕರ ಅಂತರರಾಷ್ಟ್ರೀಯತೆ ಮತ್ತು ಅಂತರರಾಷ್ಟ್ರೀಯ ಕಾರ್ಮಿಕ ಚಳುವಳಿಯ ಐಕ್ಯತೆ ಸಾಧಿಸುವುದು ಇದರ ಸ್ಥಾಪನೆಯ ಉದ್ದೇಶವಾಗಿದ್ದರಿಂದ ಬೇರೆ ಕಾರ್ಮಿಕ ಸಂಘಗಳಿಗಿಂತ ಗುಣಲಕ್ಷಣಗಳಲ್ಲಿ ಇದು ಭಿನ್ನತೆ ಹೊಂದಿತ್ತು. ಸಂಸ್ಥಾಪನಾ ಅಧಿವೇಶನದ ಪ್ರಧಾನ ಕಾರ್ಯದರ್ಶಿಯಾಗಿ ಆಯ್ಕೆಯಾದ ಲೂಯೀಸ್ ಸೇಲಂರವರು ತಮ್ಮ ಐತಿಹಾಸಿಕ ಭಾಷಣದಲ್ಲಿ WFTUವಿನ ಹುಟ್ಟು ಮತ್ತು ಉದ್ದೇಶ ಕುರಿತು ಅರ್ಥಗರ್ಭಿತವಾಗಿ ವಿವರಿಸಿದ್ದರು. ಜಗತ್ತಿನ ವಸಾಹತುಶಾಹಿ ಹಿಡಿತದಲ್ಲಿದ್ದ ಜನರ ವಿಮೋಚನೆಗೆ ಮತ್ತು ಶಾಂತಿ ಸ್ಥಾಪಿಸಲು, ಫ್ಯಾಸಿಸಂ ಅಪಾಯದ ವಿರುದ್ಧ ಕಾರ್ಮಿಕರ ಜಂಟಿ ಹೋರಾಟಕ್ಕೆ ಉತ್ತಮ ಜೀವನಮಟ್ಟಕ್ಕೆ ಹೋರಾಡಲು ಮತ್ತು ಯುದ್ಧದಾಹಿ ಹಾಗೂ ಶೋಷಕ ಗುತ್ತೇದಾರಿಗಳ ವಿರುದ್ಧ ಸಮರ ಸಾರುವ ಐಕ್ಯತೆಯ ಕೂಸು WFTU.

WFTU-ICFTU ಗಳ ನಡುವಿನ ವ್ಯತ್ಯಾಸ

ಅಂತರರಾಷ್ಟ್ರೀಯ ವರ್ಗ ಸಹಕಾರಿ ಮನೋಭಾವದವರಿಂದಾದ ಬಿರುಕು ಸಾಮ್ರಾಜ್ಯಶಾಹಿ ಪಿತೂರಿಯ ಭಾಗವಾಗಿ 1949ರಲ್ಲಿ ಸಂಭವಿಸಿತು. ಬಂಡವಾಳಶಾಹಿ ಹಿಂಬಾಲಕರೆಲ್ಲರೂ ಸೇರಿ ICF-TU (International Confederation of Trade Union) ಎನ್ನುವುದನ್ನು ಸ್ಥಾಪಿಸಿದರು. WFTU (World Federation of Trade Union) ಪ್ರಪಂಚವನ್ನು ಸಮಾಜವಾದಿ ಹೊಸ ದಿಕ್ಕಿನೆಡೆಗೆ ಕೊಂಡೊಯ್ಯಲು ಬಯಸಿದರೆ ICF-TU ಬಂಡವಾಳಶಾಹಿ ಶೋಷಣಾತ್ಮಕ ಸಾಮಾಜಿಕ ಪದ್ಧತಿಯ ರಕ್ಷಣೆಗೆ ತನ್ನ ಕಾರ್ಯಕ್ರಮಾತ್ಮಕ ಬದ್ಧತೆಯನ್ನು ಹೊಂದಿತು. ಇದು ಇವರೆಡರ ಮೂಲಭೂತ ಭಿನ್ನತೆ. ಸಾಮ್ರಾಜ್ಯಶಾಹಿಗಳ ಜನವಿರೋಧಿ, ಕಾರ್ಮಿಕ ವಿರೋಧಿ, ಕಾರ್ಮಿಕ ಸಂಘ ವಿರೋಧಿಯಾದ ನಿಲುವು ಹಾಗೂ ಹಿಂದುಳಿದ ಮತ್ತು ಅಭಿವೃದ್ಧಿ ಹೊಂದುತ್ತಿರುವ ದೇಶಗಳ ಆರ್ಥಿಕ ಸಾರ್ವಭೌಮತೆ ನಾಶ ಮಾಡುವ ಶಕ್ತಿಗಳ ವಿರುದ್ಧ ಅಮೂಲಾಗ್ರ ಸಮರ ಸಾರುವುದು WFTU ಮಾತ್ರವೇ.

ಆದ್ದರಿಂದಲೇ WFTUವಿಗೆ ಸಂಯೋಜನೆ ಯಾಗುವ ಸಂಘಟನೆಗಳ ಸಂಖ್ಯೆ ದಿನದಿಂದ ದಿನಕ್ಕೆ ಹೆಚ್ಚಾಗುತ್ತಿದೆ.

WFTUವಿನ 16ನೇ ಕಾಂಗ್ರೆಸ್‌ಗೆ ಇದ್ದ ಸದಸ್ಯತ್ವ 7 ಕೋಟಿ 60 ಲಕ್ಷ. ಈಗ 9 ಕೋಟಿ 20 ಲಕ್ಷ-ಕ್ಕೆ ಸದಸ್ಯತ್ವ ಹೆಚ್ಚಾಗಿದೆ. ಹಾಗೇಯೇ ಈ ಕೆಳಗಿನ ಕೈಗಾರಿಕಾವಾರು ಅಂತರರಾಷ್ಟ್ರೀಯ TUIs (Trade Union Internationals) ಮಟ್ಟದ ಸಮಿತಿಗಳನ್ನು ರಚಿಸಲಾಗಿದೆ.

1. ಬ್ಯಾಂಕ್-ಎಲ್‌ಐಸಿ, 2. ಕಟ್ಟಡ, 3. ಶಿಕ್ಷಣದ ರಂಗ, 4. ಇಂಧನ, 5. ಹೋಟೆಲ್-ಪ್ರವಾಸೋಧ್ಯಮ, 6. ಸ್ಟೀಲ್ ಮತ್ತು ಗಣಿ ಉದ್ಯಮ, 7. ನಿವೃತ್ತಿ-ಪಿಂಚಣಿದಾರರು, 8. ಸಾರ್ವಜನಿಕ ಸೇವೆ (ರಾಜ್ಯ, ಕೇಂದ್ರ ಸೇವೆಗಳು) 9. ಸಾರಿಗೆ, 10. ಟೆಕ್ಸ್‌ಟೈಲ್ಸ್, ಆಹಾರ, ಕೃಷಿ, ವಾಣಿಜ್ಯ ವಲಯಗಳಿಗೆ ಸಂಬಂಧಿಸಿದ ಕೈಗಾರಿಕೆಗಳು.

ಪ್ರಧಾನ ಕಾರ್ಯದರ್ಶಿಗಳ ವರದಿ ಮೇಲಿನ ಚರ್ಚೆಗೆ ಉತ್ತರ ನೀಡುತ್ತಾ "ಸಂಘಗಳು ಕಾರ್ಮಿಕ ವರ್ಗದ ಶಾಲೆಗಳಾಗಿರಬೇಕು, ನಾಯಕರು ಅಧಿಕಾರಿಗಳಾಗಬಾರದು, ಸಂಘಗಳೂ ಕಂಪನಿಗಳಲ್ಲಿ, ಹೋರಾಟಗಳ ಕೇಂದ್ರವಾಗಬೇಕು. ವರ್ಗದ ಐಕ್ಯತೆ, ವರ್ಗ ಸಂಘಟನೆಯ ಗುರಿಯಾಗಿರಬೇಕು". 71 ವರ್ಷಗಳ ಇತಿಹಾಸವಿರುವ WFTU ದುಡಿಯುವ ಜನತೆಯ ವೇದಿಕೆ ಮತ್ತು ದುಡಿಯುವ ಜನರ ಕಲ್ಯಾಣಕ್ಕಾಗಿ ಕೆಲಸ ಮಾಡಬೇಕು ಎಂಬುದಾಗಿ ಕರೆ ನೀಡಿದರು.

ಅಕ್ಟೋಬರ್ 8 ರಂದು ರ್‍ಯಾಲಿಯಲ್ಲಿ 'ಅಮಾನ್ತಾ' (ಐಕ್ಯತೆ), 'ಅಸ್ತಾ' (ಕೆಂಪುವಂದನೆ), 'ವಿವಾ' (ಚಿರಾಯುವಾಗಲಿ) ಎಂಬ ಘೋಷಣೆಗಳೊಂದಿಗೆ ಸಮ್ಮೇಳನ ಮುಕ್ತಾಯವಾಯಿತು.

JANASHAKTHI KANNADA VARA PATRIKE NOV 27, 2016 Price : Rs. 10/- RNI No. KARKAN /2006/17926 Posted on every Satuarday
"REGISTERD" Postal Reg. No. RNP/KA/BGS/2078/2016-18 Posted at Bangalore PSO, BG - 560026 Licensed to Post without prepayment License No. WPP-283

ಜೈಲು ಭರೋ : ಸಾವಿರಾರು ಬಂಧನ..... ಪುಟ 8 ರಿಂದ



ಮಂಡ್ಯ : ಜಿಲ್ಲೆಯ ಮಳವಳ್ಳಿ, ಮದ್ದೂರು, ಮಂಡ್ಯ, ಪಾಂಡವಪುರ ಮತ್ತು ನಾಗಮಂಗಲ ತಾಲ್ಲೂಕುಗಳಲ್ಲಿ ಪ್ರತಿಭಟನೆ ಯಶಸ್ವಿಯಾಗಿ ನಡೆದಿದೆ. ಮಳವಳ್ಳಿ ತಾಲ್ಲೂಕಿನ ಪುರಭವನದಿಂದ ಸುಮಾರು 500ಕ್ಕೂ ಹೆಚ್ಚು ಪ್ರತಿಭಟನಾಕಾರರ ಮೆರವಣಿಗೆಯು ಹೊರಟು ತಹಶೀಲ್ದಾರ್ ಕಛೇರಿಗೆ ಮುತ್ತಿಗೆ ಹಾಕಿದ್ದಾರೆ. ಈ ಸಂದರ್ಭದಲ್ಲಿ ಪ್ರತಿಭಟನಾಕಾರರು ಮತ್ತು ಪೊಲೀಸ್ ಸಿಬ್ಬಂದಿಯ ನಡುವೆ ವಾಗ್ವಾದ ಜರುಗಿದ್ದು, ಸಂಘರ್ಷತಾತ್ಮಕ ವಾತಾವರಣ ಉಂಟಾಗಿದ್ದು ಪೊಲೀಸರು ಲಾಠಿ ಚಾರ್ಜ್ ನಡೆಸಿ, ಮುಖಂಡರಾದ ಹನುಮೇಗೌಡ ಮತ್ತು ಶಿವಮಲ್ಲು ಅವರಿಗೆ ತೀವ್ರ ಪೆಟ್ಟಾಗಿದ್ದು ಜಿಲ್ಲಾಸ್ಪತ್ರೆಗೆ ಸೇರಿಸಲಾಗಿದೆ. ನಂತರವೂ ಪ್ರತಿಭಟನೆ ಮುಂದುವರೆದಿದ್ದು, 250ಕ್ಕೂ ಹೆಚ್ಚು ಪ್ರತಿಭಟನಾಕಾರರು ಬಂಧಿಸಿದ್ದಾರೆ.

ಮಂಡ್ಯದಲ್ಲಿ 650ಕ್ಕೂ ಹೆಚ್ಚಿನ ಸಂಖ್ಯೆಯ ಪ್ರತಿಭಟನಾಕಾರರು ರ್‍ಯಾಲಿ ಹೊರಟು ಜಿಲ್ಲಾಧಿಕಾರಿಗಳಿಗೆ ಮನವಿ ಪತ್ರ ಸಲ್ಲಿಸಿದ್ದಾರೆ. ಮದ್ದೂರಿನಲ್ಲಿ 788 ಜನ ಪ್ರತಿಭಟನಾಕಾರರು ತಹಶೀಲ್ದಾರರ ಕಛೇರಿಗೆ ಮುತ್ತಿಗೆ ಹಾಕಿದ್ದು 188 ಜನರನ್ನು ಬಂಧಿಸಿದ್ದಾರೆ.

ನಾಗಮಂಗಲ ಮತ್ತು ಪಾಂಡವಪುರ ತಾಲ್ಲೂಕುಗಳಲ್ಲಿ 125 ಮತ್ತು 150 ಜನರು ಪ್ರತಿಭಟನೆಯಲ್ಲಿ ಭಾಗವಹಿಸಿದ್ದಾರೆ. ತಹಶೀಲ್ದಾರ್ ರವರಿಗೆ ಮನವಿ ಪತ್ರ ಸಲ್ಲಿಸಿದ್ದಾರೆ.

ತುಮಕೂರಿನಲ್ಲಿ ಪ್ರತಿಭಟನೆ ಯಶಸ್ವಿಯಾಗಿ ನಡೆದಿದ್ದು ರ್‍ಯಾಲಿಯ ಮುಖಾಂತರ ಜಿಲ್ಲಾಧಿಕಾರಿಗಳ ಕಛೇರಿಗೆ ತೆರಳಿದ ಪ್ರತಿಭಟನಾಕಾರರು ಕಛೇರಿ ಎದುರು ಪ್ರತಿಭಟನೆ ನಡೆಸಿದ್ದಾರೆ. ಸುಮಾರು 325 ಜನ ಪ್ರತಿಭಟನಾಕಾರರು ಬಂಧಕ್ಕೆ ಒಳಗಾಗಿದ್ದಾರೆ.

ರಾಯಚೂರು : ಜಿಲ್ಲೆಯ ನಾಲ್ಕು ತಾಲ್ಲೂಕುಗಳಲ್ಲಿ ಪ್ರತಿಭಟನೆ ನಡೆದಿದ್ದು, ರಾಯಚೂರಿನಲ್ಲಿ 700 ಜನ ಭಾಗವಹಿಸಿದ್ದರು. 100 ಜನ ಬಂಧನಕ್ಕೆ ಒಳಗಾಗಿದ್ದಾರೆ. ದೇವದುರ್ಗದಲ್ಲಿ 150, ಲಿಂಗಸಗೂರು – 350, ಸಿಂಧನೂರಿನಲ್ಲಿ – 400 ಜನರು ಬಂಧನಕ್ಕೆ ಒಳಗಾಗಿದ್ದು, 700 ಜನರು ಪ್ರತಿಭಟನೆಯಲ್ಲಿ ಭಾಗವಹಿಸಿದ್ದರು.

ಉತ್ತರ ಕನ್ನಡ : ಕಾರವಾರದಲ್ಲಿ ಪ್ರತಿಭಟನೆ ನಡೆದಿದ್ದು 150 ಜನ ಬಂಧನಕ್ಕೆ ಒಳಗಾಗಿದ್ದಾರೆ. ಅಂಕೋಲಾದಲ್ಲಿ ಸುಮಾರು 200 ಕ್ಕೂ ಹೆಚ್ಚಿನ ಜನ ಪ್ರತಿಭಟನೆಯಲ್ಲಿ ಭಾಗವಹಿಸಿದ್ದರು. ಮುಖಂಡರಾದ ಎಸ್.ವೈ.ಗುರುಶಾಂತ್, ಶಾಂತರಾಂ ನಾಯಕ್, ಯಮನಾ ಗಾಂವ್ಕರ್ ಮತ್ತಿತರರು ಭಾಗವಹಿಸಿದ್ದರು.

ಮೈಸೂರು : ಮೂರು ತಾಲ್ಲೂಕುಗಳಲ್ಲಿ ಪ್ರತಿಭಟನೆ ನಡೆದಿದ್ದು, ತಹಶೀಲ್ದಾರರಿಗೆ ಮನವಿ ಸಲ್ಲಿಸಿದ್ದಾರೆ. ಮೈಸೂರು – 50 ಜನ, ಹುಣಸೂರು – 150 ಜನ, ಹೆಚ್.ಡಿ.ಕೋಟೆ – 100 ಜನ ಪ್ರತಿಭಟನಾಕಾರರು ಭಾಗವಹಿಸಿದ್ದಾರೆ.

ವಿಜಯಪುರದಲ್ಲಿ ಪ್ರತಿಭಟನೆ ನಡೆದಿದ್ದು, ಸುಮಾರು 2000 ಜನ ಜಿಲ್ಲಾಧಿಕಾರಿ ಕಛೇರಿಯನ್ನು ರೈತ, ಕೂಲಿಕಾರರು, ಕಾರ್ಮಿಕರು ಮುತ್ತಿಗೆ ಹಾಕಿದ್ದಾರೆ. ಸುಮಾರು 300 ಜನರನ್ನು ಬಂಧಿಸಿದ್ದಾರೆ.

ಕೊಪ್ಪಳ : ಜಿಲ್ಲೆಯ ಗಂಗಾವತಿಯಲ್ಲಿ ಪ್ರತಿಭಟನೆ ನಡೆಸಿದ್ದು 2500 ಜನರು ಜಿಲ್ಲಾಧಿಕಾರಿ ಕಛೇರಿ ಮುಂಭಾಗ ಪ್ರತಿಭಟನೆ ನಡೆಸಿದ್ದಾರೆ. 500 ಜನರನ್ನು ಬಂಧಿಸಿದ್ದಾರೆ.

ದಾವಣಗೆರೆ : ನಗರದಲ್ಲಿ ಮೆರವಣಿಗೆ ಹೊರಟ 500 ಜನ ಪ್ರತಿಭಟನಾಕಾರರು ಜಿಲ್ಲಾಧಿಕಾರಿ ಕಛೇರಿಗೆ ಮುತ್ತಿಗೆ ಹಾಕಿದ ಪ್ರತಿಭಟನಾಕರರು ಜಿಲ್ಲಾಧಿಕಾರಿರವರನ್ನು ಕರೆಸಲು ಬೇಡಿಕೆ ಇಟ್ಟಿದ್ದರು. ಅವರ ಬದಲಿಗೆ ಬಂದ ಎ.ಸಿ. ಅವರನ್ನು ವಾಪಸ್ಸು ಕಳುಹಿಸಿ ಜಿಲ್ಲಾಧಿಕಾರಿಯವರನ್ನು ಸ್ಥಳಕ್ಕೆ ಕರೆಯಿಸಿಕೊಳ್ಳು ಯಶಸ್ವಿಯಾಗಿದ್ದಾರೆ. ಪ್ರತಿಭಟನಾಕಾರರ ಧರಣಿಗೆ ಮಣಿದ ಜಿಲ್ಲಾಧಿಕಾರಿಯು ಡಿಸೆಂಬರ್ 07ರಂದು ಅಧಿಕಾರಿಗಳ ಜೊತೆ ಸಭೆ ಕರೆಯಲು ದಿನಾಂಕವನ್ನು ಗೊತ್ತು ಮಾಡಿಸಿದ್ದಾರೆ.

ಚಿತ್ರದುರ್ಗ : ಜಿಲ್ಲೆಯ ಚಳ್ಳಕೆರೆ, ಮೊಳಕಾಲ್ಮೂರು, ಹಿರಿಯೂರು ತಾಲ್ಲೂಕುಗಳಲ್ಲಿ ಪ್ರತಿಭಟನೆ ನಡೆದಿದೆ. ಕ್ರಮವಾಗಿ 400, 200, 150 ಜನರು ಬಂಧನಕ್ಕೆ ಒಳಗಾಗಿದ್ದಾರೆ.

ಶಿವಮೊಗ್ಗ : ಜಿಲ್ಲಾಧಿಕಾರಿ ಕಛೇರಿ ಮುಂಭಾಗ ಪ್ರತಿಭಟನೆ ನಡೆಸಿದ್ದು, ಮನವಿ ಪತ್ರ ನೀಡಲಾಗಿದೆ. ಸುಮಾರು 100 ಜನರು ಭಾಗವಹಿಸಿದ್ದರು.

ಬೆಂಗಳೂರು ಗ್ರಾಮಾಂತರ : ದೊಡ್ಡಬಳ್ಳಾಪುರದಲ್ಲಿ ಪ್ರತಿಭಟನೆ ನಡೆದಿದೆ. 200 ಜನರು ಭಾಗವಹಿಸಿದ್ದಾರೆ.

ಬೀದರ್ : ಜಿಲ್ಲೆಯ ಹುಮ್ನಾಬಾದ್, ಬಸವ ಕಲ್ಯಾಣ, ಹೌರಾದ್, ಬಾಲ್ಕಿ ತಾಲ್ಲೂಕುಗಳಲ್ಲಿ ಪ್ರತಿಭಟನೆ ನಡೆದಿದೆ. ಕ್ರಮವಾಗಿ 500, 200, 200, 200 ಪ್ರತಿಭಟನಾಕಾರರು ಭಾಗವಹಿಸಿದ್ದರು. ತಹಶೀಲ್ದಾರರಿಗೆ ಮನವಿ ಪತ್ರವನ್ನು ಸಲ್ಲಿಸಲಾಗಿದೆ.

ಬೆಳಗಾವಿ ಜಿಲ್ಲೆಯ ಸವದತ್ತಿಯಲ್ಲಿ ತಹಶೀಲ್ದಾರ್ ಕಛೇರಿ ಮುಂಭಾಗ ಧರಣಿ ನಡೆಸಿ ರಾಜ್ಯ ಸರ್ಕಾರಕ್ಕೆ ಮನವಿ ಸಲ್ಲಿಸಿದ್ದಾರೆ.

ಹಾಗೆಯೇ, ಕೊಡಗು, ಗದಗ, ಹಾವೇರಿ, ಮತ್ತಿತರ ಜಿಲ್ಲೆಗಳಲ್ಲಿ ಪ್ರತಿಭಟನೆಗಳು ನಡೆದು ಬಂಧಕ್ಕೆ ಒಳಗಾಗಿದ್ದಾರೆ.





















JANASHAKTHI KANNADA VARA PATRIKE: Printed by **G.V.SRIRAMA REDDY**, EMS Bhavana, No.37/A, 8th Cross, Mahalakshmi Layout, BANGALORE-560086 Published by: **G.V.SRIRAMA REDDY** EMS Bhavana, No.37/A, 8th Cross, Mahalakshmi Layout, BANGALORE-560086, Karnataka on behalf of / owned by **COMMUNIST PARTY OF INDIA (MARXIST)** and **Printed at : Kriya Prakashana,** No. 12, 18th Cross, Sampangirama Nagar, Bangalore 560027 Karnataka(State). and Published at BANGALORE. EMS Bhavana, No.37/A, 8th Cross, Mahalakshmi Layout, BANGALORE-560086 . Editor **G.V.SRIRAMA REDDY** EMS Bhavana, No.37/A, 8th Cross, Mahalakshmi Layout, BANGALORE-560086 Editor : **G.V.SRIRAMA REDDY**